# ಕನ್ನಡ ಕಟ್ಟಿದವರು ಮಾಲೆ

# ಪದ್ಮಶ್ರೀ

# ಬಿ. ಶಿವಮೂರ್ತಿಶಾಸ್ತ್ರಿಗಳು

---

ಪ್ರಧಾನ ಸಂಪಾದಕರು

**ಡಾ. ಸಿದ್ದಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**

## ಪದ್ಮಶ್ರೀ

## ಬಿ. ಶಿವಮೂರ್ತಿಶಾಸ್ತ್ರಿಗಳು

ಬಿ. ಸಿದ್ಧಗಂಗಯ್ಯ ಕಂಬಾಳು

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು-೫೬೦ ೦೦೨

**APADMASHREE B.SHIVAMURTHYSHASTRIGALU** A Monograph on B. Shivamurthyshastrigalu in Kannada Written by B. Siddagangayya Kambalu Published By B.H Mallikarjun, Administrative Officer, Kannada Pustaka Pradhikara, Kannada Bhavana, J.C.Road, Bengaluru -560002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012

Pages : Xvi +81

Copies:1000

Price: 50.00

ಮೊದಲ ಮುದ್ರಣ : ೨೦೧೨

ಪುಟಗಳು : Xvi + ೮೧

ಪ್ರತಿಗಳು : ೧೦೦೦

ಬೆಲೆ : ರೂ. ೫೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:

ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.

ಆಡಳಿತಾಧಿಕಾರಿಗಳು

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಭವನ,

ಜೆ.ಸಿ.ರಸ್ತೆ ಬೆಂಗಳೂರು-೫೬೦ ೦೦೨

ಮುದ್ರಕರು:

ಮೆ॥ ಪ್ರಿಂಟ್ ಪಾರ್ಕ್ ೧೪೯೬/೪, ೩ನೇ ಅಡ್ಡರಸ್ತೆ,

ಮರಿಯಪ್ಪನಪಾಳ್ಯ, ಶ್ರೀರಾಂಪುರಂ ಅಂಚೆ,

ಬೆಂಗಳೂರು-೫೬೦ ೦೨೧ ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

## ಡಾ. ಸಿದ್ಧಲಿಂಗಯ್ಯ

ಸಂಪಾದಕರು

## ಡಾ. ಕರೀಗೌಡ ಬೀಚನಹಳ್ಳಿ


## ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು


---

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ “ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

**(ಡಾ. ಸಿದ್ಧಲಿಂಗಯ್ಯ)**

ಅಧ್ಯಕ್ಷರು

## ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ, ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಈ ನಿಟ್ಟಿನಲ್ಲಿ "ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ, ಕೌಟುಂಬಿಕ ಹಿನ್ನೆಲೆ - ವಿವರಗಳನ್ನು ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿ- ಹೋರಾಟಗಳು, ಸಂಘಟನೆಗಳು, ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಭಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬರೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರ ತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡ ಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಪುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯಗಳಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಪುಟಗೊಳ್ಳುತ್ತವೆ.

ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯು ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಳಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ದಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ, ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು - ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ - ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗೂ ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

**ಡಾ. ಕರೀಗೌಡ ಬೀಚನಹಳ್ಳಿ**

ಸಂಪಾದಕ

# ಲೇಖಕರ ಮಾತು

ಪ್ರಾತಃಸ್ಮರಣೀಯರಾದ... ಪ್ರೊ. ಡಿ.ಎಲ್. ನರಸಿಂಹಾಚಾರ್ ಮತ್ತು ಅ.ನ. ಕೃಷ್ಣರಾಯರಂಥ ಘನ ವಿದ್ವಾಂಸರುಗಳು ನಿಷ್ಕಲ್ಮಶ ಮನಸ್ಸಿನಿಂದ ಬಿ. ಶಿವಮೂರ್ತಿಶಾಸ್ತ್ರಿಗಳನ್ನು ಪ್ರಶಂಸೆ ಮಾಡಿರುವ ಲೇಖನಗಳನ್ನು ಓದಿದ ನನಗೆ ಶಾಸ್ತ್ರಿಗಳ ಬಗ್ಗೆ ಬರೆಯಲು ಹಿಂಜರಿಕೆಯುಂಟಾಯಿತು. ವಿದ್ವಾಂಸರೊಬ್ಬರ ವ್ಯಕ್ತಿ ಚಿತ್ರಣ ಬರೆಯುವುದು ಸರಳವಲ್ಲ. ಹೂರಣವಿಲ್ಲದ ಕಣಕದಂತೆ ಬರೀ ಹೊಗಳಿಕೆಯೇ ಬರಹವನ್ನು ಆವರಿಸಿಕೊಳ್ಳುವ ಅಪಾಯವುಂಟಾಗಿ ಬಿಡುತ್ತದೆ. ಶಾಸ್ತ್ರಿಗಳ ಗ್ರಂಥಕ್ಕೆ ಡಿ.ಎಲ್.ಎನ್ ಪ್ರಸ್ತಾವನೆ ಬರೆದರು ಆ ಬರಹವೇ ಒಂದೆ ಮಹಾಪ್ರಬಂಧಕ್ಕೆ ಆಕಾರವಾಗುವಷ್ಟು ಮಾಹಿತಿಯನ್ನೊಳಗೊಂಡಿದೆ. ಶಾಸ್ತ್ರಿಗಳ ಬಗ್ಗೆ ಏನೇ ಬರೆದರೂ ಡಿ.ಎಲ್.ಎನ್. ಅವರ ಮಾತುಗಳನ್ನೇ ಪುನರುಚ್ಚರಿಸಬೇಕಾಗುತ್ತದೆ. ಡಿ.ಎಲ್.ಎನ್. ಲೇಖನದಲ್ಲಿ ಶಾಸ್ತ್ರಿಗಳ ಪಾಂಡಿತ್ಯದ ಪರಿಚಯವಿದ್ದರೆ. ಅ.ನ.ಕೃ. ರವರ ಲೇಖನದಲ್ಲಿ ಶಾಸ್ತ್ರಿಗಳ ಗುಣ ಸ್ವಭಾವದ ವಿವರಣೆಯಿದೆ. ಈ ಇಬ್ಬರು ಮಹನೀಯರು ಕನ್ನಡ ಸಾಹಿತ್ಯದ ದಿಗ್ಗಜರುಗಳು.

'ಶಾಸ್ತ್ರಿಗಳು, ಜೀವನಸ್ಮೃತಿಗಳು' ಎಂಬ ಶೀರ್ಷಿಕೆಯಿಟ್ಟು ತಮ್ಮ ಜೀವನ ಚರಿತ್ರೆಯನ್ನು ಬರೆದರು. ಅಲ್ಲಿ; ಅವರ ಬದುಕು ಬರಹಗಳ ಸಂಕ್ಷಿಪ್ತ ಪರಿಚಯ ಮಾತ್ರ ದೊರಕುತ್ತದೆ. 1974ರ ಹೊತ್ತಿಗೆ ಶಾಸ್ತ್ರಿಗಳ ನೆನಪಿನ ಶಕ್ತಿ ಕುಂದುತ್ತಾ ಬಂದಿತ್ತು. ಕೈಲಾಸ ವಾಸಿಗಳಾಗುವ ಮುಂಚೆ (ಎರಡು ವರ್ಷಗಳಷ್ಟು) ಬರೆದು ಪ್ರಕಟಿಸಿದ "ಜೀವನ ಚರಿತ್ರೆ" ಸಮಗ್ರವಲ್ಲ ಎನ್ನಿಸುತ್ತದೆ. ಶಾಸ್ತ್ರಿಗಳು ಕನ್ನಡ ಶೀಘ್ರಲಿಪಿಕಾರನನ್ನು ನೇಮಿಸಿಕೊಂಡು ತಮ್ಮ ಜೀವನದ ಸವಿ ನೆನಪುಗಳನ್ನು ಸುಖ-ದುಃಖಗಳನ್ನು ಹೇಳುತ್ತಾ ಬರೆಯಿಸಬಹುದಾಗಿತ್ತು. ಆಪ್ತರು ಬಲವಂತ ಮಾಡಿದ್ದರಿಂದ 'ಜೀವನಸ್ಮೃತಿಗಳು' ಪ್ರಕಟವಾಯಿತು.

ಶಿವಮೂರ್ತಿಶಾಸ್ತ್ರಿಗಳ ಪರಿಚಯಾತ್ಮಕವಾದ ಕಿರುಹೊತ್ತಗೆ ಬರೆದು ಕೊಡಬೇಕೆಂದು ಕನ್ನಡ ಪುಸ್ತಕ ಪ್ರಾಧಿಕಾರದಿಂದ ನನಗೆ ಪತ್ರ ಬಂದಾಗ; ಬರೆಯಲು ಒಪ್ಪಿಕೊಂಡು ಅದನ್ನು ಯೋಗಾ ಯೋಗ ಎಂದುಕೊಂಡೆ, ಕೆಲವು ಸಂದರ್ಭಗಳಲ್ಲಿ (ತುಮಕೂರಿನಲ್ಲಿ ನಡೆದ ಶತಮಾನೋತ್ಸವ ಸಮಾರಂಭ) ಶಾಸ್ತ್ರಿಗಳನ್ನು ಕುರಿತು ಉಪನ್ಯಾಸ ಮಾಡುವ ಅವಕಾಶ ದೊರೆತಿತ್ತು. ಆಗ ಮಾಡಿಕೊಂಡ ಟಿಪ್ಪಣಿಗಳು ಇದೀಗ ಉಪಯೋಗಕ್ಕೆ ಬಂದವು. ಗೆಳೆಯ ಶಿವಪ್ರಕಾಶರ ಜೊತೆ ಆಗಿಂದಾಗ್ಗೆ ರಂಗಸ್ವಾಮಿ ಗುಡಿ ಬೀದಿಯಲ್ಲಿದ್ದ ಮನೆಗೆ ಹೋಗಿ ಶಾಸ್ತ್ರಿಗಳನ್ನು ಪರಿಚಯಮಾಡಿಕೊಂಡಿದ್ದೆ, ಆಮೇಲೆ ರಾಜಾಜಿನಗರಕ್ಕೆ ಬಂದ ಮೇಲೆ ಹಲವಾರು ಸಲ ಅವರ ಮನೆಗೆ ಹೋಗಿ ಶಾಸ್ತ್ರಿಗಳ ಜೊತೆ ಸಾಹಿತ್ಯದ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದೆ. ಆ ಸಂದರ್ಭಗಳು ನನ್ನ ಜೀವಮಾನದ ಸಾರ್ಥಕ ಕ್ಷಣಗಳೆಂದುಕೊಳ್ಳುತ್ತೇನೆ. ಕಿರು ಹೊತ್ತಗೆ ಇದನ್ನು ಮುದ್ರಣ ಪೂರ್ವದಲ್ಲಿ ತಿದ್ದಿಕೊಟ್ಟ ಮತ್ತು ಸಲಹೆಗಳನ್ನಿತ್ತ ಪ್ರೊ. ಟಿ.ಎಸ್. ರಾಜಪ್ಪನವರಿಗೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಕನ್ನಡ ಪುಸ್ತಕ ಪ್ರಾಧಿಕಾರದ ಮಾನ್ಯ ಅಧ್ಯಕ್ಷರಾದ ಕವಿ ಡಾ. ಸಿದ್ಧಲಿಂಗಯ್ಯನವರು ಈ ಕೃತಿ ರಚನೆಗೆ ಅವಕಾಶ ಕೊಟ್ಟಿದ್ದಕ್ಕೆ ನಾನವರಿಗೆ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

**ಬಿ. ಸಿದ್ಧಗಂಗಯ್ಯ ಕಂಬಾಳು.**

---

## ಪರಿವಿಡಿ

೧. ಗಾಂಧಿಜೀಯವರ ಪ್ರಭಾವ

೨. ಕರ್ನಾಟಕ ಏಕೀಕರಣ

೩. ಸಂಗೀತದಿಂದ ಸಾಹಿತ್ಯದೆಡೆಗೆ

೪. ಶಾಸ್ತ್ರಿಗಳು ಕಂಡ ಮಿರ್ಜಾಇಸ್ಮಾಯಿಲ್

೫. ಮಹಾಸಂಕಲ್ಪ

೬. ಶರಣ ಸಾಹಿತ್ಯ

೭. ಸಂಶೋಧನೆಯ ಹಾದಿಯಲ್ಲಿ

೮. 'ಗದ್ಯಶೈಲಿ'

೯. 'ವೀರಶೈವ ಸಮನ್ವಯ - ಸಾಹಿತಿಗಳಾಗಿ'

೧೦. ಸಾಹಿತ್ಯ ಪರಿಷತ್ತಿನಲ್ಲಿ

೧೧. ಪದಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳಿಗೆ ಸಂದ ಬಿರುದುಗಳು ಪ್ರಶಸ್ತಿಗಳು

೧೨. ಬಿ. ಶಿವಮೂರ್ತಿಶಾಸ್ತ್ರಿಗಳ ಗ್ರಂಥಗಳು

೧೩. ಸಂಪಾದಿತ ಗ್ರಂಥಗಳು

೧೪. ಬದುಕಿನ ಪ್ರಮುಖ ಘಟ್ಟಗಳು

'ಪಂಡಿತರತ್ನಂ' ಬಿ. ಶಿವಮೂರ್ತಿಶಾಸ್ತ್ರಿಗಳನ್ನು ಕುರಿತು ಬರೆಯುವಾಗ ಕವಿ ಕಾಳಿದಾಸನ ನುಡಿಯೊಂದು ಮನಸ್ಸಿಗೆ ಬಂದು ಹೋಯಿತು. ರಘುವಂಶವೆಂಬ ಮಹಾಸಾಗರವನ್ನು ದಾಟಲು ಕಾವ್ಯವೆಂಬ ಪುಟ್ಟ ದೋಣಿಯಿಂದ ಸಾಧ್ಯವೇ? ಆತನ ಪ್ರಶ್ನೆಗೆ ಆತನೇ ಉತ್ತರಿಸಿ ಮಹಾಕಾವ್ಯ ರಘುವಂಶವನ್ನು ಬರೆದು ಸಾಧ್ಯಮಾಡಿಸಿದ; ಆನೆಯನ್ನು ಕನ್ನಡಿಯಲ್ಲಿ ಅಡಗಿಸುವಾಗ ಮಹಾಗಾತ್ರದ ಆನೆ ಅಂಗೈಗೆ ಅಮರವಂತಾಗುತ್ತದೆ. ಅಸಾಧಾರಣ ವ್ಯಕ್ತಿತ್ವವುಳ್ಳ ಮಹನೀಯರನ್ನು ಬರಹಕ್ಕೆ ಅಳವಡಿಸಿಕೊಳ್ಳುವಾಗ ಸಂಕ್ಷಿಪ್ತತೆ, ಸಂಗ್ರಹತ್ವಗಳು ನಮ್ಮ ನೆರವಿಗೆ ಬಂದೇ ಬರುತ್ತವೆ. ಅದೇ ಸಂಕಲ್ಪದಿಂದ ಈ ಕಿರು ಹೊತ್ತಗೆಯಲ್ಲಿ ಪಾಂಡಿತ್ಯದ ದಡೂತಿ ಮನುಷ್ಯ, ಸರಸ ಮಾತಿನ ಕೀರ್ತನಕಾರ, ಕರ್ನಾಟಕದ ಏಕೀಕರಣದ ದಂಡಯಾತ್ರೆಯಲ್ಲಿ ದೇಶದ ಉದ್ದಗಲಗಳನ್ನು ದಾಪು ಹಾಕಿ ಅಳೆದು ಕೂಡಿಸಿದ; ಶಿರೋಭೂಷಣ ಮೈಸೂರು ಜರಿಪಥಟದಿಂದ ಸಂಭ್ರಮಿಸಿದ ಸಾರ್ಥಕ ಬದುಕಿನ ಜಂಗಮ ಬಿ. ಶಿವಮೂರ್ತಿ ಶಾಸ್ತ್ರಿಗಳನ್ನು ನೆನೆಯಬಯಸುತ್ತೇನೆ.

ದಾಸನ ಮಾತು ಮಾತಲ್ಲ ದೋಸೆ ಊಟ ಊಟವಲ್ಲ ಎಂಬುದೊಂದು ಕನ್ನಡದ ಹಳೆಯ ಗಾದೆ. ತೀರದ ಸಾಲವನ್ನು ಬದಲಾಯಿಸಬಹುದು ಗಾದೆ ಮಾತನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬ ಹೇಳಿಕೆಯನ್ನು ಬದಲಾಯಿಸಿ 'ದಾಸನ ಮಾತೇ ಮಾತು, ದೋಸೆ ಊಟವೇ ಊಟ' ಎಂಬಂತೆ ನಡೆದುಕೊಂಡ ಸಾಹಸ ಶಾಸ್ತ್ರಿಗಳದ್ದು. ಅದೆಂಥ ಜನರ ಸಭೆಯೇ ಆಗಲಿ ಚುರುಕು ಮಾತಿನ ಮೋಡಿಯಿಂದ ಚಪ್ಪಾಳೆ ಗಿಟ್ಟಿಸಿಬಿಡುತ್ತಿದ್ದರು. ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ವೇಷ ನುಡಿಯ ವೈಭವವನ್ನು ಪ್ರಕಟಿಸುವ ಭಾಷೆಯಿಂದ ಸಭಿಕರ ಮನಸ್ಸುಗಳನ್ನು ಅಯಸ್ಕಾಂತದಂತೆ ಸೆಳೆದು ವಿಚಾರಪರಿಧಿಗೆ ಸೇರಿಸಿಕೊಂಡು ಬಿಡುತ್ತಿದ್ದರು.

ಕನ್ನಡ ದೇಶದ ಯಾವುದೇ ಭಾಗದ ಸಾಂಸ್ಕೃತಿಕ ಇತಿಹಾಸ, ರಾಜಕೀಯ ಇತಿಹಾಸ, ಕವಿಚರಿತ್ರೆ, ಸ್ಥಳಪುರಾಣ ಶಾಸ್ತ್ರಿಗಳ ತುದಿ ನಾಲಿಗೆಯಲ್ಲಿಯೇ ಇರುತ್ತಿತ್ತು. ಅವರನ್ನು ಸಮಾರಂಭದ ಭಾಷಣಕ್ಕೆ ಕರೆದರೆ ಸಭಿಕರಿಗೆ ಆ ಸ್ಥಳದ ಸಾಂಸ್ಕೃತಿಕ ಮಹತ್ವವನ್ನು ಹೇಳಿ ಪುಳಕಗೊಳಿಸುತ್ತಿದ್ದರು. ಅವರ ಪ್ರತಿವಾಕ್ಯವೂ ಆಧಾರ ಸಹಿತವಾದ ಪ್ರಮಾಣಗಳಿಂದ ರಂಜನೀಯವಾಗಿರುತ್ತಿತ್ತು.

ಸಾವಿರದ ಒಂಬೈನೂರು ಅರವತ್ತನಾಲ್ಕರ ಇಸವಿಯಿರಬಹುದು, ನನ್ನೂರು ಕಂಬಾಳಿಗೆ ಹೊಂದಿಕೊಂಡಿದ್ದ ಶಿವಗಂಗಾ ಕ್ಷೇತ್ರದಲ್ಲಿ ಪ್ರೌಢಶಾಲೆಯೊಂದರ ಪ್ರಾರಂಭೋತ್ಸವ ನಡೆದಿತ್ತು. ಸಭೆಯಲ್ಲಿ ಆಗ್ಗೆ ಸಚಿವ ಬಿ.ಡಿ.ಜತ್ತಿಯವರು ಇದ್ದರು. ಶಾಸ್ತ್ರಿಗಳು ಭಾಷಣಕ್ಕೆ ನಿಂತರು. ಸಭೆ ಮೌನವಹಿಸಿತು. ಗುಬ್ಬಿ ಮಲ್ಲಣಾರ್ಯರು ಹದಿನಾರನೇ ಶತಮಾನದ ಪೂರ್ವಾರ್ಧದಲ್ಲಿ ವೀರಶೈವಾಮೃತ ಮಹಾಪುರಾಣವನ್ನು ರಚಿಸಿದ ಇತಿಹಾಸವನ್ನು ಪ್ರಸ್ತಾಪ ಮಾಡುತ್ತಾ ಕಂಬಾಳಿನ ಶರಣೆ ಜ್ಯೋತಿಯಮ್ಮ ಎಂಬುವು ಮಲ್ಲಣಾರ್ಯರ ಕಾರ್ಯರಚನೆಗೆ ನೆರವಾದ ಕಥೆಯನ್ನು ಹೇಳಿದರು. ಗುಬ್ಬಿಮಲ್ಲಣಾರ್ಯರಿಂದ ವೀರಶೈವ ವಿಶ್ವಕೋಶವನ್ನು ಬರೆಯಿಸಿದ ಕೀರ್ತಿ ಈ ನೆಲದ್ದು ಎಂದರು. ಕಾವ್ಯದ ಕೆಲವು ಪದಗಳನ್ನು ಹಾಡಿದರು. ಅಲ್ಲಿದ್ದ ಸಭಿಕರಲ್ಲಿ ಯಾರೊಬ್ಬರಿಗೂ ಈ ಸಂಗತಿ ಗೊತ್ತಿರಲಿಲ್ಲ. ಎರಡು ಗಂಟೆ ನಿರರ್ಗಳವಾಗಿ ಶಿವಗಂಗೆಯ ಧಾರ್ಮಿಕ ಇತಿಹಾಸವನ್ನು ಬಿಡಿಸಿ, ಬಿಡಿಸಿ ಹೇಳಿದರು. ಅವರ

ಮಾತಿಗೆ ನಾನು ಮರುಳಾಗಿ ಹೋಗಿದ್ದೆ. ಓದುವುದಾದರೆ ಕನ್ನಡ ಸಾಹಿತ್ಯವನ್ನು ಓದಬೇಕು ಎಂಬ ಪ್ರೇರಣೆಯುಂಟಾಯಿತು. ನನ್ನ ತಂದೆ ಕಂಬಾಳು, ಸಿ. ಬಸಪ್ಪನವರು ಶಿವಮೂರ್ತಿಶಾಸ್ತ್ರಿಗಳ ಅಭಿಮಾನಿಯಾಗಿದ್ದರು. ಊರಿನ ಛೇರ್ಮನ್ ಆದ್ದರಿಂದ ಪದೇ ಪದೇ ರಾಜಧಾನಿಗೆ ಹೋಗಿಬರುತ್ತಿದ್ದರು, ಬರುವಾಗಲೆಲ್ಲ ಶಾಸ್ತ್ರಿಗಳು ಪ್ರಕಟಿಸುತ್ತಿದ್ದ ಶರಣ ಸಾಹಿತ್ಯ ಸಂಚಿಕೆಗಳನ್ನು ತರುತ್ತಿದ್ದರು. ಓದಿನ ಆಸಕ್ತಿಯನ್ನು ರೂಢಿಸಿಕೊಂಡ ನನ್ನ ಮನಸ್ಸು ಶರಣ ಸಾಹಿತ್ಯ ಸಂಚಿಕೆಗಳನ್ನು ಜೋಪಾನ ಮಾಡಬೇಕೆಂಬ ಸಂಕಲ್ಪಕ್ಕೊಳಗಾಯಿತು.

ಕವಿಗಳು ಬಡವರಾದರೂ ಬುದ್ಧಿವಂತರಿರುತ್ತಾರೆ ತಮ್ಮನ್ನು ಕಾಡುವ ಬಡತನವನ್ನು, ಅದರಿಂದಾಗುವ ಪರಿಭವಗಳನ್ನು ಸಾಂತ್ವನಗೊಳಿಸಿಕೊಳ್ಳುವ ವಿಶೇಷ ಗುಣಕ್ಕೆ ಒಂದು ಪರಂಪರೆಯೇ ಇರುವಂತಿದೆ. ಪ್ರಾಚೀನ ಕವಿಯೊಬ್ಬನ ಆತ್ಮ ಸಾಂತ್ವನದ ನುಡಿಗಳಿವು;

ವಿದ್ವತ್ತ್ವಂಚ ನೃಪತ್ವಂಚ ನೈವತುಲ್ಯಂ ಕದಾಚನ
ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ಸರ್ವತ್ರ ಪೂಜ್ಯತೇ||

ಶಾಸ್ತ್ರಿಗಳು ತಮ್ಮ ಕೀರ್ತನದ ನಡುವೆ ಆಗಾಗ್ಗೆ ಹೇಳಿಕೊಳ್ಳುತ್ತಿದ್ದ ಶ್ಲೋಕವಿದು. ಶಾಸ್ತ್ರಿಗಳಂಥ ವಿದ್ವಾಂಸರು ಇಂತಹ ಸಮಾಧಾನಕರ ಮಾತುಗಳನ್ನು ತಮಗೆ ತಾವೇ ಹೇಳಿಕೊಳ್ಳದಿದ್ದರೆ ಬದುಕಿನ ತಾಪತ್ರಯಗಳನ್ನು ಸಹಿಸಿಕೊಳ್ಳಲು ಸಾಧ್ಯವಾಗುತಿರಲಿಲ್ಲ. ವಿದ್ವತ್ತು ರಾಜಪದವಿ ಎರಡೂ ಸಮಾನವಲ್ಲ ರಾಜನಾದರೋ ತನ್ನ ದೇಶದಲ್ಲಿ ಮಾತ್ರ ಗೌರವ ಪಡೆದರೆ ವಿದ್ವಾಂಸನು ಲೋಕ ಪೂಜ್ಯನಾಗಿರುತ್ತಾನೆ.

ಕೆಲವು ಸಾಹಿತಿಗಳು ನುಡಿ ಜಾಣರು, ಅವರಿಗೆ ಪರಿಣಾಮಕಾರೀ ಬರವಣಿಗೆ ಕೊಂಚ ದೂರವೇ; ಕೆಲವು ಸಾಹಿತಿಗಳು ತುಂಬಾ ಆಕರ್ಷಕವಾಗಿ ಬರೆಯಬಲ್ಲರು, ಸಭೆಯೆದುರು ನಿರರ್ಗಳವಾಗಿ ಮಾತನಾಡಲಾರರು. ಶಿವಮೂರ್ತಿಶಾಸ್ತ್ರಿಗಳಿಗೆ ನುಡಿ ಜಾಣೆಯೂ ಇತ್ತು. ಬರಹದ ವರವೂ ಸಿದ್ಧಿಸಿತು. ಸಂಶೋಧನೆ ಸೃಜನಶೀಲತೆ ಭಾಷಣ-ಬರಹ-ವೇಷ-ಭಾಷೆ ಹೀಗೆ ಬಹುಮುಖ ಪ್ರತಿಭೆಗಳನ್ನು ಸಮನ್ವಯಗೊಳಿಸಿ ಕೊಂಡಿದ್ದರು.

ಶಾಸ್ತ್ರಿಗಳ ಉಪನ್ಯಾಸ ಸಮಯ ಸ್ಫೂರ್ತಿಯಿಂದ ಕೂಡಿರುತ್ತಿತ್ತು. ತಮಗಿಂತ ಚೆನ್ನಾಗಿ ಮಾತನಾಡಿ ಚಪ್ಪಾಳೆ ಗಿಟ್ಟಿಸಿಕೊಂಡ ಸರೀಕ ವಿದ್ವಾಂಸರನ್ನು ಬಾಯಿ ತುಂಬಾ ಹೊಗಳಿ ಸರೀಕರಿಗಿಂತ ಹೆಚ್ಚಿನ ಪ್ರಶಂಸೆ ಪಡೆದುಬಿಡುತ್ತಿದ್ದರು. ಈ ಕುರಿತ ಉದಾಹರಣೆಯೊಂದು ಜನಜನಿತವಾಗಿತ್ತು. ರಬಕವಿಯಲ್ಲಿ ಬಸವಜಯಂತಿ ಕಾರ್ಯಕ್ರಮ, ಭಾಷಣಕಾರರಾಗಿ ಶಾಸ್ತ್ರಿಗಳು ಭಾಗವಹಿಸಿದ್ದರು ವಚನ ಸಾಹಿತ್ಯದ ಬಗ್ಗೆ ಶಾಸ್ತ್ರಿಗಳು ಹೆಚ್ಚು ತಿಳಿದವರಾಗಿದ್ದರು. ಆ ಬಗ್ಗೆ ಅವರಿಗೆ ಹೆಮ್ಮೆಯೂ ಇತ್ತು. ರಂಜನೀಯವಾಗಿ ಹೇಳುವ ಕಲೆ ರಕ್ತಗತವಾಗಿತ್ತು. ಅದೇ ಸಮಾರಂಭಕ್ಕೆ ಅ.ನ.ಕೃಷ್ಣರಾಯರೂ ಸಹ ಆಹ್ವಾನಿತರಾಗಿದ್ದರು. ಶಾಸ್ತ್ರಿಗಳು ಉಮೇದಿನಿಂದ ಒಂದು ಗಂಟೆ ನಿರರ್ಗಳವಾಗಿ ಭಾಷಣ ಲಹರಿ ಹರಿಸಿದರು. ತಮ್ಮ ಲಹರಿಗೆ ತಾವೇ ತಲೆದೂಗಿದರು. ವೈದಿಕರಾದ ಅ.ನ.ಕೃಷ್ಣರಾಯರು ವಚನ ಸಾಹಿತ್ಯವನ್ನು ಹೇಗೆ ಅರ್ಥೈಸಿಕೊಳ್ಳಬಹುದೆಂಬ ವಿಚಾರಗಳನ್ನು ಹೇಳಿದರು.

ಶಾಸ್ತ್ರಿಗಳಿಗೆ ತಮ್ಮ ಇತಿಮಿತಿ ಮನನವಾಯಿತು. ಸಭಿಕರು ಅ.ನ.ಕೃಷ್ಣರಾಯರ ಪಾದಗಳಿಗೆ ನಮಸ್ಕರಿಸಿದರು. ಪಂಡಿತರತ್ನ ಕೀರ್ತನ ಕೇಸರಿ ಎಂದೆಲ್ಲಾ ಬಿರುದಾಂಕಿತರಾದ ಶಾಸ್ತ್ರಿಗಳು ಅ.ನ. ಕೃಷ್ಣರಾಯರನ್ನು ಶ್ಲಾಘಿಸಿದರು. ಗಾತ್ರಕ್ಕೂ ವಿದ್ಯುತ್ತಿಗೂ ಸಂಬಂಧವಿಲ್ಲವೆಂದು - ಹಾಸ್ಯ ಚಟಾಕಿ ಹಾರಿಸಿದ್ದರು.

ಶಾಸ್ತ್ರಿಗಳು ಅ.ನ. ಕೃಷ್ಣರಾಯರಲ್ಲಿದ್ದ ಪ್ರತಿಭಾ ಸಂಪನ್ನತೆಯನ್ನು ಕೆರಳಿಸುವಂತೆ ಭಾಷಣ ಮಾಡಿದ್ದರಿಂದಲೇ ಅ.ನ.ಕೃ ಸ್ಫೂರ್ತಿಗೊಂಡು ಸುಧೀರ್ಘ ಭಾಷಣ ಮಾಡಲು ಸಾಧ್ಯವಾಯಿತು. ಬಸವಣ್ಣನನ್ನು ಎಲ್ಲ ಬ್ರಾಹ್ಮಣರೂ ಇಷ್ಟಪಡುವುದಿಲ್ಲ. ಅವರೆಷ್ಟೇ ನಿರ್ಲಿಪ್ತರಾದರೂ ಬಸವಣ್ಣನ ವೈದಿಕ ವಿರೋಧಿ ನಿಲುವುಗಳನ್ನು ಪುರಸ್ಕರಿಸುವುದಿಲ್ಲ ಆದರೆ ಅ.ನ.ಕೃ. ಮುಸಲ್ಮಾನ ಜಾತಿಯ ಮಹಮದ್ ಪೀರ್ ಎಂಬ ಮಹಾರಂಗಕಲಾವಿದನನ್ನು ಮನೆಗೆ ಆಹ್ವಾನಿಸಿ ತಮ್ಮ ತಾಯಿಯಿಂದ ಊಟ ಬಡಿಸಿ ಕಲಾವಿದನ ಉಂಡೆಲೆಯನ್ನು ತಾವೇ ಎತ್ತಿದಂತಹ ಜ್ಯಾತ್ಯತೀತ ವ್ಯಕ್ತಿ ಕನ್ನಡ ವಾಗ್ದೇವಿ ಅವರನ್ನು ದತ್ತು ಪಡೆದದ್ದು ಹಳೆಯ ಮಾತು. ಅಂತಹವರ ಬಗ್ಗೆ ಶಾಸ್ತ್ರಿಗಳು ತಳೆದಿದ್ದ ಮನೋಭಾವಕ್ಕೆ ಅನನ್ಯವಾದುದು.

ಶಾಸ್ತ್ರಿಗಳು ಅ.ನ.ಕೃ ಅವರ ಬಗ್ಗೆ ಹೊರಡಿಸಿದ ವ್ಯಾಜಸ್ತುತಿಯ ನುಡಿಗಳು ಹೀಗಿದ್ದವು. “ಏನಯ್ಯ ಕೃಷ್ಣರಾವ್ (ಶಾ.ಮಂ. ಕೃಷ್ಣರಾವ್) ನಿನ್ನ ಬ್ರಾಹ್ಮಣ ಗುರು ವೀರಶೈವ ಸಾಹಿತ್ಯವನ್ನು ಅರೆದುಕುಡಿದ. ನಾನು ಶರಣ ಸಾಹಿತ್ಯವನ್ನೆಲ್ಲಾ ಅರೆದು ಕುಡಿದು ಬಿಟ್ಟಿದ್ದೇನೆ ಎಂದು ಹೇಳಿ ಒಂದು ಗಂಟೆ ಮಾತನಾಡಿದರೆ ಆತ ಎರಡು ಗಂಟೆ ಅಮೋಘವಾಗಿ ಮಾತನಾಡಿ ಪೂಜ್ಯತೆ ಗಿಟ್ಟಿಸಿಕೊಂಡ, ನಾನು ಜಂಗಮ ಕೀರ್ತನ ಕೇಸರಿ, ಪಂಡಿತರತ್ನಂ ದೊಡ್ಡ ಘಟ ನನ್ನದು. ಆ ನರಪೇತಲ ಬ್ರಾಹ್ಮಣನಿಗೆ ಈ ಲಿಂಗಾಯ್ತರು ನಮಸ್ಕಾರಾ ಮಾಡ್ತಾಇದ್ದಾರಲ್ಲಯ್ಯ” ಈ ಉದ್ಗಾರ ಶಾಸ್ತ್ರಿಗಳ ದೊಡ್ಡ ಗುಣಕ್ಕೆ ಹಿಡಿದ ಕನ್ನಡಿಯಾಗಿತ್ತು.

ಇವರಿಬ್ಬರ ಈ ಘಟನೆ ನಡೆದು ಬಹಳ ವರ್ಷಗಳೇ ಕಳೆದಿವೆ. ಭತೃಹರಿ ಹಿಂದಿನ ಕಾಲದಲ್ಲಿ ಬರೆದ ಭಾಷಾಭೂಷಣ ಪ್ರಶಸ್ತಿ ಸಾರ್ವಕಾಲಿಕವಾದ ಅರ್ಥದಿಂದ ಹೊಳೆಯುತ್ತಿರುವುದು ನಮಗೀಗ ನೆನಪಾಗಲೇಬೇಕು;

ವಾಣ್ಯೇ ಕಾ ಸಮಲಂಕರೋತಿ ಪುರಷಂ ಯಾಸಂಸ್ಕತಾ ಧಾರ್ಯತೇ
ಕ್ಷೀಯಂತೇ ಖಲು ಭೂಷಣಾನಿ ಸತತಂ ವಾಗ್ಭೂಷಣಂ ಭೂಷಣಂ||

ಇಬ್ಬರು ಮಹಾವಿದ್ವಾಂಸರ ಭಾಷಣಗಳನ್ನು ಒಂದೇ ವೇದಿಕೆಯಿಂದ ಆಲಿಸಿದ ರಬಕವಿಯ ನಾಗರೀಕರು ಧನ್ಯರೆಂದೇ ನಮ್ಮ ಅಭಿಪ್ರಾಯ.

ಶಾಸ್ತ್ರಿಗಳ ಕಂಠ ಸಿರಿ ಚೆನ್ನಾಗಿದ್ದ ಯುಗಮಾನದಲ್ಲಿ ದೇಶದ ದೇವಾಲಯಗಳ ಆಡಳಿತ ಮಂಡಳಿಯವರು, ಮಠಮಹಂತುಗಳ ಧರ್ಮದರ್ಶಿಗಳು ಸಮುದಾಯದ ಮನರಂಜನೆಗೂ, ಧರ್ಮ ಸಂಸ್ಕೃತಿ, ಭಕ್ತಿ ಸಾಹಿತ್ಯದ ಪ್ರಚಾರಕ್ಕೂ ಲೇಸಾಗುವಂತೆ ಶಾಸ್ತ್ರಿಗಳಂತಹ ಕೀರ್ತನಕಾರರ ಪ್ರತ್ಯಕ್ಷ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದ ಕಾಲಕಥಾಕಾಲಕ್ಷೇಪ ಕಲೆಯ ಸುವರ್ಣಯುಗವೆಂದೇ ಕರೆಯಲಾಗುತ್ತಿತ್ತು. ಭದ್ರಗಿರಿ ಕೇಶವದಾಸ್, ಭದ್ರಗಿರಿ

ಅಚ್ಚುತದಾಸ್, ಶಿವಲಿಂಗಸ್ವಾಮಿ ಹಿರೇಮಠ, ಹಂಡೆವೇದವ್ಯಾಸರು, ಹೀಗೆ ಕೀರ್ತನಾಚಾರ್ಯರ ಒಂದು ಪಡೆಯೇ ನಾಡಿನಾದ್ಯಂತ ಸಂಚರಿಸುತ್ತಿತ್ತು.

ಶಾಸ್ತ್ರಿಗಳು ನಡೆಸಿಕೊಡುತ್ತಿದ್ದ ಕೀರ್ತನೆಗಳು ದ್ವಿಮುಖನೀತಿಯುಳ್ಳದ್ದಾಗಿರುತ್ತಿದ್ದವು. ಧರ್ಮ ಮತ್ತು ನೀತಿ ಪ್ರಚಾರಗಳ ಜೊತೆಗೆ ದೇಶ ಪ್ರೇಮದ ಮಹತ್ವವನ್ನು ಕನ್ನಡ ಭಾಷೆಯ ಹಿರಿಮೆಯನ್ನು ಮೆರೆಸುತ್ತಿದ್ದರು. ಸಂಸ್ಕೃತಿ ಪ್ರಚಾರ ಹೇಗಿರಬೇಕೆಂಬುದನ್ನು ತಿಳಿಯಲಿದ್ದವರು ಶಾಸ್ತ್ರಿಗಳ ಕೀರ್ತನೆಗಳನ್ನು ಮಾದರಿಯಾಗಿ ಇರಿಸಿಕೊಳ್ಳಬೇಕಾಗುತ್ತಿತ್ತು. ಶಾಸ್ತ್ರಿಗಳ ಧ್ವನಿ ಸಿರಿಯನ್ನು ಕೀರ್ತನೆಯ ವೈಖರಿಯನ್ನು ಧ್ವನಿ ಮುದ್ರಿಸಿಕೊಳ್ಳುವ ವ್ಯವಸ್ಥೆಯಿದ್ದಿದ್ದರೆ ಶಾಸ್ತ್ರಿಗಳ 'ಕುಶೀಲವತೆ' ಮತ್ತು ಗೀತ ಚಾರಣ ವೈಭವಗಳು ಮುಂದಿನ ಪೀಳಿಗೆಗೆ ದೊರಕುತ್ತಿದ್ದವು. ಧ್ವನಿಮುದ್ರಣ ಸಾಧನಸಲಕರಣೆಗಳು ಬರುವ ಹೊತ್ತಿಗಾಗಲೇ ಶಾಸ್ತ್ರಿಗಳು ಕೀರ್ತನ ಕಲೆಗೆ ಮಂಗಳ ಹಾಡಿದ್ದರು.

(i) ಅವರ ಹುಟ್ಟು ಹೆಸರು ಕುಪ್ಪಯ್ಯಶಾಸ್ತ್ರಿ ಎಂದು, ತುಮಕೂರು ಜಿಲ್ಲೆಗೆ ಸೇರಿದ ಹುಲುಕುಂಟೆಮಠದ ಪರಂಪರೆಯ ಬಸವಯ್ಯ ಮತ್ತು ನೀಲಮ್ಮನವರು ಅವರ ತಂದೆ ತಾಯಿಗಳು. ಹುಟ್ಟಿದ್ದು, 23-02-1903 ನೆಯ ಸೋಮವಾರದಂದು. ಬಸವಯ್ಯನವರು ವೀರಶೈವ ಕಾವ್ಯಗಳನ್ನು ಓದುವ ಗಮಕಿಗಳಾಗಿದ್ದರು. ರಾಜಶೇಖರ ವಿಳಾಸ, ಶರಣಲೀಲಾಮೃತ ಮುಂತಾದ ಕಾವ್ಯಗಳನ್ನು ರಾಗನನೂಸರಿಸಿ ಓದುತ್ತಿದ್ದರು. ಎಳೆಯ 'ಕುಪ್ಪಯ್ಯಶಾಸ್ತ್ರಿ'ಗೆ ಆ ಗಮಕ ಕಲೆ ಪ್ರಭಾವ ಬೀರಿತ್ತು. ಅಕ್ಷರಗಳು ನಾಲಿಗೆಯ ಮೇಲೆ ಹೊರಳಲು ಪ್ರಾರಂಭವಾಗುತ್ತಲೇ ಅವರು ಪದ್ಯಗಳನ್ನು ಹೇಳಲು ಮೊದಲು ಮಾಡಿದರು. ಗಮಕ ಕಲೆಯನ್ನೇ ಕಾಯಕ ಮಾಡಿಕೊಂಡಿದ್ದ ಬಸವಯ್ಯ ತಮ್ಮ ಏಕಮಾತ್ರ ಪುತ್ರ ರಾಜಶೇಖರ ವಿಲಾಸವನ್ನು ಸುಲಲಿತವಾಗಿ ಓದುವ ಮಟ್ಟದ ವಿದ್ಯಾವಂತನಾದರೆ ಸಾಕೆಂದು ಹಂಬಲವಿರಿಸಿಕೊಂಡಿದ್ದರು.

ಹುಲಿಕುಂಟೆ ಮಠದ "ಬಸವಯ್ಯ.. ನೀಲಮ್ಮ" ಬಸವೇಶ್ವರ ನೀಲಲೋಚನೆಯರ ಹೆಸರನ್ನು ನೆನಪಿಸುತ್ತಾರೆ. ಆ ಹೆಸರುಗಳೆರಡೂ ವಚನಕಾರರ ಹೆಸರುಗಳು. ಆ ಕಾಲದಲ್ಲಿ ಲಿಂಗವಂತರಲ್ಲಿ ಒಳಪಂಗಡಗಳ ಅವಾಂತರವಿರಲಿಲ್ಲ. ವಿರಕ್ತಮಠದವರು, ಪಂಚಪೀಠದವರು ಎಂಬ ಕಲುಷಿತ ಭಾವನೆಯಿರಲಿಲ್ಲ. ಇಷ್ಟ ಲಿಂಗಪೂಜಕರೆಲ್ಲಾ ಒಂದೇ ಎಂಬ ಸೌಖ್ಯಭಾವವಿತ್ತು. ತುಮಕೂರಿಗೆ ಶ್ರೀಮದ್‌ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ಶಿವಾನಂದ ಶಿವಾಚಾರ್ಯರೆಂಬ ಬಹುದೀರ್ಘ ಹೆಸರಿನ ಭಗವತ್ಪಾದರು ಆಗಮಿಸಿ ಗುರು ವರ್ಗವೇ ಬೇರೆ ಶಿಷ್ಯ ವರ್ಗವೇ ಬೇರೆಯೆಂದು ಪ್ರಭೇಧಗಳನ್ನು ಮನವರಿಕೆಮಾಡಿಕೊಟ್ಟ; ಮರು ದಿನವೇ ಲಿಂಗಾಯಿತರ ಮನಸ್ಸುಗಳು ತಮ್ಮ ತಮ್ಮ ಪ್ರಬೇಧಗಳ ಸುತ್ತಾ ಕೋಟೆಕಟ್ಟಿಕೊಳ್ಳಲು ಮುಂದಾದವು, ಲಿಂಗವಂತ ಸಮುದಾಯದ ಗುರುಗಳೆಂದರೆ ವಜ್ರಮುಕುಟವಿರಬೇಕು, ನವರತ್ನಗಳ ಆಭರಣವಿರಬೇಕು. ವೈಭವ; ಬಾಣ ಬಿರುಸುಗಳಂತೆ ಶಬ್ದಮಯವೂ, ಪ್ರಜ್ವಲ ಬೆಳಕನ್ನು ಚೆಲ್ಲಬೇಕು, ಗುರುಗಳು ಬೆಳ್ಳಿ ಪಾಲಕಿಯೇರಿ ನಗರ ಮೆರವಣಿಗೆ ನಡೆಸಬೇಕು ಎಂಬ ಪರಿಕಲ್ಪನೆಯಾಯಿತು. ಆಗ

ಕುಪ್ಪಯ್ಯಶಾಸ್ತ್ರಿ ಎಂಬ ಹೆಸರಿನ ಹುಲುಕುಂಟೆ ಮಠದ ಮಗು 'ಶಿವಮೂರ್ತಿ ಶಾಸ್ತ್ರಿ' ಎಂಬ ಹೆಸರು ತಳೆಯಿತು. ಅಥವಾ ಮರುನಾಮಕರಣವಾಯಿತು.

(ii) ಇದರಿಂದಾದ ಪ್ರಯೋಜನವೆಂದರೆ; ಕುಪ್ಪಯ್ಯಶಾಸ್ತ್ರಿ ಎಂಬ ಮಗು, ಬಾಳೆಹೊನ್ನೂರು ಪೀಠದ ಪಂಗಡಕ್ಕೆ ಸೇರಿದುದು. ಲಿಂಗಾಯ್ತರ ಮುಖ್ಯ ವಾಹಿನಿಯಿಂದ ಬೇರ್ಪಡಿಸಲು ಸಹಕಾರಿಯಾಗುವಂತೆ ಒಳಪಂಗಡವನ್ನು ಮನವರಿಕೆ ಮಾಡಿಕೊಟ್ಟುದುದು. ಆದರೇಕೋ ಶಿವಮೂರ್ತಿಶಾಸ್ತ್ರಿಗಳು ವಿದ್ವಾಂಸರಾಗಿ ಕೀರ್ತಿಗಳಿಸಿದ ಮೇಲೆ ಬಸವಾದಿ ವಚನಕಾರರನ್ನು ತಾತ್ವಿಕವಾಗಿ ಒಪ್ಪಿಕೊಂಡು ಅವರ ಅನುಯಾಯಿಗಳಾದರು. ವೀರಶೈವರಲ್ಲಿ ಒಳಪಂಗಡ ಹೇಳಿಕೊಳ್ಳಲು ಅವರ ಮನ ಒಪ್ಪಿಕೊಳ್ಳದಾಯಿತು. ಅದಿರಲಿ, ಹುಲಿಕುಂಟೆ ಮಠದ ಬಸವಯ್ಯನವರು ಕುಪ್ಪೂರು ಗದ್ದಿಗೆಯ ಮರುಳುಸಿದ್ದೇಶ್ವರನ ಪರಮ ಭಕ್ತರಾಗಿದ್ದರು. ತಮಗಾದ ಗಂಡು ಸಂತಾನಕ್ಕೆ 'ಕುಪ್ಪಯ್ಯಶಾಸ್ತ್ರಿ' ಎಂದು ಹೆಸರಿಟ್ಟರು. ಅವರ ಭಾವಕ್ಕೆ ತಮಗುಂಟಾದ ಪುತ್ರಸಂತಾನ ಕುಪ್ಪೂರು ಗದ್ದಿಗೆಯ ಮಹಾದೇವರ ಪ್ರಸಾದವೆಂದೇ ತಿಳಿದಿದ್ದರು. ಆ ಕಾಲ ಗಮಕಿಗಳಿಗೆ ಸಮುದಾಯದಲ್ಲಿ ತುಂಬಾ ಗೌರವವಿದ್ದ ಕಾಲ. ಮಗನ ನಾಲಿಗೆಯ ಮೇಲೆ ಅಕ್ಷರಗಳು ನಿಂತು ಧ್ವನಿ ರೂಪ ತಳೆಯುತ್ತಿದ್ದಂತೆ ಆತನೂ ತನ್ನಂತೆ ಗಮಕಿಯಾಗಬೇಕೆಂದು ಹಂಬಲವಿರಿಸಿಕೊಂಡಿದ್ದರು. ಶಾಸ್ತ್ರಿಗಳು ವರ್ಣಮಾಲೆಯ ಜೊತೆಯಲ್ಲಿಯೇ ಸಂಗೀತ ಸ್ವರಾಭ್ಯಾಸವನ್ನು ಮಾಡಿದರು, ಅಥವಾ ಬಸವಯ್ಯನವರು ಮಾಡಿಸಿದರು. ಪದ್ಯವಾಚನ ಶಾಸ್ತ್ರಿಗಳಿಗೆ ಚಿಕ್ಕಂದಿನಿಂದಲೇ ಕರಗತವಾಯಿತು. ಉಚ್ಚಾರಣೆ ಪ್ರಕಟಗೊಂಡಿತು. ಶರಣಲೀಲಾಮೃತದ ಪದ್ಯಗಳು ಶಾಸ್ತ್ರಿಗಳ ಬಾಯಲ್ಲಿ ಮಧುರ ರೂಪ ತಾಳ ತೊಡಗಿದ್ದವು. ಮಗ ಆಧುನಿಕ ರೀತಿಯ ಶಿಕ್ಷಣ ಹೊಂದಿದರೆ ಮತಾಭಿಮಾನವನ್ನು ತೊರೆದು ಹೊರತಾಗುವನೇನೋ ಎಂಬ ಆತಂಕ ಬಸವಯ್ಯನವರದಾಗಿತ್ತು. ತುಮಕೂರಿನ ವೆಸ್ಲಿಯನ್ ಮಿಷನ್ ಸ್ಕೂಲಿನ ವಿದ್ಯಾರ್ಥಿಯಾದ ಶಾಸ್ತ್ರಿಗಳು 1917ರಲ್ಲಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯನ್ನೂ 1923 ರಲ್ಲಿ ಅಪ್ಪರ್ ಸೆಕೆಂಡರಿ ಪರೀಕ್ಷೆಯನ್ನು ಪಾಸುಮಾಡಿದರು. ಮುಂದಿನ ವಿದ್ಯಾಭ್ಯಾಸಕ್ಕೆಂದು ತಂದೆಯ ಅನುಮತಿ ಬೇಡಿದರು, ಬಸವಯ್ಯನವರು "ಜಂಗಮರಾದ ನಮಗೆ ಇಂಗ್ಲೀಷ್ ಶಿಕ್ಷಣ ಅನಗತ್ಯವೆಂದು ಓದಬೇಕಾದ ಸಾಹಿತ್ಯ, ಶಾಲೆಯ ಹೊರಗಡೆಯೇ ದೊರೆಯುವುದೆಂದೂ ಹೇಳಿಬಿಟ್ಟರು. ಬಾಲಕ ಶಿವಮೂರ್ತಿಶಾಸ್ತ್ರಿ ಹಟ ಹಿಡಿದು ಕೂತಾಗ ತಂದೆ ಸಿಟ್ಟಿನಿಂದ ಮಗನನ್ನು ಬಡಿದರೂ ಆಯಿತು. ಓದುವುದಾದರೆ ಸಂಸ್ಕೃತದಲ್ಲಿ ಪರೀಕ್ಷೆಗಳಿವೆಯಲ್ಲಿ ಅವುಗಳನ್ನು ಪಾಸು ಮಾಡು ಎಂದು ಮಗನ ಹಂಬಲದ ದಿಕ್ಕನ್ನು ಬದಲಾಯಿಸಿದರು. ಅದೇ ಹೊತ್ತಿಗೆ : ಉಭಯಭಾಷಾವಿಶಾರದ, ಆಸ್ಥಾನ ವಿದ್ವಾನ್ ಪಿ.ಆರ್. ಕರಿಬಸವಶಾಸ್ತ್ರಿಗಳು ತುಮಕೂರಿನಲ್ಲಿ ನೆಲೆಸಿದ್ದರು. ಶಾಸ್ತ್ರಿಗಳಿಗೆ ಕನ್ನಡ - ಸಂಸ್ಕೃತ ಸಾಹಿತ್ಯದ ಕಾಮಧೇನು ಲಭ್ಯವಾದಂತಾಯಿತು.

(iii) ಅವರ ಬಳಿ ವ್ಯಾಕರಣ ಹೇಳಿಸಿಕೊಂಡರು, ಹರಿಹರನ ಗಿರಿಜಾಕಲ್ಯಾಣ, ಷಡಕ್ಷರ ಕವಿಯ ರಾಜಶೇಖರ ವಿಳಾಸ, ಮಲ್ಲಣಾರ್ಯನ ಭಾವಚಿಂತಾರತ್ನ, ಸಂಸ್ಕತದ ಕಾಳಿದಾಸ, ಭವಭೂತಿ, ಭಾರವಿ, ಮುಂತಾದ ಮಹಾಕವಿಗಳ ಕಾವ್ಯವನ್ನು ಹೇಳಿಸಿಕೊಂಡರು. "ಕರ್ನಾಟಕ ಭಾಷಾರತ್ನ' ಬಿರುದುಳ್ಳ ಪಿ. ಆರ್.

ಕರಿಬಸವಶಾಸ್ತ್ರಿಗಳು ಕ್ಷಡಕ್ಷರ ಕವಿಯ ರಾಜಶೇಖರ ವಿಳಾಸವನ್ನು ಗ್ರಂಥಸಂಪಾದನಾ ಶಾಸ್ತ್ರದ ರೀತಿಯಲ್ಲಿ ಸಂಪಾದಿಸಿದ್ದರು. ಶಾಸ್ತ್ರಿಗಳು ರಾಜಶೇಖರ ವಿಳಾಸದ ಬಗ್ಗೆ ಅಧಿಕಾರಯುತವಾಗಿ ವ್ಯಾಖ್ಯಾನ ಮಾಡಲು ಕಲಿತದ್ದು ಪಿ.ಆರ್. ಕರಿಬಸವಶಾಸ್ತ್ರಿಗಳ ಮಾರ್ಗದರ್ಶನದಿಂದಲೇ.

1918ನೆಯ ವರ್ಷದಲ್ಲಿ ಶಾಸ್ತ್ರಿಗಳ ತಂದೆ ಹುಲಿಕುಂಟೆ ಮಠದ ಬಸವಯ್ಯನವರು ಶಿವಾಧೀನರಾದರು ಚಿಕ್ಕವಯಸ್ಸಿನ ಶಾಸ್ತ್ರಿಗಳ ಮೇಲೆ ಸಂಸಾರ ನಡೆಯಿಸುವ ಜವಾಬ್ದಾರಿ ಬಂದು ಸೇರಿತು. ಮನೆಯಲ್ಲಿ ಬಡತನ ದಾಂಗುಡಿಯಿಡುತ್ತಿತ್ತು. ಜೀವನ ನಡೆಯಿಸಲು ಉದ್ಯೋಗಕ್ಕೆ ಸೇರಲೇ ಬೇಕಾದ ಅನಿವಾರ್ಯತೆಯುಂಟಾಯಿತು. ಗುಬ್ಬಿ ಮಾಧ್ಯಮಿಕ ಶಾಲೆಯಲ್ಲಿ ಉಪಾಧ್ಯಾಯ ವೃತ್ತಿ ದೊರೆಯಿತು. ಶಾಸ್ತ್ರಿಗಳು ಉಪಾಧ್ಯಾಯರಾದರು. ತುಮಕೂರಿನ ಸಾಂಸ್ಕೃತಿಕ ಹಿನ್ನೆಲೆಯ ಪ್ರಭಾವದಿಂದಲೋ ಮನೆತನದ ರೂಢಿಗತ ಹವ್ಯಾಸದಿಂದಲೋ ಶಾಸ್ತ್ರಿಗಳು ಚಿಕ್ಕಂದಿನಲ್ಲಿಯೇ ಅಧ್ಯಯನಶೀಲ ಪ್ರವೃತ್ತಿಯನ್ನು ರೂಢಿಸಿಕೊಂಡರು. ಮೈಸೂರು ಅರಮನೆಯ ಆಸ್ಥಾನ ಪಂಡಿತ ಪರಂಪರೆಯ ಪಿ.ಆರ್. ಕರಿಬಸವಶಾಸ್ತ್ರಿಗಳಲ್ಲಿ ಶಿಷ್ಯ ವೃತ್ತಿಯ ಅದೃಷ್ಟ ಒಲಿದ ಮೇಲೆ ಶಿವಮೂರ್ತಿಶಾಸ್ತ್ರಿಗಳು ಸಾರಸ್ವತ ಯಾತ್ರೆಯಲ್ಲಿ ಹಿಂತಿರುಗಿ ನೋಡಲಿಲ್ಲ. ಕರಿಬಸವಶಾಸ್ತ್ರಿಗಳು ಅಭಿನವ ಕಾಳಿದಾಸ, ಬಸವಪ್ಪ ಶಾಸ್ತ್ರಿಗಳ ಶಿಷ್ಯರಾಗಿದ್ದವರು. ಕನ್ನಡದ ಪ್ರಸಿದ್ಧ ಕಾವ್ಯಗಳನ್ನು ಜೊತೆಗೆ ಸಂಸ್ಕೃತ ಸಾಹಿತ್ಯವನ್ನು ಶಾಸ್ತ್ರಿಗಳಿಗೆ ಹೇಳಿಕೊಟ್ಟರು. ಅದೇ ಕಾಲಕ್ಕೆ ಮಾಗಡಿ ವೀರಪ್ಪ ಶಾಸ್ತ್ರಿಗಳ ಪರಿಚಯವೂ ಆಯಿತು. ಅವರಾಗ ಸಿದ್ಧಗಂಗೆಯ ಮಠದಲ್ಲಿ ಉಪಾಧ್ಯಾಯರಾಗಿದ್ದರು. ಮಾಗಡಿ ವೀರಪ್ಪ ಶಾಸ್ತ್ರಿಗಳು 'ವೀರಶೈವ' ಎಂಬ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಮೈಸೂರು ನಾಡಿನ ಘನ ವೀರಶೈವ ವಿದ್ವಾಂಸರೆಂಬ ಕೀರ್ತಿ ಪಡೆದಿದ್ದರು. ಮಾಗಡಿ ವೀರಪ್ಪಶಾಸ್ತ್ರಿಗಳ ಪ್ರಭಾವಕ್ಕೆ ಶಿವಮೂರ್ತಿಶಾಸ್ತ್ರಿಗಳು ಒಳಗಾಗಿ, ಅವರಂತೆ ತಾವೂ ಶರಣ ಸಾಹಿತ್ಯ ಪತ್ರಿಕೆಯನ್ನು ಪ್ರಕಟಿಸುವ ಹಂಬಲವಿರಿಸಿಕೊಂಡಿದ್ದರು. ಗ್ರಾಮಾಂತರ ಸಮುದಾಯದ ನಡುವೆ, ಮಾಗಡಿ ವೀರಪ್ಪಶಾಸ್ತ್ರಿಗಳು ಶರಣಸಾಹಿತ್ಯ ಪ್ರಚಾರ ಮಾಡಿದರೆ, ಶಿವಮೂರ್ತಿಶಾಸ್ತ್ರಿಗಳು ನಾಡಿನಾದ್ಯಂತ ಸಂಚರಿಸಿ, ಸಾಹಿತ್ಯ ಪ್ರಚಾರ ನಡೆಸಿದರು.

ಜ್ಞಾನ ದಾಸೋಹದ ಹಂಬಲವುಳ್ಳ ಗುರುವಿಗೆ ಪ್ರತಿಭಾನ್ವಿತ ಶಿಷ್ಯ ದೊರಕುವುದಕ್ಕೂ ಯೋಗಾ-ಯೋಗವಿರಬೇಕು. ಪುಣ್ಯವೂ ಇರಬೇಕು. ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳ ವಿದ್ವತ್ ಪ್ರಭೆ ಪಿ.ಆರ್. ಕರಿಬಸವಶಾಸ್ತ್ರಿಗಳಲ್ಲಿಯೂ ಅವರೊಳಗಿದ್ದ ಸಾರಸ್ವತ ಪ್ರಣತಿ ಬಿ. ಶಿವಮೂರ್ತಿ ಶಾಸ್ತ್ರಿಗಳಲ್ಲಿಯೂ ನಿರುಪಾದಿಯಾಗಿ ಬೆಳಗುವಂತಾಗಿತ್ತು. ತುಮಕೂರಿನಂತಹ ವರ್ತಕ ಸಮುದಾಯದ ನಡುವೆ ಅನೇಕ ರಂಗ ಕಲಾವಿದರೂ ವಿದ್ವಾಂಸರೂ, ಹುಟ್ಟಿ ಸಾಧನೆಗೈದು ದೇಶದಾದ್ಯಂತ ಕೀರ್ತಿಲತೆಯಾಗಿ ಆವರಿಸಿಕೊಂಡ ಸಂಗತಿ ಒಂದು ರೀತಿಯಲ್ಲಿ ಕಾತುಕವೂ ಹೌದು ಇನ್ನೊಂದು ರೀತಿಯಲ್ಲಿ ಸಕಾರಣವೂ ಹೌದು. ಗುಬ್ಬಿಯ ಮಲ್ಲಣ್ಣ, ಆತನ ಮೊಮ್ಮಗ ಮಲ್ಲಣ್ಣಾರ್ಯ ಆತನ ಪುತ್ರ ಶಾಂತೇಶ, ಚೇರಮಾಂಕ ಎಡೆಯೂರ ಸಿದ್ಧಲಿಂಗೇಶ್ವರ ಅಲ್ಲಿಂದ

ಮೊದಲುಗೊಂಡು ಬಿ. ಶಿವಮೂರ್ತಿಶಾಸ್ತ್ರಿಗಳ ತನಕ ಮಹಾ ಪ್ರತಿಭೆಗಳನ್ನು ನಾಡಿಗೆ ಕೊಡುಗೆಯಾಗಿ ಕೊಟ್ಟ ಕೀರ್ತಿ ತುಮಕೂರು ಜಿಲ್ಲೆಗೆ ಸಲ್ಲಬೇಕು.

## ಗಾಂಧಿಜೀಯವರ ಪ್ರಭಾವ

1917 ರಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಶಾಸ್ತ್ರಿಗಳು ನಂತರ ಆರುವರ್ಷಗಳ ನಂತರ, ಅಂದರೆ 1923 ರಲ್ಲಿ ವೆಸ್ಲಿಯನ್ ಮಿಷನ್ ಶಾಲೆಯಿಂದ ಅಪ್ಪರ್ ಸೆಕೆಂಡರಿ ಪರೀಕ್ಷೆಗೆ ಕುಳಿತು ತೇರ್ಗಡೆ ಹೊಂದಿದರು. ಆ ಹೊತ್ತಿಗಾಗಲೇ ತಂದೆ ಹುಲುಕುಂಟೆ ಮಠದ ಬಸವಯ್ಯನವರು ಶಿವಾಧೀನರಾಗಿ ಮನೆಯ ಜವಾಬ್ದಾರಿ ಶಾಸ್ತ್ರಿಗಳ ಹೆಗಲೇರಿತು. ಜೀವನ ನಡೆಸುವುದೇ ದೊಡ್ಡ ಸಮಸ್ಯೆಯೆನಿಸಿದಾಗ ವಿದ್ಯಾಭ್ಯಾಸ ನಡೆಸುವುದು ಸಾಧ್ಯವಾಗದಾಯಿತು.

ಗೋಪಲ ಚನ್ನಬಸವೇಶ್ವರರ ನಿರ್ವಿಕಲ್ಪ ಸಮಾಧಿಯಿರುವ "ಗುಬ್ಬಿ"ಯ ಮಾಧ್ಯಮಿಕ ಶಾಲೆಯಲ್ಲಿ ಕನ್ನಡ ಉಪಾಧ್ಯಾಯರಾಗಿ ಕೆಲಸಕ್ಕೆ ಸೇರಿಕೊಂಡರು. ಗುಬ್ಬಿಯ ಪ್ರಾಚೀನ ಹೆಸರು ಅಮಕರಗೊಂಡ, ನಂತರ ಇದನ್ನು 'ಚಟಕಪುರಿ' ಎಂದು ಸಂಸ್ಕೃತೀಕರಣ ಮಾಡಲಾಯಿತು. ಗುಬ್ಬಿ ಮಲ್ಲಣ್ಣ ಆತನ ಮೊಮ್ಮಗ ಮಲ್ಲಣಾರ್ಯ, ಶಾಂತೇಶ, ಮುಂತಾದ ವೀರಶೈವ ಮಹಾ ಕವಿಗಳಿಗೆ ಜನ್ಮ ಕೊಟ್ಟ ಊರು. ಮಲ್ಲಣಾರ್ಯನ ಭಾವ ಚಿಂತಾರತ್ನದ ಪ್ರಭಾವದಿಂದ ಷಡಕ್ಷರ ಕವಿ ರಾಜಶೇಖರ ವಿಳಾಸವನ್ನು ರಚಿಸಿದಂತೆ ಕಾಣುತ್ತದೆ. ವೀರಶೈವಾಮೃತ ಮಹಾಪುರಾಣವೆಂಬ ಧಾರ್ಮಿಕ ವಿಶ್ವಕೋಶವನ್ನು ರಚಿಸಿದ ಗುಬ್ಬಿಮಲ್ಲಣಾರ್ಯನ ಪ್ರಭಾವ ಶಾಸ್ತ್ರಿಗಳ ಮೇಲೆ ಉಂಟಾದುದರಲ್ಲಿ ಅತಿಶಯೋಕ್ತಿಯಿಲ್ಲ. ಗುಬ್ಬಿಯ ತೊರೆ ಮಠದಲ್ಲಿ ಇವರು ವಾಸ್ತವ್ಯ ಹೂಡಿದ್ದರು.

ಕನ್ನಡ ಕಲಿಯುವ ಹಿರಿಯಾಸೆಯಿಂದ ಗುಬ್ಬಿಯ ಕ್ರಿಶ್ಚಿಯನ್ ಚರ್ಚೊಂದರ ಪಾದ್ರಿ 'ಬ್ಲೈನ್' ಶಾಸ್ತ್ರಿಗಳ ಶಿಷ್ಯನಾಗಲು ಮುಂದೆ ಬಂದ. ಆತನಿಗೆ ಶಾಸ್ತ್ರಿಗಳು ಕನ್ನಡ ಕಲಿಸ ತೊಡಗಿದ್ದರು. ಬರುಬರುತ್ತಾ ಆತನಿಗೆ ಶಾಸ್ತ್ರಿಗಳು ಧರಿಸುತ್ತಿದ್ದ ಗಾಂಧೀ ಟೋಪಿಯ ಬಗ್ಗೆ ತುಂಬಾ ಅಸಹನೆಯುಂಟಾಯಿತು. ಪಾದ್ರಿಯಾಗುವ ಮೊದಲು ಹಲವಾರು ಜರ್ಮನ್ ಯುದ್ಧಗಳಲ್ಲಿ ಯೋಧನಾಗಿದ್ದ ಆತ ಅತಿಯೆನಿಸುವಷ್ಟು ಗತ್ತಿನಿಂದ ಬೀಗುತ್ತಿದ್ದ. ಜರ್ಮನ್ ಸಾಹಿತ್ಯದಲ್ಲಿ, ಇಂಗ್ಲಿಷಿನಲ್ಲಿ ಎಂ.ಎ, ಪಾಸುಮಾಡಿದ ಪ್ರಮಾಣ ಪತ್ರಕ್ಕೆ ಒಡೆಯನಾಗಿದ್ದ. ತಾನು ವಾಸಿಸುತ್ತಿದ್ದ ಚರ್ಚಿನ ಆವರಣಕ್ಕೆ ಶಾಸ್ತ್ರಿಗಳನ್ನು ಕರೆಯಿಸಿಕೊಂಡು ಪಾಠ ಹೇಳಿಸಿಕೊಳ್ಳುತ್ತಿದ್ದ. ಗುರು-ಶಿಷ್ಯರ ಸಂಬಂಧ ಶ್ರೀಗುರುಶಿಷ್ಯರಿಗೆ ವಂದಿಸಿ ಬುದ್ದಿಯ ಕಲಿಸಿವಿಕೆ, ಎಂಬಂತಿತ್ತು. ಗಾಂಧೀ ಚಳುವಳಿಯ ಭಯ ಆತನಿಗೆ ಗಾಂಧೀ ಟೋಪಿಧಾರಿಗಳನ್ನು ನೋಡಿದರೂ ಉಂಟಾಗುತ್ತಿತ್ತು ಮೈಸೂರು ಪೇಟ ಧರಿಸಿದವರು ಬ್ರಿಟಿಷ್ ಸರ್ಕಾರವನ್ನು ಒಪ್ಪಿಕೊಂಡವರು, ಎಂಬ ನಂಬಿಕೆಗೆ ಹೇಗೋ ಒಳಗಾಗಿಬಿಟ್ಟಿದ್ದ. ಮೆದು ಮಾತಿನಿಂದ ಶಾಸ್ತ್ರಿಗಳನ್ನು ತಿದ್ದಲು ಮುಂದಾದ. ಗಾಂಧೀಟೋಪಿಗಿಂತ ಮೈಸೂರು ಪೇಟವೇ ಶಾಸ್ತ್ರಿಗಳಿಗೆ ತುಂಬಾ ಚೆನ್ನಾಗಿ ಒಪ್ಪುತ್ತದೆ. ಸಮಗ್ರವಾಗಿ ತಲೆಯನ್ನು ರಕ್ಷಿಸದ ಗಾಂಧೀ ಟೋಪಿಗೆ ಬದಲಾಗಿ ಮೈಸೂರು, ರುಮಾಲು ಕಟ್ಟಿಕೊಂಡು ಬರುವಂತೆ ಒತ್ತಾಯಿಸ ತೊಡಗಿದ.

ಅಷ್ಟರ ವೇಳೆಗೆ ಶಾಸ್ತ್ರಿಗಳು ಗಾಂಧೀ ತತ್ವದ ಪರಮ ಅನುಯಾಯಿ ಆಗಿಬಿಟ್ಟಿದ್ದರು. ಗಾಂಧೀ ದ್ವೇಷಿಗಳನ್ನು ದ್ವೇಷಿಗಳೆಂದು ಪರಿಗಣಿಸುವ ಮಟ್ಟಿಗೆ ಅವರು ಪರಿವರ್ತನೆಯಾಗಿ ಹೋಗಿದ್ದರು. ರೆವರೆಂಡ್‌ಬ್ಲೈನನ ಮಾತಿಗೆ ಕಿವಿಗೊಡಲಿಲ್ಲ. ಶಿಷ್ಯ ಗಾಂಧೀ ದ್ವೇಷಿಯಾದ ಪಕ್ಷದಲ್ಲಿ ಆತನಿಗೆ ಗುರುವಾಗಿ ಮುಂದುವರೆಯಲು ಶಾಸ್ತ್ರಿಗಳಿಗೆ ಮನವೊಪ್ಪಲಿಲ್ಲ. ಅಂದೇ ಶಿಷ್ಯಗುರುವಿನ ಬಾಂಧವ್ಯ ಕಳಚಿಬಿತ್ತು. ಶಿಷ್ಯನ ಕಡೆಯಿಂದ ಬರುತ್ತಿದ್ದ ಆದಾಯವೂ ನಿಂತಿತು. ಬ್ರಿಟಿಷ್ ಒಡೆತನದಲ್ಲಿದ್ದ ಉಪಾಧ್ಯಾಯ ವೃತ್ತಿಯೂ ಹೋಯಿತು. ಹೋಯಿತು ಎನ್ನುವುದಕ್ಕಿಂತ ಸ್ವಾಭಿಮಾನೀ ಶಾಸ್ತ್ರಿಗಳೇ ಉಪಾಧ್ಯಾಯ ವೃತ್ತಿಗೆ ರಾಜೀನಾಮೆ ಕೊಟ್ಟು ಹೊರಬಂದರು. ಆ ಅಮೃತ ಘಳಿಗೆಯಲ್ಲಿಯೇ ಕನ್ನಡ ಸಾಹಿತ್ಯ ವಾಗ್ದೇವಿಯ ಭಂಡಾರದ ಬಾಗಿಲು ತೆರೆದುಕೊಂಡಿತ್ತು. 'ಬ್ಲೈನ್' ವಿರೋಧದಿಂದ ಒಳ್ಳೆಯದೇ ಆಗಿತ್ತು.

1924ನೇ ಇಸವಿಯಲ್ಲಿ ಶಾಸ್ತ್ರಿಗಳಿಗೆ ಮದುವೆಯಾಯಿತು. ಗುಬ್ಬಿಯ ದೊಡ್ಡಕಣ್ಣಪ್ಪ-ಸಿದ್ಧಹೊನ್ನಮ್ಮ ದಂಪತಿಗಳ ಮಗಳು ಅನ್ನಪೂರ್ಣಮ್ಮ ಎಂಬ ಕನ್ಯೆ ಶಾಸ್ತ್ರಿಗಳ ಧರ್ಮಪತ್ನಿಯಾದಳು. ಸಂಸಾರಿಗ ಶಾಸ್ತ್ರಿಗಳು ಪೂರ್ಣಪ್ರಮಾಣದಲ್ಲಿ ಗಾಂಧೀ ಚಳುವಳಿಗೆ ತಮ್ಮನ್ನು ತೊಡಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕಾವ್ಯವಾಚನದ ನಡುವೆ ಸ್ವಾತಂತ್ರ್ಯ ಚಳುವಳಿಯ ಮಹತ್ವವನ್ನು ಹೇಳಲು ಮುಂದಾಗಿ, ಬರುಬರುತ್ತಾ ಚಳುವಳಿಯನ್ನೇ ಪ್ರಧಾನ ವಿಷಯವನ್ನಾಗಿ ಮಾಡಿಕೊಂಡು ಪ್ರವಚನ ಮಾಡತೊಡಗಿದರು.

ಗಾಂಧಿಜೀ 1924ರಲ್ಲಿ ತುಮಕೂರಿಗೆ ಬಂದು ತುಂಬಿದ ಸಭೆಗಳಲ್ಲಿ ಭಾಷಣ ಮಾಡಿದರು. ಅವರ ಜೊತೆ, ಚಕ್ರವರ್ತಿ ಸಿ. ರಾಜಗೋಪಾಲಾಚಾರಿಯವರು, ಮಹಾದೇವದೇಸಾಯಿ, ಮುಂತಾದ ಧುರೀಣರಿದ್ದರು. ಶಾಸ್ತ್ರಿಗಳು ಗಾಂಧೀಜಿಯವರ ಭಾಷಣ ಕೇಳಲು ತಪ್ಪದೇ ಹೋಗುತ್ತಿದ್ದರು. ಭಾಷಣ ಕೇಳಿ ಸ್ಫೂರ್ತಿಗೊಂಡು ಗಾಂಧೀ ಗೀತೆಗಳನ್ನು ರಚಿಸಿ ಗಾಂಧೀಜಿಯವರಿಗೆ ಅರ್ಪಿಸಿದುದಲ್ಲದೆ, ಕಿಕ್ಕಿರಿದು ತುಂಬಿದ ಸಭೆಯಲ್ಲಿ ಗೀತೆಯನ್ನು ಹಾಡಿ ಸಭಿಕರ ಮೆಚ್ಚುಗೆಗೆ ಪಾತ್ರರಾದರು. ತುಮಕೂರು ಪ್ರಾಂತ್ಯದ ಕಾಂಗ್ರೇಸ್ ಧುರೀಣರಾದ ಟಿ. ಸುಬ್ರಹ್ಮಣ್ಯಂ, ಕೆ.ರಂಗಯ್ಯಂಗಾರ್ ಮುಂತಾದವರು ಶಾಸ್ತ್ರಿಗಳನ್ನು ಪ್ರಚಾರ ಸಭೆಗೆ ಕರೆದೊಯ್ದು ಭಾಷಣ ಮಾಡಿಸುತ್ತಿದ್ದರು. ಶಾಸ್ತ್ರಿಗಳು ತುಂಬಾ ಉತ್ಸಾಹದಿಂದಲೇ ಕ್ರಾಂತಿಕಾರೀ ಭಾಷಣಗಳನ್ನು ಮಾಡಿ ತಮ್ಮ ವಾಕ್ಚಾತುರ್ಯದಿಂದ ಶ್ರೋತೃಗಳನ್ನು ಸಂಪಾದಿಸಿಕೊಂಡರು. ಕೀರ್ತನಕಾರರಾಗಿ ರೂಹುತಳೆಯಲು ವಿಚಾರಕೋಶದೊಳಗಿನ (ಚಿಟ್ಟೆಯಾದರು) ಪತಂಗವಾದರು.

1926 ರಲ್ಲಿ ತುಮಕೂರು ಬಳಿಯ ಸಿದ್ದಗಂಗಾ ಮಠದಲ್ಲಿ ಧಾರ್ಮಿಕ ಸಮ್ಮೇಳನವೊಂದು ನಡೆಯಿತು. ಅಧ್ಯಕ್ಷತೆ ಶಿ. ಶಿ. ಬಸವನಾಳರದ್ದು ಸಭೆಯಲ್ಲಿ ಮಾಗಡಿ ವೀರಪ್ಪಶಾಸ್ತ್ರಿಗಳು ಹುಬ್ಬಳ್ಳಿಯ ವಕೀಲ ಗುರುಸಿದ್ದಪ್ಪ ಮಿರ್ಜಿ, ಬೊಂಬಾಯಿಯ ದೊಡ್ಡ ವ್ಯಾಪಾರಿ ಗಂಗಾಧರಪ್ಪ ಸಾಂಬೋಜಿ, ಡಾ.ಜೆ. ರುದ್ರಪ್ಪ ಮುಂತಾದ ಗಣ್ಯರೆಲ್ಲಾ ಇದ್ದರು. ಧಾರ್ಮಿಕ ಸಭೆಯಲ್ಲಿ ತರುಣ ಶಿವಮೂರ್ತಿಶಾಸ್ತ್ರಿಗಳು ಸ್ವರಚಿತ ಪುಟ್ಟ ಕಾವ್ಯವನ್ನು ಗಮಕ ಶೈಲಿಯಲ್ಲಿ ಹಾಡಿದರು. ಗಮಕ ಗಾಯನದ ಬೆನ್ನಲ್ಲಿಯೇ ಮಹಾಕವಿ ಷಡಕ್ಷರದೇವನನ್ನು ಕುರಿತು ಉಪನ್ಯಾಸವನ್ನೂ

ಮಾಡಿದರು. ಶಾಸ್ತ್ರಿಗಳ ಗಾಯನ ಮತ್ತು ಭಾಷಣ ಬಸವನಾಳರ ಮನಸ್ಸನ್ನು ಸೂರೆಗೊಂಡಿತು. ಅವರು ಶಾಸ್ತ್ರಿಗಳಿಗೆ ಮಾರ್ಗದರ್ಶನದ ರೀತಿಯಲ್ಲಿ ಹೇಳಿದರು; ಉಪಾಧ್ಯಾಯ ವೃತ್ತಿಯನ್ನು ಅವಲಂಭಿಸಿ ಪ್ರತಿಭೆಯನ್ನು ಸೀಮಿತಗೊಳಿಸಿಕೊಳ್ಳುವುದಕ್ಕಿಂತ ಕೀರ್ತನೆ ಮತ್ತು ಭಾಷಣಗಳಿಂದ ದೇಶದೆಲ್ಲೆಡೆ ಸಂಚರಿಸಿ ಕನ್ನಡ ಸಾಹಿತ್ಯ ಸಿರಿಯನ್ನು, ಪ್ರಚಾರಮಾಡುವುದು ಸರಿಯಾದುದು. ಇದರಿಂದ ಕನ್ನಡದ ಕೆಲಸವೂ ಆಯಿತು, ನಿಮ್ಮ ಜೀವನವೂ ಸಾಗೀತು. ಈ ದಾರಿ ತೋರಿಕೆಯಿಂದ ಶಾಸ್ತ್ರಿಗಳ ಬದುಕು ಸಾಹಿತ್ಯದ ಬದುಕಾಗಿ ಜೀವನದ ಬಾಗಿಲು ತೆರೆದಂತಾಯಿತು. ಕೀರ್ತನ ಕಲೆ ವೃತ್ತಿಯಾಯಿತು. ಭಾಷಣ ಕಲೆ ಪ್ರವೃತ್ತಿಯಾಯಿತು. ಕರೆದಲ್ಲಿಗೆ ಹೋದರು. ಸಾಹಿತ್ಯವನ್ನು ಸಂಗೀತದ ಮೂಲಕ ಪ್ರಚಾರಮಾಡಿದರು. ಹೆಸರು ವಾಸಿಯಾದರು. ಶಾಸ್ತ್ರಿಗಳ ಶರೀರ ಮತ್ತು ಶಾರೀರದಲ್ಲಿ ಸಾಹಿತ್ಯ - ಸಂಗೀತ - ವಾಗ್ವೈಖರಿ ಮುಪ್ಪುರಿಗೊಂಡು ನಡೆದಾಡುವ ವಾಚಸ್ಪತಿಗಳೇ ಆಗಿಹೋದರು.

1927 ರಲ್ಲಿ ನಾಲ್ವಡಿಕೃಷ್ಣರಾಜೇಂದ್ರ ಒಡೆಯರ್ ಅವರು ತುಮಕೂರಿಗೆ ಬಂದಿದ್ದರು. ಅವರ ಜೊತೆ ದಿವಾನರಾದ ಮಿರ್ಜಾಇಸ್ಮಾಯಿಲ್ ಅವರೂ ಬಂದಿದ್ದರು. ಮೈಸೂರು ಮಹಾರಾಜರ ದರ್ಬಾರ್ ವಿಶಿಷ್ಟ ಜನರಿಂದ ನಡೆದಿತ್ತು. ಆಗ್ಗೆ ಶಾಸ್ತ್ರಿಗಳಿಗೆ ಇಪ್ಪತ್ತೆರಡರ ತಾರುಣ್ಯ, ಯೌವನದ ಜೊತೆ ಕವಿತಾಶಕ್ತಿಯೂ ಜೊತೆಗಾರನಾಗಿತ್ತು. ನಾಲ್ವಡಿ ಕೃಷ್ಣರಾಯ ವಿಳಾಸ ಎಂಬ ಚಿಕ್ಕ ಚಂಪೂಕಾವ್ಯವನ್ನು ರಚಿಸಿ ರಾಜಸಭೆಯಲ್ಲಿ ವಾಚಿಸುವ ಅವಕಾಶ ಪಡೆದುಕೊಂಡರು. ಶಾರದಾಂಬೆಯ ಅಂಬಾರಿ ಹೊರುವ ಆನೆಯಾದರು. ಆನೆ ನಡೆದಕ್ಕೆ ಹಾದಿ ಎನ್ನುವಂತೆ ಅಂದು ತಮ್ಮೊಳಗಿದ್ದ ಕಾವ್ಯ ಚೇತನವನ್ನು ಪ್ರಕಟಪಡಿಸಿದರು. ಸಭೆಯಲ್ಲಿದ್ದ ಪಂಡಿತರು ಶಾಸ್ತ್ರಿಗಳ ಕವಿತ್ವಕ್ಕೆ ತಲೆದೂಗಿದರು. ವಿಶೇಷವಾಗಿ ದಿವಾನ್‌ಮಿರ್ಜಾ ಇಸ್ಮಾಯಿಲರ ಗಮನ ಸೆಳೆದಿದ್ದರು. ದಿವಾನರ ಪರಿಚಯವಾಯಿತು. ದಿವಾನರು ಶಾಸ್ತ್ರಿಗಳನ್ನು ಬೆಂಗಳೂರಿನಲ್ಲಿ ವಾಸಿಸುವಂತೆ ಸಲಹೆ ನೀಡಿದರು. ಶಾಸ್ತ್ರಿಗಳ ಮನಸ್ಸು ಬೆಂಗಳೂರಿನತ್ತ ಹೊರಳಿತು.

ಕರ್ನಾಟಕ ಏಕೀಕರಣ, ಮತ್ತು ಭಾರತ ಸ್ವಾತಂತ್ರ್ಯ ಚಳುವಳಿ ಎರಡೂ ಕನ್ನಡದ ನೆಲದ ಪ್ರಚಲಿತ ವಿದ್ಯಮಾನಗಳಾಗಿದ್ದವು. ಆಲೂರ ವೆಂಕಟರಾಯರು, ಮುದವೀಡು ಕೃಷ್ಣರಾಯರು, ಹರ್ಡೇಕರ್ ಮಂಜಪ್ಪನವರು, ಕರ್ನಾಟಕ ಏಕೀಕರಣದ ಕಹಳೆಯನ್ನು ಮೊಳಗಿಸುತ್ತ ಜೊತೆಗೆ ಭಾರತ ಸ್ವಾತಂತ್ರದ ಚಳುವಳಿಯಲ್ಲಿ ಭಾಗವಹಿಸುತ್ತಿದ್ದರು. ಹರೆಯದಲ್ಲಿಯೇ ಕನ್ನಡ ಸಾಹಿತ್ಯ ಪ್ರೇಮವನ್ನು ಹೊಂದಿದ ಶಾಸ್ತ್ರಿಗಳು ಕಡಪ ರಾಘವೇಂದ್ರರಾಯರು, ಕೊಪ್ಪಳದ ಜಯರಾಮಾಚಾರ್ಯರು ದೇಶಪಾಂಡೆ ಗಂಗಾಧರರಾಯರಂಥ ಹಿರಿಯ ಕನ್ನಡಾಭಿಮಾನಿಗಳ ಪರಿಚಯ ಮಾಡಿಕೊಂಡರು. ಹೋದಲ್ಲಿ, ಬಂದಲ್ಲಿ ಸ್ವಾತಂತ್ರ್ಯ ಚಳುವಳಿಯ ಮಹತ್ವದ ಬಗ್ಗೆ ಕರ್ನಾಟಕ ಏಕೀಕರಣದ ಅಗತ್ಯವನ್ನೂ ತಮ್ಮ ಪ್ರವಚನದೊಳಕ್ಕೆ ಸೇರಿಸಿಕೊಳ್ಳುತ್ತಿದ್ದರು. ಪುರಾಣಕತೆಗಳ ಜೊತೆಗೆ ಪ್ರಚಲಿತ ವಿದ್ಯಮಾನಗಳನ್ನು ಜಲಕ್ಕನೆ ಸೇರಿಸಿ ಪ್ರವಚನಕ್ಕೊಂದು ವಿಶಿಷ್ಟತೆಯನ್ನು ತಂದು ಕೊಡುತ್ತಿದ್ದರಿಂದ ಕೆಲವರು ಅವರಿಗೆ "ರಾಜಕೀಯ ಕೀರ್ತನಕಾರ" ಎಂದು ಅಣಕದ ಬಿರುದನ್ನು ಶಾಸ್ತ್ರಿಗಳಿಗೆ ಅಂಟಿಸಿಯೂ ಇದ್ದರು.

ಮಾಗಡಿ ವೀರಪ್ಪಶಾಸ್ತ್ರಿಗಳು ಬಹುದೊಡ್ಡ ವಿದ್ವಾಂಸರೂ, ಕೀರ್ತನಕಾರರೂ, ಸಂಶೋಧಕರೂ ಲೇಖಕರೂ ಆಗಿದ್ದರು, ಅಷ್ಟಾವರಣ, ವಿಚಾರದರ್ಪಣ, ಶ್ರೀಸಿದ್ಧಲಿಂಗೇಶ್ವರ ಸಾಂಗತ್ಯ, ಕೋಳೂರುರೊಡಗೂಡಿನ ಕತೆ, ಇತ್ಯಾದಿ ವೀರಶೈವ ಸಾಹಿತ್ಯಗಳನ್ನು ರಚಿಸಿ ಪ್ರಕಟಿಸಿದ್ದರು. ಮೂಲತಃ ಸೋಲೂರಿನುರಾದ ಎಸ್. ವೀರಪ್ಪಶಾಸ್ತ್ರಿಗಳು, ಮಾಗಡಿಯಲ್ಲಿ ನೆಲಿಸಿದ್ದರು. ಕೆಲವು ಕಾಲ ತುಮಕೂರಿನ ಸಿದ್ದಗಂಗೆಯಲ್ಲಿ ಓದಿಸುವ ಕೂಲಿಮಠದಯ್ಯಗಳಾಗಿಯೂ ಸೇವೆಸಲ್ಲಿಸಿದ್ದರು. ಇವರಿಗೆ ತುಮಕೂರು ನಂಜುಂಡ ಶಿವಯೋಗಿಗಳ ಮಾರ್ಗದರ್ಶನ ದೊರಕಿತ್ತು. ಮಾಗಡಿಯಲ್ಲಿರುತ್ತಾ ವೀರಶೈವ ಧರ್ಮದ ಬಗ್ಗೆ ನಿಯತಕಾಲಿಕೆಯೊಂದನ್ನು ಪ್ರಕಟಿಸುತ್ತಾ ವೀರಶೈವ ಸಾಹಿತ್ಯ ಗ್ರಂಥಗಳನ್ನು ಎತ್ತಿನ ಗಾಡಿಯಲ್ಲಿ ತುಂಬಿಕೊಂಡು, ಸಂತೆ-ಸಂತೆಗೆ ಹೋಗಿ ಮಾರಾಟ ಮಾಡುತ್ತಾ ಜನರಲ್ಲಿ ವಾಚನಾಭಿರುಚಿಯನ್ನು ಬೆಳೆಯಿಸುತ್ತಿದ್ದರು. ತುಮಕೂರಿನಲ್ಲಿದ್ದಾಗ, ಶಿವಮೂರ್ತಿಶಾಸ್ತ್ರಿಗಳು ಮಾಗಡಿ ವೀರಪ್ಪಶಾಸ್ತ್ರಿಗಳಿಂದ ಹಲವು ಶ್ರೇಷ್ಠಗ್ರಂಥಗಳನ್ನು ವಾಚಿಸುವ, ಅರ್ಥೈಸುವ ರೀತಿಯನ್ನು ಕಲಿತರು. ಹೀಗೆಯೇ ಕಲಿಯುತ್ತ ಕಲಿಯುತ್ತ ಗಮಕ ಕಲೆಯಿಂದ ಕೀರ್ತನ ಕಲೆಗೆ ಮಾಧ್ಯಮವನ್ನು ಬದಲಾಯಿಸಿಕೊಂಡರು. ಇದೇ ಹೊತ್ತಿನಲ್ಲಿ ಮೈಸೂರು ಆಸ್ಥಾನವಿದ್ವಾಂಸರಾದ ಪಿ.ಆರ್. ಕರಿಬಸವಶಾಸ್ತ್ರಿಗಳು ತುಮಕೂರಿಗೆ ಬಂದು ನೆಲೆಸಿದರು. ಅವರಿಗೆ ವೃತ್ತಿಯಿಂದ ನಿವೃತ್ತಿಯಾಗಿತ್ತು. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಂಥ ಮೇಧಾವಿಗಳಿಗೆ ಪಿ.ಆರ್. ಕರಿಬಸವಶಾಸ್ತ್ರಿಗಳು ವಿದ್ಯಾಗುರುಗಳಾಗಿದ್ದರು, ಎಂಬುವನಿಲ್ಲಿ ನಾವು ನೆನೆಯಬೇಕು. ಶಾಸ್ತ್ರಿಗಳು ಕರಿಬಸವಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಅಥವಾ ಶಿಷ್ಯವೃತ್ತಿಯಲ್ಲಿ ಬದುಕಲು ಬೇಕಾದುದಕ್ಕಿಂತಲೂ ಹೆಚ್ಚಿನ ಕಾವ್ಯಾಭ್ಯಾಸ ಮಾಡಿದರು. ಆರುವರ್ಷಗಳು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಗಳನ್ನು ಅವರಿಂದ ಪಾಠ ಹೇಳಿಸಿಕೊಂಡರು.

ವೃತ್ತಿ-ಪ್ರವೃತ್ತಿಗಳೆರಡೂ ಕೀರ್ತನೆಯೇ ಆದ್ದರಿಂದ, "ಕೀರ್ತನ ಕೇಸರಿ" ಎಂಬ ಬಿರುದು ಹೊಂದುವ ಮಟ್ಟಿಗೆ ಪ್ರಬುದ್ಧತೆ ಸಂಪಾದಿಸಿದರು. ಕನ್ನಡ ಸಾಹಿತ್ಯ ಕೃತಿಗಳನ್ನು ಕೀರ್ತನೆಗೆ ಅಳವಡಿಸಿಕೊಳ್ಳುವುದು ಸರಳ ಕಥಾ ಕಾಲಕ್ಷೇಪದಂತೆ ಸದರವಾಗಿರಲಿಲ್ಲ. ಹರಿಹರನ ಗಿರಿಜಾಕಲ್ಯಾಣ, ಷಡಕ್ಷರ ಕವಿಯ ರಾಜಶೇಖರ ವಿಳಾಸ, ಮುಂತಾದ ಕಬ್ಬಿಣದ ಕಡಲೆ ಹಳಗನ್ನಡವನ್ನು ಹುರಿದು 'ಅವಲು' ಮಾಡಿ ಶ್ರೋತೃಗಳಿಗೆ ವಿತರಿಸುತ್ತಿದ್ದರು. ಇವರ ಕೀರ್ತನ ಕಲೆಯನ್ನು ಕಂಡವರು ಈಗಲೂ ಇದ್ದಾರೆ; ಶಾಸ್ತ್ರಿಗಳು ನವರಸಗಳ ನುಡಿ ಜಾಣ್ಮೆಗೆ, ಸಭಿಕರು ನಗೆಗಡಲಿನಲ್ಲಿ ತೇಲಿದರೆ, ಶೋಕರಸ ಬಂದಾಗ ಹನಿಗಣ್ಣಾಗಿ ಬಿಡುತ್ತಿದ್ದರು. ಕೀರ್ತನೆಯ ಮಧ್ಯೆ ಹೇಳುತ್ತಿದ್ದ ಉಪಕಥೆಗಳು ಸಾಮಾನ್ಯ ಹಾಸ್ಯೋಕ್ತಿಗಳಾಗಿರದೆ ಅರ್ಥದಲ್ಲಿ ಉಪಾಖ್ಯಾನದಷ್ಟೇ ಮಹತ್ವ ಪಡೆಯುತ್ತಿದ್ದವು. ಕೀರ್ತನೆಗಳಷ್ಟೇ ಅಲ್ಲದೆ ಶಾಸ್ತ್ರಿಗಳು ಅನೇಕ ಸಭಾ ಕಲಾಪಗಳಲ್ಲಿ ಮತ್ತು ಸಾಹಿತ್ಯಸಮ್ಮೇಳನಗಳಲ್ಲಿ ತಪ್ಪದೆ ಆಹ್ವಾನಿತರಾಗುತ್ತಿದ್ದರು. ತಾವೇ ರಚಿಸಿಕೊಂಡ "ಕರ್ನಾಟಕ ವೈಭವ" ಶೀರ್ಷಿಕೆಯ ಕೀರ್ತನೆ ಸಾವಿರ, ಸಾವಿರ ಸಂಖ್ಯೆಯ ಸಭಿಕರನ್ನು ಮೂಕ ವಿಸ್ಮಿತರನ್ನಾಗಿ ಮಾಡುತ್ತಿದ್ದವು. ಶಾಸ್ತ್ರಿಗಳ ಶಿವಕಥೆಯನ್ನು ಅನುಭವಿಸಿದ್ದ ಕಾದಂಬರಿಕಾರ `ನಿರಂಜನ'ರು ತಮ್ಮದೊಂದು ಲೇಖನದಲ್ಲಿ ದಾಖಲಿಸಿರುವಂತೆ "ಶಾಸ್ತ್ರಿಗಳವರಮನೆ - ಗುರಮನೆಗಳೆರಡರಲ್ಲೂ ಪುರಸ್ಕೃತರು ಅವರ ಶಿವ ಕಥೆಗೆ ಹತ್ತು ಸಾವಿರಜನ ಸೇರುತ್ತಿದ್ದರು. ಪ್ರೊ॥ ಡಿ.ಕೆ.

ಭೀಮರಾಯರು ಶಾಸ್ತ್ರಿಗಳ ಕೀರ್ತನ ಕಲೆಯನ್ನು ಪ್ರಶಂಸಿಸಿ ಹೇಳಿರುವ ಮಾತುಗಳು ತುಂಬಾ ಮೌಲ್ಯಭರಿತವಾಗಿವೆ. "ಶ್ರೀಕಂಠನು ಶಾಸ್ತ್ರಿಗಳಿಗೆ ಪ್ರಶಸ್ತವಾದ ಕಂಠಶ್ರೀ ಪ್ರಸಾದಿಸಿದ್ದಾನೆ. ವೇದಿಕೆಯಲ್ಲಿ ನಿಂತೊಡನೆ ವಾಗ್ದೇವಿಯು ಶಾಸ್ತ್ರಿಗಳ ನಾಲಿಗೆಯನ್ನು ರಂಗಸ್ಥಳ ಮಾಡಿಕೊಂಡು ತಾಂಡವವಾಡುತ್ತಾಳೆ, ಪೂರ್ವಸಿದ್ಧತೆಯಿಲ್ಲದೆ, ವಾಕ್ಪ್ರವಾಹ ನಿರರ್ಗಳ ಜಾಹ್ನವಿಯಂತೆ ಪ್ರವಹಿಸುತ್ತದೆ. ತಮ್ಮ ವಾಕ್ಚಾತುರ್ಯದಿಂದ ಸಹಸ್ರಾರು ಜನರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಾರೆ. ಶಬ್ದಗಳ ಹುಡುಕಾಟವಿಲ್ಲ ಅವೇ ಅಹಮಿಕೆಯಿಂದ ಶಾಸ್ತ್ರಿಗಳನ್ನು ಹುಡುಕಿಕೊಂಡು ಧಾವಿಸಿಬರುತ್ತವೆ. ಇದು ಶಾರದೆಯ ಪ್ರಸಾದವಲ್ಲದೆ ಮತ್ತೇನು? ಪ್ರೊ|| ಭೀಮರಾಯರ ಮಾತುಗಳಲ್ಲಿ ಅತಿಶಯೋಕ್ತಿಗಳಿಲ್ಲ ಅವರ ಮಾತಿನಲ್ಲಿ ವಾಸ್ತವತೆಯಿರುವುದನ್ನು ಅರಿತ ಅನೇಕರಲ್ಲಿ ನಾನೊಬ್ಬನಾಗಿದ್ದೇನೆ.

ಕನ್ನಡದ ಹಳೆತಲೆಮಾರಿನ ಸಾಹಿತಿಗಳು ತಮ್ಮ ಕೃತಿಗಳನ್ನು ಸಹೃದಯರು ಕೊಂಡು ಓದುವಂತೆ ಓಲೈಸುತ್ತಿದ್ದರು. ಅದು ತಪ್ಪೆಂದು ನಮಗೀಗ ಅನ್ನಿಸುವುದಿಲ್ಲ. ಬರಹಗಾರರು ಓದುಗರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳದಿದ್ದರೆ ಬರೆದು ಪ್ರಾರಬ್ಧದ ಪರಿಯಲ್ಲಿ ಬೆನ್ನಿಗಂಟಿಕೊಳ್ಳುತ್ತಿತ್ತು. ಶಾಸ್ತ್ರಿಗಳು ಕನ್ನಡದ ಪ್ರಕಟಣೆಗಳನ್ನು ಕೊಂಡು ಓದುವಂತೆ ಪ್ರೇರೇಪಿಸುತ್ತಿದ್ದರು. ಅವರ ಕೀರ್ತನೆಗಳ ನಡುನಡುವೆ ಮನೆ - ಮಠಗಳ ಪೂಜಾಗೃಹಗಳಲ್ಲಿ ಪೂಜೆಗಿಟ್ಟು ನೀರು-ಎಣ್ಣೆ- ಹೊಗೆ ಹಿಡಿಸುತಿದ್ದ ಪ್ರಾಚೀನ ತಾಡವಾಲೆ ಗ್ರಂಥ ಪ್ರತಿಗಳನ್ನು ಓದಲು ಕೊಡುವಂತೆ; ತಮಗೇ ಕೊಡುವಂತೆ ಮನವೊಲಿಸುವ ಮಾತಾಡುತ್ತಿದ್ದರು. ಪ್ರಕಟವಾದ ಮೇಲೆ ನಿಮ್ಮ ನಿಮ್ಮ ಪವಿತ್ರ ತಾಡವಾಲೆಗಳನ್ನು ನಿಮಗೇ ಹಿಂತಿರುಗಿಸುತ್ತೇನೆ, ಪ್ರಾಚೀನ ಓಲೇ ಕಟ್ಟುಗಳಲ್ಲಿ ಏನಿದೆ? ಎಂದು ನೋಡದಿದ್ದರೆ ಅದರಲ್ಲಿ ಬರೆದಿರುವ ಅಮೂಲ್ಯ ಜ್ಞಾನವೆಲ್ಲ ತಾಡವಾಲೆಗರಿಗಳ ಜೊತೆ ನಶಿಸಿ ಹೋಗುವುದು ಖಂಡಿತ, ತಾಡವಾಲೆ ಗ್ರಂಥಗಳು ನಮ್ಮ ಹಿರಿಯರು ನಮಗೆ ಬಿಟ್ಟು ಹೋಗಿರುವ ಸಾಹಿತ್ಯ ಭಂಡಾರ, ಅವುಗಳ ಬಗ್ಗೆ ಪೂಜ್ಯ ಭಾವನೆ ಇರಿಸಿಕೊಳ್ಳುವುದು ತಪ್ಪಲ್ಲ ಅಂತಹ ಪೂಜ್ಯ ಭಾವನೆ ಇರಿಸಿಕೊಂಡದ್ದರಿಂದಲೇ ಅವು ಈ ತನಕ ಉಳಿದುಬಂದಿವೆ. ಇದೀಗ ಅವುಗಳು ಪುಸ್ತಕ ರೂಪದಲ್ಲಿ ಸಹೃದಯರ ಕೈ ಸೇರಿದರೆ ಗ್ರಂಥಕಾರರ ಆತ್ಮಕ್ಕೆ ಸಂತೋಷವಾಗುತ್ತದೆ. ತಾಡವಾಲೆ ಗ್ರಂಥಗಳನ್ನು ಯಾವ ಕಾರಣಕ್ಕೂ ಹಾಳು ಮಾಡಬೇಡಿ ಎಂದು ಮನಕರಗುವಂತೆ ಹೇಳುತ್ತಿದ್ದರು.

ನಾನು ಕೇಳಿದ ಶಾಸ್ತ್ರಿಗಳ ಕೊನೆಯ ಭಾಷಣವನ್ನಿಲ್ಲಿ ಪ್ರಸ್ತಾಪ ಮಾಡಬೇಕೆನ್ನಿಸುತ್ತಿದೆ. 1975 ಮೇ ತಿಂಗಳಿರಬಹುದು. ಸಿದ್ಧಗಂಗೆಯ ಮಠದ ಉತ್ತರಾಧಿಕಾರಿಯಾಗಿ ಶೀತಕಲ್ಲಿನ ಜಗದೀಶ್ ಎಂಬುವರು ಆಯ್ಕೆಯಾಗಿದ್ದರು ಅವರಿಗೆ ಗೌರೀಶಂಕರ ಸ್ವಾಮಿಗಳೆಂದು ಹೆಸರಿಟ್ಟು ಲಕ್ಷಾಂತರ ಭಕ್ತಜನರ ಸಮ್ಮುಖದಲ್ಲಿ ವಿರಕ್ತ ಪಟ್ಟಾಭಿಷೇಕ ಕಾರ್ಯಕ್ರಮ ನಡೆಸಲಾಗಿತ್ತು. ಆಗಿನ ಭಾರತ ರಾಷಪತಿ ನೀಲಂಸಂಜೀವ ರೆಡ್ಡಿಯವರು ಆಗಮಿಸಿದ್ದರು. ಪ್ರಧಾನ ಸಭೆಯ ನಂತರ ವಿದ್ವಾಂಸರ ಗೋಷ್ಠಿ ನಡೆಯಿತು. ಶಾಸ್ತ್ರಿಗಳೇ ಮುಖ್ಯ ಭಾಷಣಕಾರರು. ಸಿದ್ದಗಂಗೆಯ ಸ್ಥಳಮಹಿಮೆ, ಚಾರಿತ್ರಿಕ ವಿಷಯಗಳು; ಹೀಗೆ ವಾಗ್ವಾಹರಿ ಹರಿಸಿದ್ದರು. ಸಭಿಕರು ಶಾಸ್ತ್ರಿಗಳ ಪ್ರತಿ ಮಾತಿಗೆ ಚಪ್ಪಾಳೆ ಹೊಡೆಯುತ್ತಿದ್ದರು. ಸ್ವಾರಸ್ಯ ವಿಷಯದ ಸಂದರ್ಭಗಳಲ್ಲಿ ಶ್ರೋತೃಗಳು ಮೌನವಹಿಸಿ ಕುಳಿತರೆ

“ಯಾಕ್ರೀ ಸುಮ್ಮೆಕೂತಿರಿ ಹೊಡೀರೀ ಚಪ್ಪಾಳೆ” ಎಂದು ಶಾಸ್ತ್ರಿಗಳೇ ಪ್ರೇರೇಪಿಸುತ್ತಿದ್ದರು. ಪಟ್ಟಾಭಿಷಿಕ್ತ ಸ್ವಾಮಿಗಳಿಗೆ ಗೌರೀಶಂಕರ ಸ್ವಾಮಿಗಳೆಂದು ಹೆಸರಿಟ್ಟಿದ್ದು ಬಹು ಸೂಕ್ತವೂ ಅರ್ಥಪೂರ್ಣವೂ ಆಗಿದೆ; ಸಿದ್ಧಗಂಗೆಯ ಕೀರ್ತಿ ಪತಾಕೆಯನ್ನು ಗೌರೀಶಂಕರದೆತ್ತರಕ್ಕೆ ಕೊಂಡೊಯ್ಯುವ ಆಶಯದಿಂದ ಹೆಸರು ಸೂಕ್ತವಾಗಿದೆ ಎಂದಿದ್ದರು. ಆ ಮಾತಿಗೆ ಭಕ್ತರು ಸುದೀರ್ಘ ಚಪ್ಪಾಳೆ ಹೊಡೆದಿದ್ದರು.

## ಕರ್ನಾಟಕ ಏಕೀಕರಣ

ಕನ್ನಡ ಭಾಷಿಕ ಪ್ರದೇಶ, ಈ ದೇಶೀಯರ ಕನಸಿನ ಕರ್ನಾಟಕ ಅತ್ತಷ್ಟು ಇತ್ತಷ್ಟು ಹರಿದು ಹಂಚಿ ಹೋಗಿತ್ತು. ಮಲೆಯಾಳ ದೇಶಕ್ಕೆ ಒಂದಷ್ಟು, ಆಂಧ್ರ ದೇಶಕ್ಕೆ ಒಂದಷ್ಟು ಮಹಾರಾಷ್ಟ್ರಕ್ಕೆ ಒಂದಷ್ಟು ಹೀಗೆ ನೆರೆ ಭಾಷಿಕ ದೇಶಗಳ ಆಡಳಿತಕ್ಕೊಳಪಟ್ಟ ಕನ್ನಡ ನಾಡು, ಕನ್ನಡ ಜನರು ಕೇವಲ ಮನೆ ಮಾತಾಗಿ ಕನ್ನಡವನ್ನು ಆಡಿಕೊಳ್ಳಬೇಕಾದ ಸ್ಥಿತಿಯತ್ತ ಜಾರುತ್ತಿತ್ತು. ಮಹಾರಾಷ್ಟ್ರ ಭಾಷಿಕ ಪ್ರದೇಶದ ಆಡಳಿತಕ್ಕೊಳಪಟ್ಟ ಕನ್ನಡಿಗರು ತಮ್ಮ ಮಕ್ಕಳನ್ನು ಮರಾಠಿ ಶಾಲೆಗಳಲ್ಲಿ ಓದಿಸಬೇಕಾಗಿತ್ತು. ಹೈದ್ರಾಬಾದ್ ಕರ್ನಾಟಕ ಪ್ರದೇಶದವರು ಉರ್ದು, ಇಲ್ಲವೇ ತೆಲುಗು ಭಾಷೆಯಲ್ಲಿ ಶಿಕ್ಷಣ ಪಡೆಯಬೇಕಾಗಿತ್ತು. ಆಯಾ ಪ್ರದೇಶಕ್ಕೆ ಸೇರಿದ ಕನ್ನಡಿಗರು ಅನ್ಯಭಾಷಿಕ ಆಡಳಿತ ಭಾಷೆಯನ್ನೇ ಒಪ್ಪಿಕೊಳ್ಳಬೇಕಾಗಿತ್ತು. ಆಡಳಿತವೆಲ್ಲಾ ಕನ್ನಡೇತರ ಭಾಷೆಗಳಲ್ಲಿಯೇ ನಡೆಯುತ್ತಿದ್ದರಿಂದ ಉತ್ತರಕರ್ನಾಟಕದ ಕನ್ನಡಿಗರು ಕಂಗಾಲಾಗಿ ಹೋಗುವ ಹಂತ ತಲುಪಿದ್ದರು. ವಚನ ಸಾಹಿತ್ಯದ ಚಳುವಳಿಯ ಮೂಲಕ ಕನ್ನಡವನ್ನು ಕಟ್ಟಿದ ಶರಣರು, ಹಾಗೂ ದಾರ್ಶನಿಕರ ಸುಲಲಿತ ಭಾಷೆ ತನ್ನ ಮೂಲ ಸತ್ವವನ್ನು ಕಳೆದುಕೊಳ್ಳುವ ಅನಾಥ ಸ್ಥಿತಿಗಿಳಿಯತೊಡಗಿತ್ತು. ಮರಾಠಿ ಭಾಷೆಯ ಆಕ್ರಮಣ ಕನ್ನಡ ಭಾಷೆಯ ಮೇಲೆ ನಡೆಯಿತು. ಹಾಗೆಯೇ ತೆಲುಗು ಭಾಷೆಯೂ, ತಮಿಳು ಭಾಷೆಯೂ, ಮಲೆಯಾಳಿ ಭಾಷೆಯೂ ಕನ್ನಡ ಭಾಷಿಕರ ಮೇಲೆ ಸವಾರಿ ಮಾಡತೊಡಗಿದ್ದವು.

ಕರ್ನಾಟಕ ಏಕೀಕರಣವೆಂಬುದು ಕೇವಲ ಭಾವನಾತ್ಮಕ ಸಮಾಗಮವಷ್ಟೇ ಅಲ್ಲ ಸಂಸ್ಕೃತಿಯೊಂದರ ಪುನರುತ್ಥಾನವೆಂದು ತಿಳಿದವರಲ್ಲಿ ಬೆನಗಲ್ ರಾಮರಾಯರೊಬ್ಬರು. ಅವರು ಕನ್ನಡದ ಮನಸ್ಸುಳ್ಳವರಾಗಿದ್ದರು. ಕವಿರಾಜಮಾರ್ಗವೆಂಬ ಪ್ರಾಚೀನ ಅಲಂಕಾರ ಗ್ರಂಥ ಹುಟ್ಟಿದ ವೇಳೆಯಲ್ಲಿ ಕನ್ನಡನಾಡು ಕಾವೇರಿಯಿಂದ ಗೋದಾವರಿ ನದಿಯವರೆಗೆ ಹಬ್ಬಿತ್ತು. ಕಾಲ ಕಳೆದಂತೆ ಭಾಷಿಕ ಪ್ರದೇಶ ವಿಸ್ತಾರವಾಗಬೇಕಾಗಿತ್ತು. ದುರ್ದೆಸೆಯಿಂದ ಸಂಕುಚಿತವಾಗಿದೆ, ಸದ್ಯಕ್ಕೆ ಭಾಷಿಕ ಕರ್ನಾಟಕವನ್ನಾದರೂ ಸಂಪಾದಿಸಿಕೊಳ್ಳೋಣ; ಒಂದೇ ಭಾಷೆಯನ್ನಾಡುವ ಜನ ಎರಡು-ಮೂರು ದೇಶಗಳಲ್ಲಿ ಬಾಳುವುದು ಬೇಡ, ಕನ್ನಡ ನಾಡಿನ ನುಡಿಗೆ ಎರಡು ಸಾವಿರ ವರ್ಷಗಳಷ್ಟು ಇತಿಹಾಸ ಇದೆ. ಉತ್ತರ ಕರ್ನಾಟಕದ ಜನ ನಮಗನ್ಯರಲ್ಲ. ಅಲ್ಲಿ ಮೇಲುನೋಟಕ್ಕೆ ಲಿಂಗಾಯ್ತರು ಅಧಿಕ ಸಂಖ್ಯೆಯಲ್ಲಿದ್ದಾರೆಂದು ಕಾಣಿಸಬಹುದು. ಶರಣರ ಚಳುವಳಿಯಿಂದಾಗಿ ಕೆಳಜಾತಿಯವರಿಂದ ಹಿಡಿದು ಮೇಲು ಜಾತಿಯವರೆವಿಗೂ ಲಿಂಗಧಾರಿಗಳಾಗಿದ್ದಾರೆ ಬಸವಣ್ಣನ ತತ್ವ-ವಿಚಾರಗಳನ್ನು ಪಾಲಿಸುತ್ತಿದ್ದಾರೆ. ಲಿಂಗಾಯ್ತರಲ್ಲಿ ಒಳಪಂಗಡಗಳಿವೆ, ಅವುಗಳ ನಡುವೆ ಹೊಂದಾಣಿಕೆ ಏರ್ಪಡುವುದು ಅಷ್ಟೊಂದು ಸರಳವಲ್ಲ. ಮಠಾಧಿಪತಿಗಳು

ಎಲ್ಲ ಲಿಂಗಾಯ್ತರನ್ನು ಒಂದು ಮಾಡುವ ಭಾವೈಕ್ಯತೆಯನ್ನು ವೇದಿಕೆಗಳಲ್ಲಿ ಮಾತ್ರ ಹೇಳಿ ಒಳಗೊಳಗೆ ಒಳಪಂಗಡವೆಂಬ ವಿಷ ವೃಕ್ಷದ ಬೇರಿಗೆ ನೇರವಾಗಿ ನೀರೆರೆಯುತ್ತಿದ್ದಾರೆ. ಭಾವೈಕ್ಯತೆಯ ಬರದಿಂದ ಲಿಂಗಾಯತ ಸಮುದಾಯ ಕ್ಷಯಿಸುತ್ತದೆ. ಆಚಾರವಿಚಾರಗಳಲ್ಲಿ ನಿರಾಸಕ್ತಿ ಹೊಂದುವ ಯಾವ ಜಾತಿ - ಧರ್ಮವೂ ಬಹುಕಾಲ ಉಳಿಯುವುದಿಲ್ಲ. ಲಿಂಗಾಯ್ತರು ಬೌದ್ಧಿಕ ಪ್ರಗತಿಗಿಂತ ಒಳಪಂಗಡಗಳ ಪಾರಮ್ಯದಲ್ಲಿಯೇ ತಮ್ಮೆಲ್ಲ ಪ್ರತಿಭೆಗಳನ್ನು, ಶಕ್ತಿಯನ್ನು ವ್ಯಯಮಾಡಿಕೊಳ್ಳುತ್ತಾರೆ. ಆಚಾರಕ್ಕೂ, ವಿಚಾರಕ್ಕೂ ಸಾಮರಸ್ಯವಿಲ್ಲದ ಆ ಜನ ವಿಗ್ರಹಾರಾಧನೆಯನ್ನು ನಿರಾಕರಿಸುವಷ್ಟೆ ತಾತ್ವಿಕವಾಗಿ ವ್ಯಕ್ತಿ ಪೂಜೆಯನ್ನು ನಿರಾಕರಿಸಲಾರರು. ಲಿಂಗಾಯ್ತರಲ್ಲಿ ಮಠಗಳಿರುವ ತನಕ ಅವರ ಒಳಪಂಗಡಗಳ ದ್ವೇಷಾಸೂಯೆಗಳು ನಾಮಾವಶೇಷವಾಗುವುದಿಲ್ಲ. ಕರ್ನಾಟಕ ಏಕೀಕರಣಕ್ಕೂ ಲಿಂಗಾಯ್ತರ ಪ್ರಾಬಲ್ಯಕ್ಕೂ ಸಂಬಂಧವೇ ಇಲ್ಲವೆಂದು ಕೆಲ ಲಿಂಗಾಯ್ತ ಮುತ್ಸದ್ದಿಗಳು ವಾದಿಸತೊಡಗಿದ್ದರು. ಮತ್ತೆ ಕೆಲವರು ಕರ್ನಾಟಕ ಏಕೀಕರಣವೆಂದರೆ ಲಿಂಗಾಯ್ತರ ಸಂಘಟನೆಯೆಂದೇ ಭಾವಿಸಿದ್ದರು.

ಬೆನಗಲ್ ರಾಮರಾಯರು, ಎನ್.ಬಾಲಕೃಷ್ಣ ಗಾಂಧೀವಾದಿಗಳಾದ ಟಿ.ಸಿದ್ದಲಿಂಗಯ್ಯ. ಈ ತ್ರಿಮೂರ್ತಿಗಳು ಕರ್ನಾಟಕ ಏಕೀಕರಣ ಸಂಘವನ್ನು ಬೆಂಗಳೂರಲ್ಲಿ ಸ್ಥಾಪಿಸಲು ಸಂಕಲ್ಪ ಮಾಡಿಕೊಂಡರು. ತಮ್ಮ ಜೊತೆಗೆ ಶಿವಮೂರ್ತಿಶಾಸ್ತ್ರಿಗಳನ್ನು ಸೇರಿಸಿಕೊಂಡು ಅವರಿಗೆ ಸಂಘದ ಕಾರ್ಯದರ್ಶಿ ಸ್ಥಾನ ನೀಡಿದರು. ಶಾಸ್ತ್ರಿಗಳಿಗೆ ಕರ್ನಾಟಕ ಏಕೀಕರಣ ಬೀಜಮಂತ್ರವಾಯಿತು. ಸ್ವತಂತ್ರ ಕರ್ನಾಟಕ ದಿನಪತ್ರಿಕೆ ಪ್ರಾರಂಭಿಸಿ ಕರ್ನಾಟಕ ಏಕೀಕರಣದ ಬಗ್ಗೆ ನಾಂದಿ ಕಹಳೆಯನ್ನು ಊದಿಯೇಬಿಟ್ಟರು.

ಸಂಘದ ಪ್ರಾರಂಭೋತ್ಸವವನ್ನು ಹಿರಿಯ ಕವಿಗಳ ಸಮಕ್ಷಮ ನಡೆಸಬೇಕೆಂದು ಅಭಿಮಾನಪಟ್ಟು ಪ್ರಸಿದ್ಧ ಹಿರಿಯ ಕವಿಗಳ ಬಳಿಗೆ ಹೋಗಿ ಆಹ್ವಾನಿಸಿದರು. ಹಿರಿಯ ಕವಿಗಳ ವೈದಿಕ ಸೂಕ್ಷ್ಮ ಬುದ್ದಿ ಬುಗ್ಗನೆ ಹೊತ್ತಿ ಉರಿಯ ತೊಡಗಿತು. ಬೆನಗಲ್ ರಾಮರಾಯರಿಗೆ ಬುದ್ಧಿ ಹೇಳುವ ರೀತಿಯಲ್ಲಿಯೂ ಶಿವಮೂರ್ತಿ ಶಾಸ್ತ್ರಿಗಳ ಮುಖಮುರಿಯುವಂತೆಯೂ ನುಡಿಜಾಲದಲ್ಲಿ ಇಬ್ಬರನ್ನು ಜಾಲಾಡಿಸಿ ಬಿಟ್ಟರು.

"ಅಲ್ರೀ ರಾಮರಾಯರೇ (ಬೆನಗಲ್ ರಾಮರಾಯರು) ನೀವೇ ವಿಚಾರ ಮಾಡಿ ನೋಡಿ ಈಗ ಮೈಸೂರಿನಲ್ಲಿ ಒಕ್ಕಲಿಗರ ರಾಜ್ಯವಿದೆ, ಕರ್ನಾಟಕ ಏಕೀಕರಣವಾದರೆ ವಿಶಾಲ ಕರ್ನಾಟಕ ಲಿಂಗಾಯರ ರಾಜ್ಯವಾಗುತ್ತದೆ. ವಿಶಾಲ ಕರ್ನಾಟಕದ ಯತ್ನಕ್ಕೆ ನಾವೂ-ನೀವೂ ಮುಂದಾದರೆ ಒಕ್ಕಲಿಗರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಸಧ್ಯಕ್ಕೆ ಒಕ್ಕಲಿಗರ ರಾಜ್ಯದಲ್ಲಿ ನಮಗೇನೂ ತೊಂದರೆಯಿಲ್ಲ. ಲಿಂಗಾಯತರು ಬಂದರೆ ನಮಗಾಗುವ ಲಾಭ ಅಷ್ಟರಲ್ಲೇ ಇದೆ. ಶಿವಮೂರ್ತಿಶಾಸ್ತ್ರಿಗಳಂತಹ ಲಿಂಗಾಯ್ತರಿಗೆ ಈ ಚಳುವಳಿಯಿಂದ ಅನುಕೂಲವಿದೆ ನಮಗೂ-ನಿಮಗೂ ಯಾಕೆ ಈ ಚಳುವಳಿ?

ಪ್ರಾರಂಭೋತ್ಸವಕ್ಕೆ ಬರಲು ಸಾಧ್ಯವಿಲ್ಲವೆಂದು ಹೇಳಲು ಆರೋಗ್ಯಾದಿ ಕಾರಣಗಳನ್ನು ಹೇಳಿ ತಪ್ಪಿಸಿಕೊಳ್ಳಬಹುದಾಗಿತ್ತು. ಆದರೆ ಆ ಹಿರಿಯ ವೈದಿಕ ಕವಿಗಳು ತಮ್ಮ ಅಂತರ್ಯದ ಅಭಿಪ್ರಾಯಗಳನ್ನು ಮುಖ-

ಮೋರೆ ನೋಡದೆ ಝಾಡಿಸಿ ಬಿಟ್ಟಿದ್ದರು. ಶಿವಮೂರ್ತಿ ಶಾಸ್ತ್ರಿಗಳು ಸಾವಿರ - ಸಾವಿರ ಜನರೆದುರು ನಿಂತು ನಿರರ್ಗಳವಾಗಿ ಮಾತನಾಡಿ ಆತ್ಮಸ್ಥೈರ್ಯವನ್ನು ಸಂಪಾದಿಸಿಕೊಂಡವರು. ಹಿರಿಯ ವೈದಿಕ ಕವಿಗಳ ಮಾತಿಗೆ ವಿಚಲಿತರಾಗಲಿಲ್ಲ. ಜೊತೆಗೆ ಸಂಘದ ಅಧ್ಯಕ್ಷರಾದ ಬೆನಗಲ್ ರಾಮರಾಯರೂ ಇದ್ದದ್ದರಿಂದ ಎದುರು ವಾದಿಸುವ ಮಾತು ಬೆಳಸಲಿಲ್ಲ. ಅದೇ ಹೊತ್ತಿನಲ್ಲಿ "ಹರಿದಾಸರ ಸಂಗ. ದೊರಕಿತು ಎನಗಿಂದು ಇನ್ನೇನಿನ್ನೇನು" ಎಂಬಂತೆ ಕರ್ನಾಟಕ ಏಕೀಕರಣವನ್ನು ನಿರಾಕರಿಸಿದರೂ ಶಾಸ್ತ್ರಿಗಳು ಅವರ ಸ್ನೇಹವನ್ನು ನಿರಾಕರಿಸಲಿಲ್ಲ. ಮುಖಸ್ತುತಿ ಮಾಡಿದವರನ್ನು ಗೌರವಿಸುವ ಪರಿಯಲ್ಲಿಯೇ ಹಿರಿಯ (ವೈದಿಕ) ಕವಿಗಳನ್ನು ಗೌರವಿಸಿ ತಮ್ಮ ಸ್ನೇಹದ ಬಲೆಗೆ ಕೆಡವಿಕೊಂಡರು. ಮುಂದೆ ಬಹುವರ್ಷಗಳಾದ ಮೇಲೆ, ಶಿವಮೂರ್ತಿಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗೆ ನಿಂತಾಗ ಇದೇ ಹಿರಿಯ ಕವಿಗಳು ತಮ್ಮ ಜಾತಿಯವರೇ ಆದ ಇನ್ನೊಬ್ಬ ಉಮೇದುವಾರರಿಗೆ ಮತ ಹಾಕದೇ ಶಿವಮೂರ್ತಿಶಾಸ್ತ್ರಿಗಳಿಗೆ ಮತ ಹಾಕಿಸಿ ಜಯ ದೊರಕಿಸಿ ಕೊಟ್ಟರು. ಪಾನಪ್ರಿಯರೂ, ನಿಷ್ಠೂರವಾದಿಯೂ ಆಗಿದ್ದ ಆ ಇನ್ನೊಬ್ಬ ಉಮೇದುವಾರನನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದಂಥ ಪವಿತ್ರ ಸ್ಥಾನಕ್ಕೆ ಆಯ್ಕೆ ಮಾಡಲು ಆ ಹಿರಿಯ ಕವಿಗೆ ಮನಬರಲಿಲ್ಲ. ಅದಿರಲಿ.

ಬೆನಗಲ್ ರಾಮರಾಯರಿಗೆ, ಹಿರಿಯ ಕವಿಗಳ ಮಾತಿಗೆ ಎದುರು ಮಾತು ಕೊಡದೇ ಸುಮ್ಮನಿರಲಾಗಲಿಲ್ಲ. ನಯವಾಗಿಯೇ ಹೇಳಿದರು. "ಸ್ವಾಮಿ ನನಗೆ ತಿಳಿದಿರುವ ಹಾಗೆ, ವಿಶಾಲ ಕರ್ನಾಟಕವಾದರೆ, ಲಿಂಗಾಯ್ತರು ಒಟ್ಟು ಜನಸಂಖ್ಯೆಯ ಐದನೇ ಒಂದು ಭಾಗದಷ್ಟಾಗುತ್ತಾರೆ. ಉಳಿದ ಐದನೇ ನಾಲ್ಕು ಭಾಗದಷ್ಟು ಜನಬೇರೆಯವರೂ ಇರುತ್ತಾರೆ. ಬಹುಮತದ ಲೆಕ್ಕಾಚಾರದಲ್ಲಿಯೂ ಲಿಂಗಾಯ್ತರಿಗೆ ಅಂತಹ ಮಹತ್ವವೇನೂ ದೊರೆಯುವುದಿಲ್ಲ. ಸ್ವಾಮಿ ತಾವೇ ಯೋಚಿಸಿ ನೋಡಿ, ಆಂಗ್ಲರ ಅಧೀನದಲ್ಲಿಯೋ, ಮರಾಠರ ಆಡಳಿತದಲ್ಲಿಯೋ ಮುಸಲ್ಮಾನರ ದರ್ಬಾರು ಆಡಳಿತಕ್ಕೊ ತಲೆಬಾಗಿ, ಪರಧರ್ಮ ಪರಭಾಷಿಕರ ಅಧೀನದಲ್ಲಿ ಇರುವುದಕ್ಕಿಂತ ನಮ್ಮವರೇ ಆದ ನಮ್ಮ ಧರ್ಮದವರೇ ಆದ, ನಮ್ಮ ಭಾಷೆಯವರೇ ಆದ, ಕನ್ನಡಿಗರೇ ಆದ ಲಿಂಗಾಯ್ತರ ಅಧಿಕಾರವನ್ನು ನಾವೇಕೆ ಒಪ್ಪಬಾರದು, ತಾವು ಹಿರಿಯರಿದ್ದೀರಿ, ಕನ್ನಡದ ಅಭಿವೃದ್ಧಿಗಾಗಿ ಬಹಳ ಕೆಲಸ ಮಾಡಿದ್ದೀರಿ, ನಿಮ್ಮ ಮಾಸ ಪತ್ರಿಕೆಗೆ 'ಕರ್ನಾಟಕ' ಎಂದು ಹೆಸರಿಟ್ಟು ಏಕೀಕರಣದ ಸ್ವಾಗತಕ್ಕೆ ನಾಂದಿ ಹಾಡಿದ್ದೀರಿ, ಹಳೇ ಮೈಸೂರು ಕರ್ನಾಟಕಕ್ಕೆ ಸೇರದೇ ಈ ನಾಡಿಗೆ 'ಕರ್ಣಾಟಕ' ಎಂಬ ಹೆಸರು ಬರಲು ಸಾಧ್ಯವಾಗುವುದಿಲ್ಲ, ತಾವು ಹಿರಿಯರು ನಮ್ಮ ಸಂಘದ ಉದ್ಘಾಟನೆಗೆ ಬರುವುದು ಸೂಕ್ತವೆನಿಸಿತು, ಅದಕ್ಕಾಗಿ ತಮ್ಮಲ್ಲಿಗೆ ಬಂದೆವು ನಮ್ಮ ಈ ಸಂಕಲ್ಪಕ್ಕೆ ನಿಮ್ಮ ಬೆಂಬಲವಿರಲಿ.

ಬೆನಗಲ್ ರಾಮರಾಯರು ಮೇಲೆದ್ದರು, ಶಾಸ್ತ್ರಿಗಳು ಕಳಚಲಿದ್ದ ಸ್ನೇಹದ ಕೊಂಡಿಗೆ ಬೆಸುಗೆ ಹಾಕುವಂತೆ ಸಾಂತ್ವನವಾಡಿ ವಾತಾವರಣ ತಿಳಿಗೊಳಿಸಿದ್ದರು.

1938 ರಲ್ಲಿ ಬೆನಗಲ್ ರಾಮರಾಯರ ಅಧ್ಯಕ್ಷತೆ ಮತ್ತು ನಾಯಕತ್ವದಲ್ಲಿ ಕರ್ನಾಟಕ ಏಕೀಕರಣ ಸಂಘ ವಿಧ್ಯುಕ್ತವಾಗಿ ನೆರವೇರಿತು. ಅಪ್ಪಟ ಗಾಂಧೀವಾದಿ, ಸತ್ಯಾನ್ವೇಷಕ ಟಿ. ಸಿದ್ದಲಿಂಗಯ್ಯನವರು ಕೋಶಾಧ್ಯಕ್ಷರಾಗಿ

ಸೇವೆ ಸಲ್ಲಿಸಲು ಮುಂದಾದರು. ಶಾಸ್ತ್ರಿಗಳು ಕಾರ್ಯದರ್ಶಿಗಳಾದರು. ಎನ್. ಬಾಲಕೃಷ್ಣರು ಉಪಾಧ್ಯಕ್ಷರಾದರು ಶಾಸ್ತ್ರಿಗಳ ಮನೆಯಿಂದಲೇ ಕರ್ನಾಟಕ ಏಕೀಕರಣ ಪ್ರಚಾರ ಪ್ರಾರಂಭವಾಯಿತು. ಕಡಿಮೆ ಬಾಡಿಗೆಯ ಜಟಕಾಬಂಡಿಯಲ್ಲಿ ಕುಳಿತು; ಧ್ವನಿವರ್ಧಕದಲ್ಲಿ ಕರ್ನಾಟಕ ಏಕೀಕರಣದ ಅಗತ್ಯವನ್ನು ನಾಗರೀಕರ ಮನಸ್ಸಿಗೆ ಮುಟ್ಟಿಸಿದರು. ಶಾಸ್ತ್ರಿಗಳು ಹಾಗೂ ಬೆನಗಲ್ ರಾಮರಾಯರು ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಚೇತನಗಳಾಗಿದ್ದರಿಂದ ಮಂಡಿವರ್ತಕರು, ವ್ಯಾಪಾರಿಗಳು ಖರ್ಚುವೆಚ್ಚಗಳಿಗೆಂದು ಉದಾರ ಕಾಣಿಕೆ ನೀಡ ತೊಡಗಿದರು. ಕುಹಕಿಗಳು ಶಾಸ್ತ್ರಿಗಳನ್ನು ಯದ್ವಾತದ್ವಾ ಗೇಲಿ ಮಾಡತೊಡಗಿದರು.

ದೇವಾನು ದೇವತೆಗಳ ಹಿರಿಮೆಯನ್ನು ಕೊಂಡಾಡಿ ಕೆಲ ದಿನಗಳು ಗೌರವ ಸಂಪಾದಿಸುವ ಜನರು ಬಂದು ಹೋಗಿರುತ್ತಾರೆ. ವ್ಯಕ್ತಿಯನ್ನು ಆರಾಧಿಸಿ ವ್ಯಕ್ತಿಯ ಅಳಿವಿನ ಜೊತೆಗೇ ಆ ವ್ಯಕ್ತಿಯನ್ನು ಮರೆಯುವವರೂ ಬಂದು ಹೋಗಿದ್ದಾರೆ. ರಾಜಕೀಯ ಪಕ್ಷಗಳನ್ನು ವೈಭವೀಕರಿಸಿ ಲಾಭವಾಗದಿದ್ದಾಗ ಪಕ್ಷಗಳತ್ತ ಬೆನ್ನು ಹಾಕಿದವರಿದ್ದಾರೆ. ಆದರೆ ಭಾಷೆಯ ಬಗ್ಗೆ ಚಳುವಳಿಗಿಳಿದ ಯಾರೊಬ್ಬರೂ ಬರಿಗೈಯಲ್ಲಿ ಮನೆಗೆ ಹೋಗಿಲ್ಲ. ಜಾತ್ಯಾತೀತ ಭಾಷೆಗೆ ಜನರ ಹೃದಯದ ಪ್ರೀತಿಯಿದ್ದೇ ಇರುತ್ತದೆ. ಭಾಷಾ ಚಳುವಳಿಯ ಹೆಸರು ಹೇಳಿಕೊಂಡು ಎಂಥೆಂಥವರೋ ಸಿರಿವಂತರಾದ ಕಥೆಗಳು ಬೇಕಾದಷ್ಟಿವೆ. “ಕನ್ನಡಕ್ಕೆ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ” ಎಂದು ಕವಿಗಳು ಕರೆಕೊಟ್ಟು ಸುಮ್ಮನಾದರೆ ಪುಡಾರಿಗಳು ಕವಿವಾಣಿಯನ್ನು ಪಾಲಿಸಿ ಸಂಪತ್ತು ಗಳಿಸಿದ್ದಾರೆ.

ಕೆಂಗಲ್ ಹನುಮಂತಯ್ಯನವರು ಮೈಸೂರು ಸರ್ಕಾರದ ಮುಖ್ಯ ಮಂತ್ರಿಗಳಾಗಿದ್ದರು. ಕರ್ನಾಟಕ ಏಕೀಕರಣ ಆಗಬೇಕೋ ಬೇಡವೋ ಎಂಬ ಗೊಂದಲದಲ್ಲಿದ್ದರು. ಶಿವಮೂರ್ತಿ ಶಾಸ್ತ್ರಿಗಳು ಏಕೀಕರಣಕ್ಕೆ ಬೆಂಬಲ ನೀಡುವಂತೆ ಕೆಂಗಲ್ಲರನ್ನು ಕೋರಿದರು. ಕೆಂಗಲ್ಲರು, ಶಾಸನ ಸಭೆಯ ಸದಸ್ಯರ ಅಭಿಪ್ರಾಯ ಸಂಗ್ರಹಿಸುವಂತೆ ಸೂಚಿಸಿ; ಬಹುತೇಕ ಶಾಸನ ಸಭಾ ಸದಸ್ಯರು ಆಗಲಿ ಎಂದರೆ ಅಭ್ಯಂತರವಿಲ್ಲ ಎಂದುಬಿಟ್ಟರು. ಶಾಸ್ತ್ರಿಗಳು ಶಾಸನ ಸಭಾಸದಸ್ಯರನ್ನು ಭೇಟಿಯಾದರು. ಕರ್ನಾಟಕ ಏಕೀಕರಣವಾದರೆ ಅಭಿವೃದ್ಧಿಯುಂಟಾಗಿ ದೇಶ ಉದ್ಧಾರವಾಗುತ್ತದೆಯೆಂದು ಸದಸ್ಯರ ಮನವೊಲಿಸಲು ಮುಂದಾದರು. ಬಹಳಷ್ಟು ಸದಸ್ಯರು ಕರ್ನಾಟಕ ಏಕೀಕರಣದಿಂದ ಒಕ್ಕಲಿಗರಿಗೆ ಅನ್ಯಾಯವಾಗುತ್ತದೆ ಎಂದು ಹಿಂಜರಿದರು. ಕೊನೆಗೆ ಬಿ. ಬಸವಲಿಂಗಪ್ಪನವರು ಆರ್ ಅನಂತರಾಮ್, ಬಿ.ಟಿ. ಕೆಂಪರಾಜನ್, ವಿ.ಆರ್.ನಾಯ್ಡು, ಬೇಲೂರು ಕೇಶವಮೂರ್ತಿ ಇತ್ಯಾದಿ ಮಹನೀಯರು ಕರ್ನಾಟಕ ಏಕೀಕರಣವಾಗಬೇಕೆಂದು ಬರೆದ ಅಭಿಪ್ರಾಯ ಪತ್ರಕ್ಕೆ ಸಹಿ ಮಾಡಿದರು. ಅದೇ ಕಾಲಕ್ಕೆ ಕಾಂಗ್ರೆಸ್ ವಿರೋಧಿ ಗುಂಪು ತುಂಬಾ ಪ್ರಬಲವಾಗ ತೊಡಗಿತ್ತು. ಕಾಂಗ್ರೇಸೇತರ ಶಾಸಕರಿಗೆ, ನಾಗಮಂಗಲದ ಶಾಸಕರಾದ ದೇಶಬಂಧು ಶಂಕರಲಿಂಗೇಗೌಡರು ಮುಂದಾಳುವಾಗಿದ್ದರು. ಅವರು ಕರ್ನಾಟಕ ಏಕೀಕರಣವಾಗಲೇಬೇಕೆಂದು ತಮ್ಮ ಅಭಿಪ್ರಾಯ ತಿಳಿಸಿದರು. ಶಾಸ್ತ್ರಿಗಳಿಗೆ ಹೊಸ ಹುರುಪು ಬಂದಂತಾಯಿತು. ಸ್ನೇಹಿತರಾಗಿದ್ದ ಕೆಂಗಲ್ಲರಿಗೆ ಶಾಸಕರು ಜಾತ್ಯಾತೀತವಾಗಿ ಏಕೀಕರಣವನ್ನು ಸ್ವಾಗತಿಸುತ್ತಿದ್ದಾರೆಂದು ವಿಷಧ

ಪಡಿಸಿ ಸಹಿ ಸಂಗ್ರಹದ ದಾಖಲೆಯನ್ನು ಮುಂದಿರಿಸಿದರು. ಕನ್ನಡ ಸಾಹಿತ್ಯದ ಅಭಿಮಾನಿಗಳಾಗಿದ್ದ ಕೆಂಗಲ್ಲರು ಕರ್ನಾಟಕ ಏಕೀಕರಣ ಚಳುವಳಿಯನ್ನು ನಿಷೇಧಿಸಲಿಲ್ಲ. ಪರೋಕ್ಷವಾಗಿ ಬೆಂಬಲಿಸಿದರೆಂದೇ ಹೇಳಬಹುದು.

ಕರ್ನಾಟಕ ಏಕೀಕರಣಕ್ಕೆ ಶಾಸ್ತ್ರಿಗಳು ಟೊಂಕ ಕಟ್ಟಿ ದುಡಿದರು. "ಕರ್ನಾಟಕ ವೈಜಯಂತಿ" ಎಂಬ ಪ್ರವಚನವನ್ನು ಸಭೆ ಸಮಾರಂಭಗಳಲ್ಲಿ ರಂಜನೀಯವಾಗಿ ಪ್ರಸ್ತುತ ಪಡಿಸುತ್ತಿದ್ದರು. ಶಾಸ್ತ್ರಿಗಳು ವೀರಶೈವರಾದ ಕಾರಣಕ್ಕೆ ಅನೇಕರು ಅವರ ಕರ್ನಾಟಕ ಏಕೀಕರಣದ ಬಗ್ಗೆ ಗುಮಾನಿಪಟ್ಟು ಕೊಂಡರು. "ಈ ಶಾಸ್ತ್ರಿ ವೀರಶೈವ ಸಮುದಾಯವನ್ನು ಸಂಘಟಿಸ ಹೊರಟಿದ್ದಾನೆ. ಉತ್ತರ ಕರ್ನಾಟಕದ ತುಂಬಾ ಲಿಂಗವಂತರೇ ತುಂಬಿದ್ದಾರೆ. ಅವರನ್ನು ಸೇರಿಸಿಕೊಂಡು ವಿಶಾಲಕರ್ನಾಟಕ ಮಾಡಿಕೊಂಡರೆ ವೀರಶೈವರು ರಾಜಕೀಯವಾಗಿ ಬಲಾಡ್ಯರಾಗುತ್ತಾರೆ ಎಂದೆಲ್ಲಾ ಟೀಕೆಗಳು ಹುಟ್ಟಿಕೊಂಡವು ಶಾಸ್ತ್ರಿಗಳು ಟೀಕೆಗಳಿಗಾಗಲೀ, ಪ್ರತಿವಾದಗಳಿಗಾಗಲೀ ಸೊಪ್ಪು ಹಾಕುತ್ತಿರಲಿಲ್ಲ.

ಕರ್ನಾಟಕ ಏಕೀಕರಣ ಚಳುವಳಿ ಹುಟ್ಟುವುದಕ್ಕೂ ಮುಂಚೆ ಸಾಹಿತ್ಯವಲಯದಲ್ಲಿ ಸಾಹಿತ್ಯಶಾರದೆಯ ಕೃಪೆಯಿಂದಲೇ ಬದುಕು ನಡೆಸುತ್ತಿದ್ದ ಅನೇಕ ಸಾಹಿತಿಗಳಿದ್ದರು. ಬರಹವನ್ನೇ ವೃತ್ತಿ ಮಾಡಿಕೊಂಡಿದ್ದ ಅ.ನ.ಕೃಷ್ಣರಾಯರಿದ್ದರು. ಮ. ರಾಮಮೂರ್ತಿಯವರಿದ್ದರು. ಗೊ.ರು. ರಾಮಸ್ವಾಮಿ ಅಯ್ಯಂಗಾರ್ಯರಿದ್ದರು. ದೇವುಡು ಅವರಿದ್ದರು, ಟಿ.ಕೆ. ರಾಮರಾಯರಿದ್ದರು. ಅವರೆಲ್ಲರ ಜೀವನಶೈಲಿಯೂ ಒಂದೇ ರೀತಿಯದಾಗಿತ್ತು. ಯಾರೊಬ್ಬರಿಗೂ ಸಿರಿವಂತಿಕೆಯಿರಲಿಲ್ಲ ಕನ್ನಡನಾಡು - ನುಡಿಯ ಸೇವೆಗೆ ಕಂಕಣ ಕಟ್ಟಿಸಿಕೊಂಡವರಂತೆ ಹೋರಾಟ ನಡೆಸುತ್ತಲೇ ಇದ್ದರು.

ಅ.ನ. ಕೃಷ್ಣರಾಯರಿಗೆ, ಶಿವಮೂರ್ತಿಶಾಸ್ತ್ರಿಗಳಿಗೆ, ದೇವುಡು ಅವರಿಗೆ ಮೈಸೂರು ಸರ್ಕಾರದ ದಿವಾನ ಮಿರ್ಜಾಇಸ್ಮಾಯಿಲದ ಪರಿಚಯವೂ ಸ್ನೇಹವೂ ಇತ್ತು. ಇವರೆಲ್ಲ ಆಸೆಪಟ್ಟಿದ್ದರೆ ಬೆಂಗಳೂರಿನ ಒಂದೊಂದು ಬಡಾವಣೆಯ ಒಡೆಯರಾಗಬಹುದಿತ್ತು. ಕನ್ನಡ ಸಾಹಿತ್ಯ ಸೇವೆಯಿಂದ ಲಭ್ಯವಾದ ಕೀರ್ತಿಯನ್ನು ಇವರಾರೂ ಸ್ವಂತಲಾಭಕ್ಕಾಗಿ ವಿನಿಮಯ ಮಾಡಿಕೊಳ್ಳಲಿಲ್ಲ. ಮಿರ್ಜಾಇಸ್ಮಾಯಿಲರು ಮತ್ತು ಶಿವಮೂರ್ತಿಶಾಸ್ತ್ರಿಗಳು ಮುಂಜಾನೆಯ ವಾಯುಸಂಚಾರದ ಗೆಳೆಯರಾಗಿದ್ದರು. ಅವರೊಂದು ದಿನ ಈಗಿನ ರೇಸ್‌ಕೋರ್ಸ್ ಇರುವ ಸ್ಥಳದಲ್ಲಿ ಆಗ್ಗೆ ದೊಡ್ಡ ಮಾವಿನ ತೋಪು ಇತ್ತು. ಅದನ್ನು ತೋರಿಸಿ ಶಾಸ್ತ್ರಿಗಳೇ ಈ ಭೂಮಿಯನ್ನು ನಿಮಗೆ ಮಂಜೂರು ಮಾಡಿಸಿಕೊಡುವ ಮನಸ್ಸಾಗಿದೆ ಎಂದರಂತೆ, ಶಾಸ್ತ್ರಿಗಳು ವಿನಮ್ರವಾಗಿ ನಿರಾಕರಿಸಿ "ಸ್ವಾಮಿ ನನ್ನ ಬಗ್ಗೆ ಪ್ರೀತಿಯಿದ್ದರೆ ಶರಣ ಸಾಹಿತ್ಯ ಪತ್ರಿಕೆಗೆ ಆಜೀವ ಸದಸ್ಯರಾಗಿ ಬಿಡಿ" ಎಂದರಂತೆ. ಆಕಾಲದ ಸಾಹಿತಿಗಳ ಮನಃಸ್ಥಿತಿ ಇಂಥದ್ದೇ ಆಗಿರುವ ಸಾಧ್ಯತೆಯಿತ್ತು. ಸ್ನೇಹವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವ ಮನಸ್ಸು ಇಂಥವರಿಗಿರಲಿಲ್ಲ.

ಕನ್ನಡ ನುಡಿ ನಿಪುಣರ ಹಕ್ಕೊತ್ತಾಯಕ್ಕೆ ವಿರುದ್ಧವಾಗಿ ಕನ್ನಡ ನಾಡಿಗೆ ವಿಶಾಲ ಮೈಸೂರು ಎಂಬ ಹೆಸರಿನಿಂದ ಏಕೀಕರಣವಾಯಿತು. ಶಾಸ್ತ್ರಿಗಳು ತುಂಬಾ ನೊಂದುಕೊಂಡರು. ಕರ್ನಾಟಕದ ಒಂದು ಹಳ್ಳಿಯ

ಹೆಸರನ್ನು ನಾಡಿಗೆ ಇಡುವುದೆಂದರೆ ನಮಗೆ ಇತಿಹಾಸ ಪ್ರಜ್ಞೆ ಇದ್ದೂ ಇಲ್ಲದಂತಾಗಿದೆ. "ವಿಶಾಲ ಮೈಸೂರು ಎಂಬ ಹೆಸರನ್ನು ಇಟ್ಟರೆ ಸರ್ವ ಕನ್ನಡಿಗರ ಭಾವನಾತ್ಮಕ ಸಂಬಂಧವೇರ್ಪಡುವುದಿಲ್ಲ. ರಾಜಕೀಯ ಅಥವಾ ಆಡಳಿತದ ಅನುಕೂಲಕ್ಕಾಗಿ ನಾಡು ಒಂದಾದರೆ ಪ್ರಯೋಜನವಿಲ್ಲ ಸಾಂಸ್ಕೃತಿಕವಾಗಿ ಒಂದೆನಿಸಬೇಕಾದರೆ ನಾಡಿಗೆ 'ಕರ್ನಾಟಕ' ಎಂದು ಹೆಸರಿಡಬೇಕೆಂದು ಮೊರೆಯಿಟ್ಟರು. ಶಾಸ್ತ್ರಿಗಳ ಮೊರೆ ಆಡಳಿತಾರೂಢರ ಕಿವಿಗೆ ಬೀಳಲು ಹೆಚ್ಚು ಸಮಯವನ್ನೇ ತೆಗೆದುಕೊಂಡಿತ್ತು. ಕೊನೆಗೆ ದೇವರಾಜ ಅರಸರು ಮುಖ್ಯಮಂತ್ರಿಗಳಾಗಿ ಬಂದ ಮೇಲೆ ಕರ್ನಾಟಕವೆಂದು ಅಧಿಕೃತವಾಗಿ ನಾಮಕರಣವಾಯಿತು.

ಕಾಲು ಶತಮಾನವಾದರೂ ಉತ್ತರ ಕರ್ನಾಟಕದ ಅಭಿವೃದ್ಧಿ ಪೂರ್ಣವಾಗಲೇ ಇಲ್ಲ. ಕರ್ನಾಟಕ ಏಕೀಕರಣವಾಗಿ ಬಿಟ್ಟರೆ ಲಿಂಗಾಯ್ತರು ಪ್ರಬಲರಾಗಿ ಬಿಡುತ್ತಾರೆಂಬ ಗುಮಾನಿ ಹುಸಿಯಾಯಿತು. ಇತ್ತೀಚೆಗೆ ಬಂದ ಸರ್ಕಾರಗಳು ಉತ್ತರ ಕರ್ನಾಟಕದ ಪ್ರಗತಿಯನ್ನು ಮಂತ್ರದೋಪಾದಿಯಲ್ಲಿ ಜಪಿಸುತ್ತಲೇ ಇವೆ. ಮಂತ್ರಕ್ಕಿಂತಲೂ ಉಗುಳೇ ಜಾಸ್ತಿಯೆನ್ನುವಂತೆ ಮಾಡುವುದಕ್ಕಿಂತ ಆಡುವುದೇ ಹೆಚ್ಚಾಗಿ ಉತ್ತರ ಕರ್ನಾಟಕದ ಅಭಿವೃದ್ಧಿ ಬರೀ ಚುನಾವಣಾ ಪ್ರಣಾಳಿಕೆಗಳಲ್ಲಿ ಮುದ್ರಣಗೊಂಡು ಅಕ್ಷರಸ್ಮಾರಕಗಳಾಗಿ ಉಳಿದುಬಂದಿವೆ. ಅತಿವೃಷ್ಟಿ, ಅನಾವೃಷ್ಟಿ, ಸಹಕಾರೀ ಸಾಲ, ರೈತರ ಆತ್ಮ ಹತ್ಯೆ ಬರಗಾಲ, ಪ್ರವಾಹ, ನಿರುದ್ಯೋಗ, ಕ್ಷುಲ್ಲಕ ರಾಜಕಾರಣ ಹೈದ್ರಾಬಾದ್ ಕರ್ನಾಟಕ ಅಥವಾ ಉತ್ತರ ಕರ್ನಾಟಕವನ್ನು ಬಾಣಲೆಯಿಂದ ಬೆಂಕಿಗೆ ಹಾಕುತ್ತಲೇ ಬರಲಾಗುತ್ತಿದೆ.

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಶಾಸ್ತ್ರಿಗಳು ರೋಚಕವಾದ ಭಾಷಣಗಳನ್ನು ಮಾಡಿ ಕನ್ನಡ ಭಾಷಾ ಪ್ರೀತಿಯ ಜೊತೆ ಸಾಹಿತ್ಯ ಪ್ರೀತಿಯನ್ನು ಕನ್ನಡಿಗರ ಹೃದಯಕ್ಕೆ ತುಂಬುತ್ತಿದ್ದರು. ಕುವೆಂಪುರವರ "ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವಾ" ಎಂಬ ಗೀತೆಯಲ್ಲಿ 'ಡಿಂಡಿಮ' ಎಂಬುದು ಕಾವ್ಯದ ಕರೆಯೋಲೆಯೂ ಆಗಿತ್ತು. ಸಂಘಟನೆಯ ಸಲುವಾಗಿ ನಿರ್ಲಿಪ್ತರನ್ನೂ ಬಡಿದೆಬ್ಬಿಸುವ ಸ್ಫೂರ್ತಿಭರಿತ ಕಾವ್ಯವಾಣಿ ಕವಿಗಳದ್ದಾಗಿತ್ತು. ಶಾಸ್ತ್ರಿಗಳಂತಹ ವಿದ್ವಾಂಸರು ತಮ್ಮ ಭಾಷಾಭಿಮಾನವನ್ನು ಎಲ್ಲರೊಡನೆ ಹಂಚಿಕೊಳ್ಳಲು ದೇಶವ್ಯಾಪಿ ಸಂಚಾರ ಮಾಡುತ್ತಲೇ ಇದ್ದರು. ಆಗ್ಗೆ ಭಾಷಣಗಳೇ ಪರಿಣಾಮಕಾರೀ ಮಾಧ್ಯಮಗಳಾಗಿದ್ದವು. ಬಿ.ಎಂ. ಶ್ರೀಯವರ ಭಾಷಣಗಳು, ಅ.ನ. ಕೃಷ್ಣರಾಯರ ಭಾಷಣಗಳು ಶಾಸ್ತ್ರಿಗಳ ಉಪನ್ಯಾಸಗಳು, ಜನಮೆಚ್ಚುಗೆ ಗಳಿಸಿದ್ದವು. ಹಿಂದಿನ ಕವಿಗಳು ಹೇಳಿದ್ದ ಕನ್ನಡದ ಹಿರಿಮೆಗಳನ್ನು ಸ್ಮರಿಸುತ್ತಾ ವರ್ತಮಾನದ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡುತ್ತಾ; ಭವಿಷ್ಯತ್ತಿನ ಭಾಷಾ ಬೆಳವಣಿಗೆಗೆ ಪೂರಕವಾದ ಮಾರ್ಗಗಳನ್ನು ವಿವರಿಸುತ್ತಿದ್ದರು.

ಕೀರ್ತನಕಾರ ಶಾಸ್ತ್ರಿಗಳು ಸಂಶೋಧಕನಾಗಿ, ಬೆಳೆಯುತ್ತಾ ಗೋವಿಂದಪೈ, ಶಂ.ಭಾ ಜೋಷಿ, ಕೆ.ಎಸ್. ಧರಣೇಂದ್ರಯ್ಯ ರಂ.ಶ್ರೀ. ಮುಗಳಿ, ಫ.ಗು.ಹಳಕಟ್ಟಿ, ಜೀರಗೆ ಕಟ್ಟಿ ಬಸಪ್ಪ, ಸ.ಸ ಮಳವಾಡ, ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿ, ವೈ.ನಾಗೇಶ ಶಾಸ್ತ್ರಿ, ಡಿ.ಎಲ್ ನರಸಿಂಹಾಚಾರ್, ಡಿ.ಕೆ. ಭೀಮ ಸೇನರಾವ್, ಸಿ.ಕೆ. ವೆಂಕಟರಾಮಯ್ಯ ಮುಂತಾದ ಘಟಾನು ಘಟಿ ಸಂಶೋಧಕರ ಸಾಲಿಗೆ ಸೇರಿಹೋದರು.

ಗುಬ್ಬಿ ವೀರಣ್ಣನವರು ದೇಶದ ಮಹಾನ್ ಕಲಾವಿದರಾಗಿದ್ದವರು, ಅವರು ಓದಿದ್ದು ಪ್ರೈಮರಿ ನಾಲ್ಕನೇ ತರಗತಿ, ಶಿವಮೂರ್ತಿ ಶಾಸ್ತ್ರಿಗಳು 'ಗುಬ್ಬಿ' ಪಟ್ಟಣದ ಅಳಿಯಂದಿರು ಅವರೂ ಸಹ ಓದಿದ್ದು ಲೋವರ್ ಸೆಕೆಂಡರಿ ಇಬ್ಬರಿಗೂ ವಿಶ್ವವಿದ್ಯಾಲಯಗಳು ಗೌರವ ಡಾಕರೇಟ್ ಪದವಿ ನೀಡಿ ಗೌರವಿಸಿದ್ದವು. ಇಬ್ಬರಿಗೂ 'ಪದ್ಮಶ್ರೀ' ಪದವಿಗಳು ದೊರೆತಿದ್ದವು ಇಬ್ಬರಿಗೂ ಅಗಾಧ ರೀತಿಯ ಜನಪ್ರಿಯತೆ ದೊರೆತಿತ್ತು. ಇಬ್ಬರಿಗೂ ಅಂತಹ ಮಾಧುರ್ಯವಾದ ಕಂಠಸಿರಿಯೇನೂ ಇರಲಿಲ್ಲ. ಆದರೂ ಅವರ ಮಾತು, ಗೀತೆಗಳನ್ನು ಕೇಳಲು ಜನ ಹಾತೊರೆಯುತ್ತಿದ್ದರು ಇಲ್ಲಿ ಪ್ರತಿಭೆ ಲೋಕಮನ್ನಣೆ ದೊರಕಿಸಿದ ಸಂಗತಿ ಐತಿಹಾಸಿಕ ಮಹತ್ವವನ್ನದೆ ಬೇರೆ ಮಾತಿಲ್ಲ.

## ಸಂಗೀತದಿಂದ ಸಾಹಿತ್ಯದೆಡೆಗೆ

ಗಮಕ ವಾಚನದ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಬಂದ ಶಾಸ್ತ್ರಿಗಳು ಕನ್ನಡದ ಮಹಾಕಾವ್ಯಗಳನ್ನು ಹೃದ್ಗತ ಮಾಡಿಕೊಂಡಿದ್ದರು. ತುಮಕೂರಿನಲ್ಲಿ ಪಿ.ಆರ್. ಕರಿಬಸವಶಾಸ್ತ್ರಿಗಳ ಬಳಿ ಕಾವ್ಯಾನು ಸಂಧಾನ ನಡೆಸಿದ ಮೇಲೆ ಪೂರ್ಣಾವಧಿ ಗಮಕಿಗಳಾಗಿ ರೂಪುಗೊಂಡರು. ಗಮಕ ವಾಚನದ ಮುಂದುವರಿದ ಪ್ರಕಾರವೆನ್ನುವಂತೆ ಕೀರ್ತನೆಗಳನ್ನು ನಡೆಸತೊಡಗಿದರು. ಅದರಿಂದ ಯಶಸ್ಸು ದೊರೆಯಿತು. ಸ್ವಾತಂತ್ರ್ಯ ಚಳುವಳಿ ಬಿರುಸಾಗಿ ನಡೆಯುತ್ತಿದ್ದ ಕಾಲದಲ್ಲಿ ಗಾಂಧೀಜಿಯವರನ್ನು ಕೀರ್ತನೆಯ ವಸ್ತುವಾಗಿ ಅಳವಡಿಸಿಕೊಂಡು ಸ್ವದೇಶೀ ಚಳುವಳಿ, ಸ್ವಾತಂತ್ರದ ಮಹತ್ವ, ಗಾಂಧೀ ತತ್ವಗಳನ್ನು (ಕೆಲವೊಮ್ಮೆ) ಪ್ರಧಾನ ವಸ್ತುವನ್ನಾಗಿ ಬಳಸಿಕೊಂಡು ಕಾರ್ಯಕ್ರಮ ನೀಡುತ್ತಿದ್ದರಿಂದ ಜನರು ಇವರ ವಾಕ್ಚಾತುರ್ಯಕ್ಕೆ ತಲೆದೂಗಿದ್ದರು. ಶಾಸ್ತ್ರಿಗಳು ಗಮಕದ ಹಂತದಿಂದ ಕೀರ್ತನಾಚಾರ್ಯರ ಹಂತಕ್ಕೆ ಬಡ್ತಿ ಪಡೆದರು.

ನಾಡಿನ ಆ ಕಾಲದ ಪ್ರಸಿದ್ಧ ಪತ್ರಿಕೆಗಳಿಗೆ ಲೇಖನ ಬರೆಯುವ ಪ್ರವೃತ್ತಿ ಬೆಳೆಯಿಸಿಕೊಂಡ ಶಾಸ್ತ್ರಿಗಳು ಲೇಖನ ಕಲೆಯನ್ನು ವೃತ್ತಿಯನ್ನಾಗಿ ಮಾರ್ಪಡಿಸಿಕೊಂಡರು. 1937 ರಲ್ಲಿ ಶರಣ ಸಾಹಿತ್ಯ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದ ಮೇಲೆ ಪತ್ರಿಕೆಗೆ ಬರೆಯಲೇಬೇಕಾದ ಬದ್ಧತೆಗೊಳಗಾದರು. ಮಠ, ಮಹಂತುಗಳ ಪೆಠಾರಿಗಳಲ್ಲಿ ಸಂಪ್ರದಾಯಸ್ಥರ ಪೂಜಾ ಕೋಣೆಗಳಲ್ಲಿ ಹೊಗೆ ಹಿಡಿದು ಬಣ್ಣ ಕಳೆದುಕೊಂಡಿದ್ದ ಪ್ರಾಚೀನ ತಾಡೋಲೆ ಗ್ರಂಥಗಳನ್ನು ಸಂಗ್ರಹಿಸಿದರು. ತಾಡವಾಲೆ ಗ್ರಂಥಗಳನ್ನು ಹಾಳುಮಾಡದಂತೆ ಜಾಗೃತಿ ಮೂಡಿಸಿದರು. ಅಪ್ರಕಟಿತ ಪ್ರಾಚೀನ ಗ್ರಂಥಗಳನ್ನು ಪ್ರಕಟಿಸಿದರು. ವೀರಶೈವ ಸಾಹಿತ್ಯದ ಪರಂಪರೆಯನ್ನು ಬೆಳೆಯಿಸಿ, ಸಾಹಿತ್ಯದ ಓದುಗ ಬಳಗವನ್ನು ಹೆಚ್ಚಿಸಿಕೊಂಡರು.

ಶರಣ ಸಾಹಿತ್ಯ ಮಾಸ ಪತ್ರಿಕೆಗೆ ಬಲವಂತವಾಗಿಯೇ ಚಂದಾದಾರರನ್ನಾಗಿ ಮಾಡಿಕೊಳ್ಳುತಿದ್ದರು. ಮುವತ್ತೈದು ವರ್ಷಗಳ ಕಾಲ ಶರಣ ಸಾಹಿತ್ಯ ಮಾಸಿಕವನ್ನು ನಡೆಯಿಸಿದರು. ಸುಮಾರು ನಾಲ್ಕು ನೂರಾ ಇಪತ್ತೆರಡು ಮಾಸಗಳಲ್ಲಿ ಅಷ್ಟೇ ಸಂಖ್ಯೆಯ ಮಾಸಿಕಗಳು ಪ್ರಕಟವಾಗಿದ್ದವು. ಅವಷ್ಟರಲ್ಲೂ ಶಾಸ್ತ್ರಿಗಳ ಲೇಖನಗಳು

ಪ್ರಕಟವಾಗಿವೆ. ಮಾಸ ಪತ್ರಿಕೆಯನ್ನು ತರಬಯಸುವ ಆಸಕ್ತರಿಗೆ ಶರಣ ಸಾಹಿತ್ಯದ ಪರಿವಿಡಿಗಳು ಶೀರ್ಷಿಕೆಗಳು, ಅಂಕಣ ಬರಹಗಳು ಮಾದರಿಯಾಗುತ್ತವೆ. ಶಾಸ್ತ್ರಿಗಳು ನಾಡಿನ ವಿದ್ವಜ್ಜನರ ಮನ್ನಣೆಗೆ ಬಹುಬೇಗ ಪಾತ್ರರಾದರು. ಉತ್ತರ ಕರ್ನಾಟಕದ ಬಿಜಾಪುರದಲ್ಲಿ ಫ.ಗು. ಹಳಕಟ್ಟಿಯವರು ಶರಣ ಸಾಹಿತ್ಯವನ್ನು ಕುರಿತು ಸಂಶೋಧನಾತ್ಮಕ ಪ್ರಕಟಣೆಗಳನ್ನು ಹೊರತಂದರೆ ಬೆಂಗಳೂರಿನ ರಂಗಸ್ವಾಮಿಗುಡಿ ಬೀದಿಯಲ್ಲಿ ವಾಸವಿದ್ದ ಬಿ. ಶಿವಮೂರ್ತಿಶಾಸ್ತ್ರಿಗಳು ವೀರಶೈವ ಸಾಹಿತ್ಯ ಮತ್ತು ಇತಿಹಾಸದ ಬಗ್ಗೆ ಹೌದೆನ್ನಿಸುವ ಲೇಖನಗಳನ್ನು ಶರಣಸಾಹಿತ್ಯ ಮಾಸಿಕದಲ್ಲಿ ಪ್ರಕಟಿಸುತ್ತಿದ್ದರು.

## ಶಾಸ್ತ್ರಿಗಳು ಕಂಡ ಮಿರ್ಜಾಇಸ್ಮಾಯಿಲ್

ಇಸವಿ 1926ರ ಸುಮಾರಿನಲ್ಲಿ ಮಿರ್ಜಾಇಸ್ಮಾಯಿಲ್ಲರು ಮೈಸೂರು ದಿವಾನರಾದ ಕಾಲ, ಕಾಂಗ್ರೇಸ್ ಚಳುವಳಿ ಭುಗಿಲುಗುಡುತ್ತಿದ್ದ ಕಾಲ. ಕಾಂಗ್ರೇಸ್ ಚಳುವಳಿಗೂ ಭಾರತ ಸ್ವಾತಂತ್ರ್ಯ ಚಳುವಳಿಗಳಿಗೂ ವ್ಯತ್ಯಾಸ ಕಾಣಿಸಿದಂತಹ ಮನಸ್ಥಿತಿ ಕಾಂಗ್ರೆಸ್ ಧುರೀಣರಲ್ಲಿ ಅಳಿಸಿ ಹೋಗಿತ್ತು. ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಬಂಡೆದ್ದ ಕಾಂಗ್ರೆಸ್ ಭಾರತದ ಆಡಳಿತ ಭವಿಷ್ಯವನ್ನು ಹಸ್ತ ರೇಖೆಯನ್ನಾಗಿ ಹೊಂದುತ್ತಿದ್ದ ಕಾಲ. ಕಾಂಗ್ರೇಸೆಂದರೆ ಬ್ರಿಟಿಷರಿಗೆ ಬ್ರಿಟಿಷರೆಂದರೆ ಕಾಂಗ್ರೆಸಿಗರಿಗೆ ಎಣ್ಣೇಸಿಗೇಕಾಯಿ ಸಂಬಂಧ. ಇಂತಹ ಸಂದಿಗ್ಧ ಕಾಲದಲ್ಲಿ ಸರ್.ಮಿರ್ಜಾಇಸ್ಮಾಯಿಲ್ಲರು ದಿವಾನರಾದರು. ಅತ್ತೆಯ ಮೇಲಾಸೆ - ನೆಂಟರ ಮೇಲೆ ಪ್ರೀತಿ ಎರಡನ್ನು ತೋರ್ಗೊಡದೆ ಸಂಭಾಳಿಸಿದವರು 'ಮಿರ್ಜಾ' ಅದೇ ಕಾಲದಲ್ಲಿ ಮಧುಗಿರಿಯ ಸಿರಿವಂತ ದಾನಿ ನಂಜಯ್ಯಶೆಟ್ಟರು ಲೋಕಮಾನ್ಯ ತಿಲಕರ ಸ್ಮಾರಕವನ್ನು ಕಟ್ಟಿಸಿಕೊಟ್ಟಿದ್ದರು. ಅದರ ಪ್ರಾರಂಭೋತ್ಸವ ಮಿರ್ಜಾರವರಿಂದ ನಡೆಯಿತು. ಶಾಸ್ತ್ರಿಗಳು ಆ ಸಮಾರಂಭಕ್ಕೆ ಗಾಂಧೀ ಭಕ್ತರಾಗಿ ಹೋಗಿದ್ದರು. ಸ್ವಾತಂತ್ರ್ಯ ಚಳುವಳಿಯ ಸನ್ನಿ ಹಿಡಿದಿದ್ದ ಜನ ಸಾಗರ ಅಲ್ಲಿ ನೆರೆದಿತ್ತು. ಸಭಾ ವೇದಿಕೆಯಲ್ಲಿ ಅವಕಾಶ ಗಿಟ್ಟಿಸಿಕೊಂಡ ಶಾಸ್ತ್ರಿಗಳು ಲೋಕಮಾನ್ಯರನ್ನು ಕುರಿತಾದ ಸ್ವಾಗತ ಗೀತೆಯನ್ನು ಹಾಡುತ್ತಾ ಕೀರ್ತನ ಶೈಲಿಯಲ್ಲಿ ಭಾಷಣ ಮಾಡಿದರು. ಶಾಸ್ತ್ರಿಗಳು ಮಿರ್ಜಾ ಅವರ ಗಮನ ಸೆಳೆಯಲು ತಡವಾಗಲಿಲ್ಲ. ಸಮಾರಂಭ ಮುಗಿದ ಮೇಲೆ ಶಾಸ್ತ್ರಿಗಳನ್ನು ಹತ್ತಿರ ಕರೆದು "ನೀವು ಬೆಂಗಳೂರಿಗೆ ಬಂದು ಆದಷ್ಟು ಬೇಗ ನನ್ನನ್ನು ನೋಡಬೇಕು. ನಾನು ಕಾರಲ್‌ಟನ್ ಹೌಸಿನಲ್ಲಿದ್ದೇನೆ. ನಿಮ್ಮಲ್ಲಿ ಮಾತಾಡ ತಕ್ಕದ್ದಿದೆ". ಶಾಸ್ತ್ರಿಗಳು ಪುಳಕಿತರಾದರು ಬಡ ಶಾಲಾ ಮಾಸ್ತರಲ್ಲಿ ಮೈಸೂರು ದಿವಾನರೆಲ್ಲಿ. 'ಎತ್ತಣ ಮಾಮರ ಎತ್ತಣ ಕೋಗಿಲೆ' ಎಂದಂತಾಯಿತು. ಆಗಿನ ಕಾಲದಲ್ಲಿ ದಿವಾನರನ್ನು ಭೇಟಿಯಾಗುವುದು ಸರಳವಾಗಿರಲಿಲ್ಲ; ಬೆಂಗಳೂರಿಗೆ ವಲಸೆಗೊಳ್ಳಲು ಮಿರ್ಜಾರವರ ಮಾತೇ ದೈವಪ್ರೇರಕವಾಯಿತೆಂದು ಶಾಸ್ತ್ರಿಗಳು ಬರೆದುಕೊಂಡಿದ್ದಾರೆ.

"ಸರ್ ಮಿರ್ಜಾಇಸ್ಮಾಯಿಲ್ ಸಾಹೇಬರವರು, ಮೈಸೂರಿನ ದಿವಾನರಾಗಿ ಸುಮಾರು 15 ವರ್ಷಗಳ ಕಾಲ ಇದ್ದರು. ಅವರಿಗೆ ದರ್ಬಾರಿನಲ್ಲಿ "ಅಮಾನ್ ಉಲ್‌ಮುಲ್ಕ್" ಎಂಬ ಬಿರುದು ಕೊಡಲ್ಪಟ್ಟಿತ್ತು. ನಾಲ್ವಡಿ ಕೃಷ್ಣರಾಜಒಡೆಯರು, ಸರ್ ಮಿರ್ಜಾಇಸ್ಮಾಯಿಲ್‌ರವರ ಜೊತೆಯಲ್ಲಿ ಸಹಪಾಠಿಗಳಾಗಿ ವ್ಯಾಸಂಗ ಮಾಡಿದವರು.

ಮಿರ್ಜಾರವರ ತಂದೆ ಮೈಸೂರು ಅರಮನೆಯಲ್ಲಿ ಮಹಾರಾಜ ಚಾಮರಾಜಒಡೆಯರ್ ಅವರ ಸೇವೆಯಲ್ಲಿ ನಿರತರಾಗಿದ್ದರು. ಅವರ ಮೇಲೆ ಮಹಾರಾಜರ ಸಂಪೂರ್ಣ ಕೃಪೆಯಿತ್ತು. ಇವರು ಮಹಾರಾಜರ ಕೃಪೆಗೆ ಪಾತ್ರರಾಗಿದ್ದರು. ಮಿರ್ಜಾರವರು ಮೊದಲು ನಾಲ್ವಡಿ ಕೃಷ್ಣರಾಜ ಒಡೆಯರ ಆಪ್ತಕಾರ್ಯದರ್ಶಿಗಳಾಗಿದ್ದರು. ಅನಂತರ 1926 ರಲ್ಲಿ ರಾಜ್ಯದ ದಿವಾನರಾದರು. ಅವರ ಕಾಲದಲ್ಲಿ ಮೈಸೂರು ರಾಜ್ಯವು ಎಲ್ಲ ರೀತಿಯಲ್ಲೂ ಅಭಿವೃದ್ಧಿಗೆ ಬಂದಿತು. ಚಕ್ರಗೋಷ್ಠಿಗೆ ಇಂಗ್ಲೆಂಡಿಗೆ ಹೋಗಿಬಂದರು. ವಿಶಾಲವಾದ ಲೋಕಾನುಭವವುಳ್ಳವರು. ಅವರು ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಸಂಪೂರ್ಣ ಆಶೀರ್ವಾದಕ್ಕೆ ಪಾತ್ರರಾಗಿದ್ದರು. 1927ರಲ್ಲಿ ಗಾಂಧಿಜೀಯವರನ್ನು ಬೆಂಗಳೂರಿಗೆ ಬರ ಮಾಡಿಕೊಂಡು ನಂದಿಬೆಟ್ಟದಲ್ಲಿಳಿಸಿ, ರಾಜ್ಯದ ಅತಿಥಿಗಳನ್ನಾಗಿ ಗೌರವಿಸಿ ಸತ್ಕರಿಸಿದರು. ಮಿರ್ಜಾರವರ ಸೌಜನ್ಯ, ವಿನಯಶೀಲತೆ, ರಾಜಗಾಂಭೀರ್ಯ ಇವುಗಳಿಗೆ ಮಹಾತ್ಮಾ ಗಾಂಧಿಯವರು ಮಾರು ಹೋದರು. ಮೈಸೂರು ರಾಜ್ಯವನ್ನು 'ರಾಮ ರಾಜ್ಯ'ವೆಂದು ಕರೆದರು. ಈ ಸಂದರ್ಭದಲ್ಲಿ ಮೈಸೂರಿನ ಕೀರ್ತಿಯು ಸಮಗ್ರ ಭಾರತದಲ್ಲಿ ಬೆಳಗಿತು. ಈ ಕಾಲದಲ್ಲಿ ಇಂಗ್ಲೀಷರ ದಬ್ಬಾಳಿಕೆ ಅಧಿಕವಾಗಿದ್ದರೂ ಸರ್ ಮಿರ್ಜಾರವರು ತೋರಿದ ಧೈರ್ಯ ನಿಜಕ್ಕೂ ಶ್ಲಾಘ್ಯವಾದುದು. ಇದರ ಫಲವಾಗಿ ಮೈಸೂರಿನಲ್ಲಿ ಖಾದಿ ಪ್ರಚಾರ, ಸ್ವದೇಶಿ ಪ್ರಚಾರ, ಚರಕ ಪ್ರಚಾರ, ಹರಿಜನೋದ್ಧಾರ, ಮದ್ಯಪಾನ ನಿಷೇಧ ಮೊದಲಾದ ಕಾರ್ಯಗಳಿಗೆ ಒಳ್ಳೆಯ ಬೆಂಬಲ ದೊರೆಯಿತು. ಸರ್ ಮಿರ್ಜಾರವರ ಆತ್ಮೀಯರಲ್ಲಿ ಈ ರಾಜ್ಯದಲ್ಲಿ ಬೇಕಾಗಿದ್ದ ಹಲವು ಕೆಲವು ಮಂದಿಗಳಲ್ಲಿ ನಾನೊಬ್ಬನಾಗಿದ್ದೇನೆ"

ಈ ಪರಿಚಯ ಸ್ನೇಹಕ್ಕೆ ತಿರುಗಿದ್ದರಿಂದ ಶಾಸ್ತ್ರಿಗಳು ಮಿರ್ಜಾರವರಿಂದ ಸ್ವಾರ್ಥಪರವಾದ ಯಾವ ಅನುಕೂಲ ಪಡೆಯಲು ಇಚ್ಛಿಸಲಿಲ್ಲ. ಶಾಸ್ತ್ರಿಗಳು ಮನಸ್ಸು ಮಾಡಿದ್ದರೆ ಮುಂದೆ ಸರ್ಕಾರದಿಂದ ಮಾಸಾಶನ ಪಡೆಯುವಂತಹ ಸ್ಥಿತಿಗೆ ತಲುಪುತ್ತಿರಲಿಲ್ಲ.

## ಮಹಾಸಂಕಲ್ಪ

ಇಸವಿ 1936ರಲ್ಲಿ ವಿಜಯನಗರ ಸಾಮ್ರಾಜ್ಯದ ಮಹೋತ್ಸವ ಬಹಳ ಅದ್ದೂರಿಯಾಗಿ ನಡೆಯಲಿತ್ತು. ಮೈಸೂರು ಸೀಮೆಯಲ್ಲಿ ಉತ್ಸವದ ಪೂರ್ವಭಾವೀ ಪ್ರಚಾರ ಮಾಡಲು ಬೇಲೂರು ಕೇಶವ ದಾಸರು ಮತ್ತು ಬಿ. ಶಿವಮೂರ್ತಿ ಶಾಸ್ತ್ರಿಗಳಿಗೆ ಕೇಂದ್ರ ಉತ್ಸವ ಸಮಿತಿ (ಧಾರವಾಡ) ಯವರು ವಹಿಸಿದರು. ಇಬ್ಬರೂ ಗಮಕಿಗಳು, ಕೀರ್ತನಕಾರರು, ಸಾಹಿತ್ಯ ಪ್ರಚಾರಕರು ಅಲ್ಲದೆ ಸ್ನೇಹಿತರು. ಆರು ತಿಂಗಳ ಕಾಲ ನಾಡಿನೆಲ್ಲೆಡೆ ಸಂಚರಿಸಿ ವಂತಿಕೆ ಸಂಗ್ರಹಿಸಿ ಧಾರವಾಡದ ಕೇಂದ್ರ ಸಮಿತಿಗೆ ಕಳುಹಿಸಿಕೊಟ್ಟರು ಉತ್ಸವ ಸಮಿತಿಯಲ್ಲಿ ಕೀರ್ತಿಶೇಷರಾದ ಡಾ. ಕುರ್ತುಕೋಟಿ, ವಿ.ಬಿ.ಹಾಲಭಾವಿ, ಬಿ.ಎಂ. ಶ್ರೀಕಂಠಯ್ಯ, ಡಾ. ಸಾಲತೊರೆ, ಬೆನಗಲ್ ರಾಮರಾವ್, ಸರ್ದಾರ್ ಕೆ, ಬಸವರಾಜೇ ಅರಸು, ಪ್ರೊ॥ ಬಸವನಾಳ, ಬೇಲೂರು ಕೇಶವ ದಾಸ್, ಡಾ. ನಂದಿಮಠ ಹಾಗೂ ಶಾಸ್ತ್ರಿಗಳೂ ಇದ್ದರು. ಉತ್ಸವ ಒಳ್ಳೆಯ ವೈಭವದಿಂದ ನಡೆಯಿತು. ಉತ್ಸವ ಸಮಿತಿಯವರು ವಿಜಯನಗರದ ಇತಿಹಾಸ ಮತ್ತು ಸಚಿತ್ರ ವಿಜಯನಗರ ಎಂಬೆರಡು ಗ್ರಂಥಗಳನ್ನು ಹೊರತಂದರು. ಪ್ರಸ್ತುತ ಉತ್ಸವಕ್ಕೆ

ಲಕೋಪಲಕ ಕನ್ನಡಿಗರು ಸೇರಿದ್ದರು. ಬಂದವರಲ್ಲಿ ಬಹುತೇಕರು ಪಂಪಾವಿರೂಪಾಕ್ಷನನ್ನು ಪೂಜಿಸಿದರು. ತುಂಗಭದ್ರಾ ಸ್ನಾನ ಮಾಡಿದರು. ಧನ್ಯಭಾವದಿಂದ ಇತಿಹಾಸ ಸ್ಮರಣೆ ಮಾಡಿಕೊಂಡರು. ಹಂಪೆಯ ಭಗ್ನ ಅವಶೇಷಗಳನ್ನು ಕಂಡು ವಿಷಾದದ ನಿಟ್ಟುಸಿರು ಬಿಟ್ಟರು. ಆನೆಗೊಂದಿ, ಶಬರಿಆಶ್ರಮ, ಪಂಪಾಸರೋವರ ಅಂಜನಾದ್ರಿ, ಹೇಮಕೂಟ, ಮತಂಗಪರ್ವತ, ಮುಂತಾದವುಗಳನ್ನು ಕಂಡು ಕುತೂಹಲ ವಿಷ್ಠರಾದರು. ಇತಿಹಾಸ ಮತ್ತೆ ಮರುಕಳಿಸಿದಂತೆ, ಕನ್ನಡಿಗರು ಸಂಘಟಿತರಾಗಿ ಕಳೆದುಹೋದ ವೈಭವವನ್ನು ಮರಳಿ ತರಬೇಕೆಂಬ ಉತ್ಸಾಹ ಎಲ್ಲರ ಮುಖದಲ್ಲಿಯೂ ತುಂಬಿಕೊಂಡಿತ್ತು. ಶಾಸ್ತ್ರಿಗಳು ತಮ್ಮ ಸಹವರ್ತಿಗಳಾದ ಬೇಲೂರು ಕೇಶವದಾಸರು ಹಾಗೂ ನಂದೀಮಠರು ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡುವ ಬಯಕೆಯಿಂದ ಮನಥಕುಂಡಕ್ಕೆ ಬಂದರು. ಶಾಸ್ತ್ರಿಗಳಿಗೆ ಆಗ ಮೂವತ್ತ್ಮೂರರ ಹರೆಯ, ತುಂಗಭದ್ರೆಯ ತರಂಗಾಂತರಗಳ ಮೇಲೆ, ತೇಲಾಡಿ ಈಜುವ ಉಮೇದು, ಮುಂದಾಲೋಚನೆಯಿಲ್ಲದೆ ನದಿಗೆ ನೆಗೆದೇಬಿಟ್ಟರು. ಉಳಿದಿಬ್ಬರು ನದಿ ನೀರಿಗಿಳಿಯದೆ ದಡದಲ್ಲಿಯೇ ಕುಳಿತು ಅಂಜಲಿಗೆ ದೊರೆತ ಜಲ ಸಿರಿಯನ್ನು ಮೈಮೇಲೆ ಎರಚಿಕೊಂಡು ಹಿತ ಚಳಿಯ ಸುಖವನ್ನು ಆನಂದಿಸುತ್ತಿದ್ದರು. ನದಿಯಲ್ಲಿ ಕೈ ಕಾಲು ಆಡಿಸುತ್ತಿದ್ದ ಶಾಸ್ತ್ರಿಗಳಿಗೆ ಬೇಲೂರು ಕೇಶವದಾಸರು ಎಚ್ಚರಿಕೆಯ ಬೀಜಮಂತ್ರವನ್ನು ಉಪದೇಶಿಸುತ್ತಲೇ ಇದ್ದರು. ಮನ್ಮಥ ಕುಂಡದಲ್ಲಿ ಸುಳಿಗಳಿವೆಯೆಂದು ಸುಳಿಗೆ ಸಿಕ್ಕವರು ಎಂಥ ಈಜುಗಾರರಾದರೂ ಪ್ರಾಣ ಉಳಿಸಿಕೊಳ್ಳಲು ಸಾಧ್ಯವಾಗದೆಂದೂ ಕೂಗಿ ಕೂಗಿ ಹೇಳಿದರೂ ಶಾಸ್ತ್ರಿಗಳಿಗೆ ಮನವರಿಕೆಯಾಗಲಿಲ್ಲ. ಮನ್ಮಥಕುಂಡದ ಒಂದು ಚಿಕ್ಕ ಸುಳಿಗೆ ಶಾಸ್ತ್ರಿಗಳು ಸಿಕ್ಕಿ ಹಾಕಿಕೊಂಡರು. ಹರೆಯದಲ್ಲಿ ಸ್ತ್ರೀಯರೆಂಬ ಮನ್ಮಥ ಪಾಶಕ್ಕೆ ಸಿಕ್ಕಿ ಪಾರಾದ ಶರಣರ ಅನೇಕ ಕಥೆಗಳನ್ನು ಶಾಸ್ತ್ರಿಗಳು ಕೀರ್ತನೆಗಳಲ್ಲಿ ಹೇಳುತ್ತಲೇ ಬಂದಿದ್ದರು. ಹಂಪೆಯ ಹರಿಹರದೇವ ಆಂಧ್ರದ ಮಾಯಾದೇವಿಯೆಂಬ ಸ್ತ್ರೀಗೆ ಮರುಳಾಗದೆ ಅವಳಿಗೆ ಜ್ಞಾನೋದಯವಾಗುವಂತೆ ಬುದ್ಧಿ ಹೇಳಿದ ಪ್ರಸಂಗವನ್ನು ಶಾಸ್ತ್ರಿಗಳು ಬಹು ರಂಜನೀಯವಾಗಿ ಹೇಳುತ್ತಿದ್ದರು. ಆದರೆ ಇದು ತುಂಗಭದ್ರಾ ನದಿಯ ಒಂದು ಭಾಗವಾಗಿದ್ದ ಮನ್ಮಥಕುಂಡ ಹೆಸರು ಮೋಹಭರಿತವಾಗಿದ್ದರೂ ಅಲ್ಲಿ ಉಂಟಾಗುತ್ತಿದ್ದ ಒಳಸುಳಿಗಳಿಗೆ ಮೋಹಭಾವ ಕೊಂಚವೂ ಇರಲಿಲ್ಲ ಸುಳಿಗೆ ಸಿಕ್ಕ ಶಾಸ್ತ್ರಿಗಳನ್ನು ಹಿಡಿದು ತಳಮುಟ್ಟಿಸಿ ಮೇಲೆತ್ತಿ ಎಸೆಯಿತು. ಶಾಸ್ತ್ರಿಗಳು ಬಹುದೂರ ನದಿಯಲ್ಲಿ ಕೊಚ್ಚಿ ಹೋದರು. ನದೀ ಪಾತ್ರದಲ್ಲಿದ್ದ ಆಸ್ತಿಕ ಭಕ್ತರು ಹಾಹಾಕಾರ ಮಾಡುತ್ತಾ ಶಾಸ್ತ್ರಿಗಳು ಕೊಚ್ಚಿಹೋದ ಕಡೆ ಓಡ ತೊಡಗಿದರು. ಇಹಲೋಕದ ಅವತಾರ ಅರ್ಧಕ್ಕೆ ಮುಗಿಯಿತೆಂದು ಶಾಸ್ತ್ರಿಗಳು ಭಾವಿಸಿಕೊಂಡರು ಅಷ್ಟರಲ್ಲಿ ನಡುವಿದ್ದ ಕಲ್ಲು ಬಂಡೆಯೊಂದು ಶಾಸ್ತ್ರಿಗಳನ್ನು ತಡೆಯಿತು. ಆ ಶಿಲಾತಪಸ್ವಿ ಕರುಣೆ ತೋರಿ ಶಾಸ್ತ್ರಿಗಳನ್ನು ತಡೆದು ರಕ್ಷಿಸದೇ ಹೋಗಿದ್ದರೆ ಶಾಸ್ತ್ರಿಗಳು ಮುಳುಗಿ ಸತ್ತು ಮೂರು ದಿನದ ನಂತರ ಶಾಶ್ವತವಾಗಿ ತೇಲುತ್ತಿದ್ದರು. ಓಡಿ ಬಂದವರಲ್ಲಿ ಕೆಲವರು ಧೈರ್ಯಶಾಲಿಗಳು ಬಂಡೆ ತಡೆದು ಹಿಡಿದಿದ್ದ ಶಾಸ್ತ್ರಿಗಳನ್ನು ದಡಕ್ಕೆ ಎಳೆದುಕೊಂಡರು. ಶಾಸ್ತ್ರಿಗಳು ಪುನರ್ಜನ್ಮ ಪಡೆದಂತೆ ಬದುಕುಳಿದರು.

ಗೆಳೆಯನು ಕೊಚ್ಚಿ ಹೋದದ್ದನ್ನು ಕಂಡ ನಂದೀಮಠರು ಮತ್ತು ಕೇಶವದಾಸರು ಓಡಿಬಂದು ಶಾಸ್ತ್ರಿಗಳ ಸಮೀಪದಲ್ಲಿ ನಿಂತರು. ಶಾಸ್ತ್ರಿಗಳು ಬದುಕುಳಿದದ್ದರಿಂದ ಗೆಳೆಯರಿಬ್ಬರ ಮುಖದಲ್ಲಿ ಸಂತಸದ ಹೊನಲು

ಕಾಣಿಸಿಕೊಂಡಿತ್ತು. ಕೇಶವ ದಾಸರು ತಮ್ಮ ಎಂದಿನ ಕೀರ್ತನ ಶೈಲಿಯಲ್ಲಿ "ಶಾಸ್ತ್ರಿಗಳೇ ಪಂಪಾವಿರೂಪಾಕ್ಷನೇ ನಿಮ್ಮನ್ನು ಕಾಪಾಡಿದ್ದಾನೆ. ಇನ್ನು ಕೊಂಚದೂರ ಹೋಗಿದ್ದರೆ ಚಕ್ರತೀರ್ಥದಲ್ಲಿರುವ ಮೊಸಳೆಗಳಿಗೆ ಆಹಾರವಾಗಿಬಿಡುತ್ತಿದ್ದಿರಿ. ಹಲವು ಮಠಗಳ ಪ್ರಸಾದವುಂಡು ಬೆಳೆದ ಶರೀರ ಮೊಸಳೆಗಳಿಗೆ ಹಬ್ಬದೂಟವಾಗುವುದು ತಪ್ಪಿತು" ಎಂದೆಲ್ಲಾ ಆಡಿ ಸಮಾಧಾನ ಪಟ್ಟುಕೊಂಡರು.

ಪಂಪಾವಿರೂಪಾಕ್ಷನ ಕೃಪೆಯಿಂದಲೂ, ಶಾಸ್ತ್ರಿಗಳಿಂದ ಕನ್ನಡ ನಾಡಿಗೆ ಏನೋ ಒಳ್ಳೆಯ ಕೆಲಸವಾಗಬೇಕೆಂದೋ ಶಾಸ್ತ್ರಿಗಳ ಜೀವವುಳಿಯತೆಂದೇ ಬೇಲೂರು ಕೇಶವದಾಸರು ಶಾಸ್ತ್ರಿಗಳನ್ನು ಪಂಪಾ ವಿರೂಪಾಕ್ಷನ ಸನ್ನಿಧಿಗೆ ಕರೆತಂದು "ಶಾಸ್ತ್ರಿಗಳೇ ಮುಂದಿನ ನಮ್ಮಿಬ್ಬರ ಬದುಕು ಸಾಹಿತ್ಯ ಸರಸ್ವತಿಯ ಸೇವೆಗೆ ಮೀಸಲಾಗಲಿ, ನೀವು ಶರಣರ ಸಾಹಿತ್ಯವನ್ನು ಪ್ರಕಟಿಸಿ ಪ್ರಚಾರ ಮಾಡುತ್ತೇನೆಂದು ಸಂಕಲ್ಪ ಮಾಡಿಕೊಳ್ಳಿ, ನಾನು ಹರಿದಾಸ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸುತ್ತೇನೆಂದು ಸಂಕಲ್ಪ ಮಾಡುತ್ತೇನೆ. ನಮ್ಮ ದೇಹದಲ್ಲಿ ಕೊನೆಯುಸಿರು ಇರುವ ತನಕ ಸಾರಸ್ವತ ಕಾರ್ಯಮಾಡೋಣ" ಎಂದು ಸಂಕಲ್ಪ ಮಾಡಿ ಕೊಂಡರು. ಶಾಸ್ತ್ರಿಗಳಿಗೆ ಪಂಪಾಕ್ಷೇತ್ರದರ್ಶನ ಜೀವನದ ತಿರುವು ಬಿಂದುವಾಯಿತು. ನಡೆಸಬೇಕಾದುದು ಹೊಟ್ಟೆ ಪಾಡಿನ ಜೀವನವನ್ನೇ ಅಲ್ಲ. ಮಾಡಬೇಕಾದದು ಸಾಹಿತ್ಯ ಸೇವೆಯೆಂಬ ಮನೋಧರ್ಮಕ್ಕೆ ಇಬ್ಬರೂ ಶರಣಾದರು.

ಶಾಸ್ತ್ರಿಗಳ ಕೀರ್ತನೆಯನ್ನೊಮ್ಮೆ ಕೇಳುವ ಭಾಗ್ಯ ನನಗೆ 1958 ರಲ್ಲಿ ದೊರಕಿತ್ತು. ಸಿದ್ಧಗಂಗೆಯ ಯಾವುದೇ ಧಾರ್ಮಿಕ ಸಂದರ್ಭವದು ಅವರು ಹೇಳಿದ ಉಪಕತೆ ನನಗೀಗಲೂ ನೆನಪಿದೆ. ಅವರ ಸ್ವಾನುಭವದ ಕತೆಯಿದು. ಸಾಹಿತ್ಯಗಳಲ್ಲಿ ಸಮುದ್ರವರ್ಣನೆ ಹದಿನೆಂಟು ವರ್ಣನೆಗಳಲ್ಲಿ ಒಂದು. ಕನ್ನಡ ಕವಿಗಳು, ಸಂಸ್ಕೃತ ಕವಿಗಳು ತಮ್ಮ ಮಹಾಕಾವ್ಯಗಳಲ್ಲಿ ಸಮುದ್ರವನ್ನು ವರ್ಣಿಸಿ ತಮ ಪ್ರೌಢಿಮೆಯನ್ನು ಮೆರೆದಿದ್ದಾರೆ. ಶಾಸ್ತ್ರಿಗಳು ಸಮುದ್ರವನ್ನು ಕಣ್ಣಾರೆ ನೋಡುವುದಕ್ಕೆ ಮೊದಲು ಮಹಾಕಾವ್ಯಗಳಲ್ಲಿರುವ ಸಮುದ್ರ ವರ್ಣನೆಯನ್ನು ಓದಿಕೊಂಡು ಪುಳಕಗೊಂಡವರು. ಒಮ್ಮೆ ಮದ್ರಾಸಿಗೆ ಹೋದಾಗ ಸಮುದ್ರದರ್ಶನದಿಂದ ಪುಳಕಿತರಾದರು. ರತ್ನಾಕರನೆಂಬ ಸಿರಿವಂತ ಸಮುದ್ರ ರಾಜ ಸಾಕ್ಷಾತ್ ಲಕ್ಷ್ಮಿಗೆ, ಹುಣ್ಣಿಮೆಯ ಚಂದ್ರನಿಗೆ ತೀರ್ಥರೂಪವಾದವನು. ನಾಡ ದೋಣಿಯೇರಿ ಸಮುದ್ರದಲ್ಲಿ ಕೊಂಚ ದೂರ ಹೋಗಿ ಬರುವ ಅದಮ್ಯ ಆಸೆಯಾಯಿತು. ಶಾಸ್ತ್ರಿಗಳಿಗೆ ಸಮುದ್ರದ ಬಗ್ಗೆ ಇನ್ನಿಲ್ಲದ ಗೌರವವುಂಟಾಯಿತು. ಕಾಲಲ್ಲಿ ಮೆಟ್ಟು - ಮೆಟ್ಟಿಕೊಂಡು ದೋಣಿಯೇರಿದರೆ ಸರಿಯಾಗದೆಂದು ಹೊಸದಾಗಿ ಕೊಂಡ ಪಾದರಕೆಗಳನ್ನು ದಡದಲ್ಲಿಯೇ ಬಿಟ್ಟು ದೋಣಿಯೇರಿದರು, ಬಂದು ನೋಡುವಷ್ಟರಲ್ಲಿ ಪಾದರಕ್ಷೆಯ ಅಗತ್ಯವಿದ್ದವರು ಶಾಸ್ತ್ರಿಗಳ ಪಾದರಕ್ಷೆವೆಂದು ಗೌರವಿಸದೆ ಒಯ್ದಿದ್ದರು. ಆ ಅನುಭವವನ್ನು ಹಾಸ್ಯಮಯವಾಗಿ ಹೇಳಿದಾಗ ಶಾಸ್ತ್ರಿಗಳ ಬೆಪ್ಪು ತನಕ್ಕೆ ನಾನಂತೂ ನಕ್ಕಿದ್ದವು. ಶಾಸ್ತ್ರಿಗಳ ಆಸ್ವಾನುಭವದ ಘಟನೆ ತಮ್ಮ ಕಥಾ ಕಾಲಕ್ಷೇಪದ ನಡುವೆ ಉಪಕತೆಯಂತೆ ಪ್ರಯೋಗವಾಗುತ್ತಿತ್ತು. ಶಾಸ್ತ್ರಿಗಳು ಬಳಸಿಕೊಳ್ಳುತ್ತಿದ್ದ ಉಪಕಥೆಗಳು ಹೆಚ್ಚಾಗಿ ಸ್ವಾನುಭವದ ಘಟನೆಗಳೇ ಆಗಿರುತ್ತಿದ್ದವು.

ನಮ್ಮೂರು ಕಂಬಾಳಿನಲ್ಲಿ ಶಾಸ್ತ್ರಿಗಳು ಒಮ್ಮೆ ಶಿವಕಥೆ ನಡೆಸಿಕೊಟ್ಟಿದ್ದರು. ಹಾರ್ಮೋನಿಯಂ ಸೋಲೂರು ಚನ್ನಪ್ಪ ಗುಂಡಾ ಭಕ್ತರ ರೇವಣ್ಣ ಪಿಟೀಲು, ರುದ್ರಾಚಾರರು ಮದ್ದಾಳೆ ನುಡಿಸಿದ ನೆನಪು. ಅಂದು ರಾಜಶೇಖರ ವಿಳಾಸವನು ಕಥಾ ಕಾಲಕ್ಷೇಪಕ್ಕೆ ಬಳಸಿಕೊಂಡಿದ್ದರು ಅದೇ ಸ್ಫೂರ್ತಿಯಿಂದ ಕಂಬಾಳಿನಲ್ಲಿ ನೂರಾರುಸಲ 'ರಾಜಶೇಖರವಿಳಾಸ' ನಾಟಕವನ್ನು ಮಾಡುತ್ತಿದ್ದರು. ಅದೇ ಪ್ರಭಾವದಿಂದ ನಾಟಕ ನೋಡಲು ಬಂದವರು ತಮ್ಮ ಮನೆಯಲ್ಲಿ ಸಂತಾನವಾದರೆ (ಗಂಡುಸಂತಾನ) ರಾಜಶೇಖರನೆಂದು ಹೆಸರಿಡುತ್ತಿದ್ದರು. ಹಾಗಾಗಿ ನಮ್ಮೂರಿನ ಆಜುಬಾಜಿನಲ್ಲಿ 'ರಾಜಶೇಖರ' ಎಂಬ ಹೆಸರಿನ ಹತ್ತಾರು ಜನರಿದ್ದಾರೆ.

## ಶರಣ ಸಾಹಿತ್ಯ

ಬಿ. ಶಿವಮೂರ್ತಿ ಶಾಸ್ತ್ರಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿ ಕೊಡುವ ಅಗತ್ಯ ಬೀಳಲಾರದು. ಕೀರ್ತನಕಾರರಾಗಿ ಅವರು ಗಳಿಸಿದ ಹೆಸರು ಬಹುದೊಡ್ಡದು. ಕೀರ್ತನೆಯನ್ನು ಮೊದಮೊದಲು ವೃತ್ತಿಯಂತೆ ನಡೆಸಿದ ಅವರು ಸಂಶೋಧನೆಯತ್ತ ಹೊರಳಿದ್ದು ಶರಣಸಾಹಿತ್ಯಕ್ಕೆ ಮನ್ನಣೆ ಹೆಚ್ಚಾದಂತಾಯಿತು. ಉತ್ತರ ಕರ್ನಾಟಕದಲ್ಲಿ ಫ.ಗು. ಹಳಕಟ್ಟಿಯವರು, ದಕ್ಷಿಣ ಕರ್ನಾಟಕದಲ್ಲಿ ಶಿವಮೂರ್ತಿಶಾಸ್ತ್ರಿಗಳು ಜೀವಿತದ ಬಹು ಕಾಲವನ್ನು ಶರಣ ಸಾಹಿತ್ಯ ಪ್ರಚಾರಕ್ಕೆ ಅರ್ಪಿಸಿಕೊಂಡವರಾಗಿದ್ದಾರೆ.

'ಶರಣಸಾಹಿತ್ಯ' ಮಾಸಪತ್ರಿಕೆಯನ್ನು ಮೂವತ್ತೆರಡು ಸಂವತ್ಸರಗಳ ಕಾಲ ನಡೆಸಿ ಸಹೃದಯರ ವಾಚನಾಭಿರುಚಿಯನ್ನು, ಶರಣ ಸಾಹಿತ್ಯಾಭಿಮಾನವನ್ನು ಗಣನೀಯವಾಗಿ ಬೆಳೆಯಿಸಿದರು. ತಮ್ಮ ಪರಿಚಯದ ಪರಿಧಿಗೆ ಬಂದ ಯಾರನ್ನೇ ಆಗಲಿ 'ಶರಣ ಸಾಹಿತ್ಯ' ಪತ್ರಿಕೆಗೆ ಚಂದಾದಾರರಾಗುವಂತೆ ಹೇಳುತ್ತಿದ್ದರು. ಓದುಗರ ಬಳಗವನ್ನು ಹೆಚ್ಚಿಸಿಕೊಳ್ಳಲು ಸದಾಕಾಲವೂ ಹಂಬಲಿಸುತ್ತಿದ್ದರು. ಅಭಿಮಾನಕ್ಕೋ, ದಾಕ್ಷಿಣಕ್ಕೋ ಒಮ್ಮೆ ಪತ್ರಿಕೆಗೆ ಚಂದಾದಾರರಾದವರು ಶಾಶ್ವತ ಚಂದಾದಾರರಾಗಿ ಮುಂದುವರೆಯುವ ಆಸಕ್ತಿ ತಳೆಯುತ್ತಿದ್ದರು.

'ಶರಣಸಾಹಿತ್ಯ' ಓದುವವರು ಉನ್ನತ ಸ್ತರದ ಚಿಂತಕರೆಂಬ ಪ್ರತಿಷ್ಠೆ ಬೆಳೆಯಿತು. ಧರ್ಮವೊಂದಕ್ಕೆ ಸಂಬಂಧಪಟ್ಟ ವಾಙ್ಞಾಯವನ್ನು ಶಿವಮೂರ್ತಿ ಶಾಸ್ತ್ರಿಗಳಂತೆ ಮನೆ ಮನೆಗೆ ಮುಟ್ಟಿಸಿದವರು ಅಪರೂಪ.

ಬದುಕಲಿಕ್ಕಾಗಿ ಬರವಣಿಗೆ ಪ್ರಾರಂಭಿಸಿದ ಶಾಸ್ತ್ರಿಗಳು, ಬರೆಯಲಿಕ್ಕಾಗಿಯೇ ಬದುಕಿದವರಂತೆ ತಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಂಡರು. ಲೇಖನಿ ಹಿಡಿಯಲು ಇನ್ನು ಸಾಧ್ಯವಾಗದೆಂಬ ವೃದ್ಧಾಪ್ಯದ ತನಕ ಬರೆದರು. ಬರೆದದ್ದನ್ನು ಪ್ರಕಟಿಸಿದರು, ಅಂಗಾಲುಗಳಲ್ಲಿ ಸಂಚಾರೀ ಚಕ್ರಗಳು ತಿರುಗುವ ತನಕ ದೇಶಸಂಚಾರದಲ್ಲಿ ನಿರತರಾದರು. ಜನರಿಗೆ ಪುಣ್ಯಕ್ಷೇತ್ರಗಳನ್ನು ಪರಿಚಯಿಸಿಕೊಟ್ಟರು. ಪುಣ್ಯಕ್ಷೇತ್ರಗಳ ಮಹತ್ವಕ್ಕೆ ಪುರಾಣಗಳಿಗಿಂತ ಹೆಚ್ಚಾಗಿ ಇತಿಹಾಸವನ್ನು ಬೆಸೆದರು. ಶರಣರನ್ನು ಸಮಾಜಕ್ಕೆ ಪರಿಚಯಿಸಿಕೊಟ್ಟರು. ಅಂಗಾಲುಗಳ ಸಂಚಾರೀಚಕ್ರ ಶಕ್ತಿಗುಂದಿದಾಗ, ಅಧ್ಯಯನಶೀಲರಾದರು. ಪತ್ರಕರ್ತರಾದರು, ಸಂಘಟಕರಾದರು, ಕನ್ನಡದ ಸಂಸ್ಕೃತಿಯನ್ನು ಪ್ರಸಾರ ಮಾಡುವಲ್ಲಿ ತಮ್ಮ ಹೊಣೆಗಾರಿಕೆಯನ್ನು ಚೆನ್ನಾಗಿ ಅರಿತಿದ್ದರು. ಪ್ರಾಚೀನ ಕಾವ್ಯಗಳನ್ನು ನವಯುಗದ

ಮುದ್ರಣ ರೂಪಕ್ಕೆ ಅಳವಡಿಸಿ ಪ್ರಕಟಿಸಿ ಮಾರಾಟ ಮಾಡಿ ಓದುಗರ ಸಂಖ್ಯೆಯನ್ನು ಬೆಳೆಸಿದರು. ಶಾಸ್ತ್ರಿಗಳು ಹೊರತಂದ ಗ್ರಂಥಗಳ ಮುಖಬೆಲೆಗಳನ್ನು ನೋಡಿದರೆ ಅವರು ಹಣಗಳಿಕೆಯ ಆಸೆಯಿಂದ ಪ್ರಕಟಣೆಗೆ ಮುಂದಾದವರಲ್ಲ ಎನ್ನಿಸದೇ ಇರದು; ಸಿರಿವಂತರನ್ನು ಗ್ರಂಥ ದಾನಕ್ಕೆ ಒಪ್ಪಿಸುತ್ತಿದ್ದರು ಸಾಮಾನ್ಯ ಓದುಗರ ಕೈಯೆಟುಕಿಗೆ ದೊರೆಯುವಂತೆ ಮುಖಬೆಲೆಯಿರಿಸುತ್ತಿದ್ದರು. ಶಾಸ್ತ್ರಿಗಳಂತೆ ಗ್ರಂಥ ದಾಸೋಹ ನಡೆಸಿದವರನ್ನು ನಾನು ಕಂಡಿಲ್ಲ. ವೀರಶೈವ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ ಶಾಸ್ತ್ರಿಗಳು ತಮ್ಮ ಶರಣ ಸಾಹಿತ್ಯದ ಮೂಲಕ ಓದಿನ ಅನುಭವಗಳನ್ನು ಸಮುದಾಯದ ಜೊತೆಗೆ ಹಂಚಿಕೊಂಡರು. “ಶರಣ ಸಾಹಿತ್ಯದ ಮೂಲಕ ಅದೆಷ್ಟೋ ಸಾಕ್ಷರರು ಸಾಹಿತಿಗಳಾದರು. ಅದೆಷ್ಟೋ ಓದುಗರು ವಿದ್ವಾಂಸರಾದರು. ಶರಣ ಸಾಹಿತ್ಯದ ಅಭಿಮಾನಿ ದೊಡ್ಡ ಬಳಗವನ್ನು ಸೃಷ್ಟಿಸಿಕೊಂಡರು. ಶರಣಸಾಹಿತ್ಯದಲ್ಲಿ ಪ್ರಕಟವಾದ ಲೇಖನಗಳು ಯಾರಾದರೂ ಪಂಡಿತರನ್ನು ಕೆಣಕುವಂತಿರುತ್ತಿದ್ದವು. ವಿದ್ವಾಂಸರು ಪ್ರತಿಕ್ರಿಯೆ ಮಾಡಲಿಕ್ಕಾದರೂ ಶರಣ ಸಾಹಿತ್ಯಕ್ಕೆ ಪತ್ರ ಬರೆದವರು ಆ ಮೇಲೆ ಪತ್ರಿಕೆಯ ಬಳಗದವರಾಗಿ ಬಿಡುತ್ತಿದ್ದರು.

ವೀರಶೈವ ಧರ್ಮದ ಅಂತರಾಳವನ್ನು ಮೊದಲಿನಿಂದಲೂ ಅಧ್ಯಯನ ಮಾಡುತ್ತಾಲೇ ಬಂದ ಶಾಸ್ತ್ರಿಗಳು ವಚನ ಸಾಹಿತ್ಯದ ವಿಚಾರಧಾರೆಗಳತ್ತ ವಾಲಿಬಿಟ್ಟರು. ವಚನಗಳು ಶಾಸ್ತ್ರಿಗಳ ಮೇಲೆ ಅಪಾರ ಪರಿಣಾಮ ಬೀರಿದವು ಅದರಲ್ಲೂ ಬಸವಣ್ಣನವರ ವಚನಗಳ ಬಗ್ಗೆ ಅನನ್ಯವಾದ ವಿಚಾರ ಪ್ರೀತಿಯನ್ನು ಇರಿಸಿಕೊಂಡರು. ಮನುಕುಲದ ಒಳಿತಿಗೆ ಪ್ರೀತಿಯೇ ಬಹು ದೊಡ್ಡ ಬಂಡವಾಳವೆಂದು ತಿಳಿದು ಭಕ್ತಿಯೊಳಗೆ ಪ್ರೀತಿಯ ಮೌಲ್ಯಗಳಿರುವುದನ್ನು ಬರೆದು ತೋರಿಸಿದರು, ಅಥವಾ ವಿವರಿಸಿ ಬರೆದರು.

ಶಾಸ್ತ್ರಿಗಳ ಪ್ರಕಾಶನದಿಂದ ಪ್ರಕಟಗೊಂಡ ಗ್ರಂಥಗಳು ರಂಜನೆಗಾಗಿ ರಚಿಸಿದ ಸರಕುಗಳಲ್ಲ. ಇತಿಹಾಸವನ್ನು ಜೀವಂತಗೊಳಿಸುವ ಅಮೃತ ಕುಂಭಗಳು. ಶಾಸ್ತ್ರಿಗಳು ಶರಣ ಸಾಹಿತ್ಯ ಪ್ರಕಟಿಸುತ್ತಿದ್ದಾಗ ಕನ್ನಡ ಸಾಹಿತ್ಯ ವಲಯದಲ್ಲಿ ಪ್ರಗತಿ ಶೀಲ ಸಾಹಿತ್ಯ ಚಳುವಳಿ ಜೋರಾಗಿಯೇ ನಡೆದಿತ್ತು. ಶಾಸ್ತ್ರಿಗಳು ಸಾಹಿತ್ಯ ಚಳುವಳಿಯತ್ತ ಗಮನ ಕೊಡಲೇ ಇಲ್ಲ. ಸಂಶೋಧನೆಗೆ ಸಾರ್ವಕಾಲಿಕವಾದ ಹೊಸತನವಿದ್ದೇ ಇರುತ್ತದೆಯೆಂದು ನಂಬಿದ್ದರು. ಶರಣ ಸಾಹಿತ್ಯಕ್ಕಿಂತ ಪ್ರಗತಿಶೀಲ ಸಾಹಿತ್ಯ ಚಳುವಳಿ ಶಾಸ್ತ್ರಿಗಳಿಗೆ ಪ್ರತ್ಯಕ್ಷವಾಗಿ ಕಂಡಿರಲಾರದು ಶಾಸ್ತ್ರಿಗಳನ್ನು ಬಲ್ಲವರು ಬಹಳ ಜನರಿದ್ದರು. ವೀರಶೈವ ಸಮುದಾಯಕ್ಕಂತೂ ಅವರು ಚಿರಪರಿಚಿತರು. ಅವರು ಶರಣ ಸಾಹಿತ್ಯ ಪತ್ರಿಕೆಯ ಸಂಪಾದಕರಾಗಿದ್ದ ಕಾಲಮಾನದಲ್ಲಿ ಲಿಂಗಾಯತ ಸಮುದಾಯಕ್ಕೆ ಅನಿಮಿತ್ತ ಬಂಧುವಾಗಿ ಹೋಗಿದ್ದರು. ದೇಶದೊಳಗಿನ ಯಾವುದೇ ಲಿಂಗವಂತರ ಸಮಾರಂಭಗಳಲ್ಲಿ; ಮಠಾಧೀಶರಿಗೆ, ಮಂತ್ರಿ ಮಹೋದಯರಿಗೆ ಸಮರ್ಪಿಸುತ್ತಿದ್ದ ಭಿನ್ನವತ್ತಳೆ, ಸನ್ಮಾನಪತ್ರ ಹಾಗೂ ಸಮಾರಂಭದ; ಆಹ್ವಾನಪತ್ರ; ಇತ್ಯಾದಿಗಳೆಲ್ಲವೂ ಶಾಸ್ತ್ರಿಗಳಿಂದ ಬರೆಯಲ್ಪಟ್ಟು ರಂಗಸ್ವಾಮಿಗುಡಿ ಬೀದಿಯ ಅವರದೇ ಸ್ವತಂತ್ರ ಮುದ್ರಣಾಲಯದಲ್ಲಿ ಮುದ್ರಣಗೊಳ್ಳುತ್ತಿದ್ದವು. ಭಿನ್ನವತ್ತಳೆ, ಸನ್ಮಾನ ಪತ್ರಗಳು ಪಾಂಡಿತ್ಯ ಪೂರ್ಣವಾಗಿರುತ್ತಿದ್ದವು.

ಶಾಸ್ತ್ರಿಗಳನ್ನು ಅರ್ಥಮಾಡಿಕೊಂಡಿದ್ದವರು ಬಹಳ ಜನರಿರಲಿಲ್ಲ. ಬಂಧು ಬಳಗದವರು, ಶಾಸ್ತ್ರಿಗಳಿಂದ ಬೇಕಾದ ರಾಜಕೀಯ ವಶೀಲಿಗಳನ್ನು ಪಡೆಯುತ್ತಿದ್ದರು. ಶಾಸ್ತ್ರಿಗಳಿಗೆ ಕಾಯಕ ತತ್ವದಲ್ಲಿ ಗೌರವವಿದ್ದದ್ದರಿಂದ ದುಡಿದುಣ್ಣುತ್ತೇನೆಂದು ಮುಂದೆ ಬಂದವರನ್ನು ಹಿಂದಿಕ್ಕಿಕೊಂಡು ರಾಜಕಾರಣಿಗಳ ಬಳಿಗೊಯ್ದು ಎಂಥದ್ದಾದರೂ ಉದ್ಯೋಗ ಕೊಡಿಸಿಯೇ ಬಿಡುತ್ತಿದ್ದರು. ಬೆಂಗಳೂರಿನ ರಂಗಸ್ವಾಮಿ ಗುಡಿಬೀದಿಯಲ್ಲಿದ್ದ ಅವರ ಮನೆ ಬಂಧು ಮಿತ್ರರಿಂದ ಸದಾ ತುಂಬಿ ಕೊಂಡಿರುತ್ತಿತ್ತು. ಪಂಡಿತ ಕೆ.ಪಿ.ಶಿವಲಿಂಗಯ್ಯನವರು ನನಗೆ ಬಂಧುಗಳಾಗಿದ್ದರು ಅವರು ಸದಾ ಶಾಸ್ತ್ರಿಗಳ ಮನೆಗೆ ಹೋಗುತ್ತಿದ್ದರು, ಶಾಸ್ತ್ರಿಗಳ ಎರಡನೇ ಮಗ ಹೆಚ್.ಎಸ್. ಶಿವಪ್ರಕಾಶ ಆಗಿನ್ನೂ ಹೈಸ್ಕೂಲು ವಿದ್ಯಾರ್ಥಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಓದುತ್ತಿದ್ದ, ಆತನಿಗೆ ಪಂಡಿತ ಕೆ.ಪಿ.ಶಿವಲಿಂಗಯ್ಯನವರು ಮನೆಪಾಠ ಕನ್ನಡವನ್ನು ಹೇಳಿಕೊಡುತ್ತಿದ್ದರು. ಅವರೊಟ್ಟಿಗೆ ನಾನೊಮ್ಮೆ ಶಾಸ್ತ್ರಿಗಳ ಮನೆಗೆ ಹೋಗಿದ್ದೆ.

ಹೆಸರಾಂತ ಕಾದಂಬರಿಕಾರರಾದ ಬಸವರಾಜ ಕಟ್ಟಿಮನಿಯವರು ಬೆಂಗಳೂರಿಗೆ ಬಂದಾಗಲೆಲ್ಲ ಶರಣಸಾಹಿತ್ಯ ಕಛೇರಿಯಲ್ಲಿಯೇ ಉಳಿದುಕೊಳ್ಳುತ್ತಿದ್ದರು, ಶಾಸ್ತ್ರಿಗಳು ಅವರಿಂದಲೂ ಕರಡು ತಿದ್ದಿಸುವ ಕೆಲಸ ಮಾಡಿಸುತ್ತಿದ್ದರು. ಶಾಸ್ತ್ರಿಗಳಿಗೆ ನಿಕಟವಾಗಿದ್ದು ಸಮಕಾಲಿನ ಸಾಹಿತಿಗಳಾರೂ ಅವರನ್ನು ಕುರಿತು ಜೀವನ ಚರಿತ್ರೆಯನ್ನು ಬರೆಯಲಿಲ್ಲ ಶಾಸ್ತ್ರಿಗಳು ತಾವೇ "ಜೀವನ ಸ್ಮೃತಿಗಳು" ಎಂಬ ಶೀರ್ಷಿಕೆಯಡಿ ಕೆಲವಿಚಾರಗಳನ್ನು ಬರೆದು ಪ್ರಕಟಿಸಿದ್ದರು. ಆ ಹೊತ್ತಿಗಾಗಲೇ ಆತ ಪ್ರಶಂಸೆಯ ಬಗ್ಗೆ ನಿರಾಸಕ್ತಿ ಆವರಿಸಿಕೊಂಡುಬಿಟ್ಟಿತ್ತು. ಬದುಕಿನಲ್ಲಿಯ ಕೆಲವೇ ಕೆಲವು ಘಟನೆಗಳನ್ನು ಬರೆದುಕೊಂಡರು 'ಗಿರಿಯ ನವಿಲು' ನಂತಹ ಮೌಲಿಕ ಕಾದಂಬರಿಯನ್ನು ಬರೆದಿದ್ದ ಬಸವರಾಜ ಕಟ್ಟಿಮನಿಯವರು ಶಿವಮೂರ್ತಿಶಾಸ್ತ್ರಿಗಳನ್ನು ಕುರಿತು ಬರೆದಿದ್ದ ಸಮಕಾಲೀನ ಎತ್ತರದ ವ್ಯಕ್ತಿಯನ್ನು ಕನ್ನಡಿಗರಿಗೆ ಪರಿಚಯಿಸಿದಂತಾಗುತ್ತಿತ್ತು ಇದಕ್ಕಾಗಿ ಬಸವರಾಜ ಕಟ್ಟಿಮನಿಯವರನ್ನು ನಾವು ಆಕ್ಷೇಪಿಸಲೂ ಬೇಕಾಗಿಲ್ಲ. ತೀರಾ ಇತ್ತೀಚೆಗೆ ಶಾಸ್ತ್ರಿಗಳ ಪ್ರಭಾವಕ್ಕೆ ಒಳಗಾಗಿದ್ದ ಬಿ.ಸಿದ್ದಲಿಂಗಸ್ವಾಮಿ ಮತ್ತು ಪ್ರೊ. ಆರ್. ರಾಚಪ್ಪನವರು ಬೇರೆ ಬೇರೆ ಸಂದರ್ಭಗಳಲ್ಲಿ ಶಾಸ್ತ್ರಿಗಳ ಬಗ್ಗೆ ಕಿರು ಹೊತ್ತಿಗೆಗಳನ್ನು ಬರೆದು ಪರಿಚಯಿಸಿ ಕೊಟ್ಟರು. ಅದೇ ಸಂದರ್ಭದಲ್ಲಿ ಗಮಕಿ ಎಂ.ಆರ್. ಸತ್ಯನಾರಾಯಣ ಅವರು ಶಿವಮೂರ್ತಿಶಾಸ್ತ್ರಿಗಳನ್ನು ಕುರಿತು ವ್ಯಕ್ತಿ ಚಿತ್ರಣವನ್ನು ಸಂಕ್ಷಿಪ್ತವಾಗಿ ರಚಿಸಿ ಪ್ರಕಟಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಎನ್. ಬಸವಾರಾಧ್ಯರು ಶಾಸ್ತ್ರಿಗಳ ಬಗ್ಗೆ ಕಿರು ಹೊತ್ತಿಗೆ ಬರೆದು ಹಂಪಿ ವಿಶ್ವವಿದ್ಯಾಲಯಕ್ಕೆ ಕೊಟ್ಟರು. ಶರಣ ಸಾಹಿತ್ಯ ಪತ್ರಿಕೆಯಲ್ಲಿ ಕೇವಲ ಶರಣರನ್ನು ಕುರಿತಾದ ಬರಹಗಳೇ ಇರುತ್ತಿರಲಿಲ್ಲ. ಕನ್ನಡ ಸಂಸ್ಕೃತಿಯನ್ನು ಕುರಿತಾದ ಚಿಂತನೆಗಳುಳ್ಳ ಲೇಖನಗಳೂ ಇರುತ್ತಿದ್ದವು. ಶಾಸ್ತ್ರಿಗಳು ಲಕ್ಷ್ಮೀಶ ಕವಿಯ ಜೈಮಿನಿ ಭಾರತವನ್ನು ದೇವುಡು ಅವರ ಸಹಭಾಗಿತ್ವದಲ್ಲಿ ಸಂಪಾದಿಸಿ ಕೊಟ್ಟಿದ್ದರು. ಕೆಂಗಲ್ ಹನುಮಂತಯ್ಯನವರ ಮಹತ್ವಾಕಾಂಕ್ಷೆಯ ಸಂಸ್ಕೃತಿ ಇಲಾಖೆ ಅದನ್ನು ಪ್ರಕಟಪಡಿಸಿ ಕೇವಲ ಒಂದು ರೂಪಾಯಿಗೆ ಕನ್ನಡಿಗರ ಕೈಸೇರುವಂತೆ ಮಾಡಿತ್ತು ಅದಿರಲಿ; ಶಾಸ್ತ್ರಿಗಳು ಆ ಮಹಾಕಾವ್ಯ, ಸಂಪಾದನೆಗೆ ಪ್ರಸ್ತಾವನೆ ರಚಿಸಿದ್ದರು ಕವಿಲಕ್ಷ್ಮೀಶನ ಕಾಲ ನಿರ್ಣಯ, ಸ್ಥಳ, ಬಿರುದುಗಳ ಪರಿಷ್ಕರಣೆ ಮುಂತಾದ್ದರಲ್ಲಿ ಅವರ ಪಾಂಡಿತ್ಯ ಪ್ರಕಟವಾಗಿತ್ತು. ಊರೂರು ಅಲೆದಲೆದು ಕೀರ್ತನೆ ಮಾಡುತ್ತಿದ್ದ ಈ 'ಶಿವದಾಸ' ಪ್ರಕಟಿಸುತ್ತಿದ್ದ ಶರಣ ಸಾಹಿತ್ಯ

ಪತ್ರಿಕೆ ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸುತ್ತಿದ್ದ ಪ್ರಬುದ್ಧ ಕರ್ನಾಟಕದಷ್ಟೇ ಸಂಗ್ರಹ ಯೋಗ್ಯವಾಗಿತ್ತು. ನಾಡಿನ ಘನ ವಿದ್ವಾಂಸರು, ಸಂಶೋಧಕರು ತಮ್ಮ ಪ್ರಬಂಧಗಳನ್ನು ಅದೇ ಪತ್ರಿಕೆಯ ಮೂಲಕ ಸಾರಸ್ವತ ಲೋಕಕ್ಕೆ ಅರ್ಪಿಸುತ್ತಿದ್ದರು. ಶರಣ ಸಾಹಿತ್ಯ ನಾಡಿನ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ, ಸಂಶೋಧನಾ ಪ್ರಬಂಧಗಳಿಗೆ ಆಕರ ವಿಷಯಗಳನ್ನು ಒದಗಿಸುತ್ತಿತ್ತು. ಸಂಸ್ಕೃತಿಯ ಬಗ್ಗೆ, ಸಾಹಿತ್ಯದ ಬಗ್ಗೆ, ಶರಣರ ಇತಿಹಾಸದ ಬಗ್ಗೆ ಸಂಶೋಧನೆ ನಡೆಸುವಾಗ ಆಕರ ಗ್ರಂಥಗಳ ಪಟ್ಟಿಯನ್ನು ಗಮನಿಸಿದರೆ ಶರಣ ಸಾಹಿತ್ಯ ಪತ್ರಿಕೆಯ ಘನತೆ ಮನವರಿಕೆಯಾಗುತ್ತದೆ. ಶರಣ-ಅಥವಾ-ವಚನಸಾಹಿತ್ಯ ವಿಷಯದ ಬಗ್ಗೆ ಅಧ್ಯಯನ ನಡೆಸಿ ಸಂಶೋಧನಾ ಪ್ರಬಂಧ ರಚಿಸಿದವರ ಆಕರಗ್ರಂಥಗಳ ಪಟ್ಟಿಯಲ್ಲಿ ಶರಣಸಾಹಿತ್ಯ ಸಂಚಿಕೆಗಳ ಹೆಸರು ಉಲ್ಲೇಖಗೊಂಡಿರುತ್ತಿದ್ದವು.

ಸಿದ್ಧಗಂಗಾ ಕ್ಷೇತ್ರದಲ್ಲಿ ಕೂಲಿಮಠ ಸ್ಥಾಪಿಸಿ, ಅಲ್ಲಿಯೇ ಕೂಲಿಮಠದಯ್ಯಗಳ ವೃತ್ತಿಗೆ ಸೇರಿ ಸೇವೆಸಲ್ಲಿಸುತ್ತಿದ್ದ ಮತಕೂರು ನಂಜುಂಡ ಶಿವಯೋಗಿಗಳ ಸಮಗ್ರ ಕೃತಿಗಳನ್ನು ಸಂಪಾದಿಸಿ ಪ್ರಕಟಿಸುವ ಸುಯೋಗ ನನಗೆ ದೊರಕಿತು. ಶಿವಯೋಗಿಗಳ ಬಗ್ಗೆ ಪರಿಚಯದ ಸಾಮಾಗ್ರಿ ದೊರೆಯುವುದು ಕಷ್ಟವೆನಿಸಿತ್ತು. ಶಿವಯೋಗಿಗಳು ವಾಸ್ತವ್ಯ ಹೂಡುತ್ತಿದ್ದ ಭಕ್ತರ ಮನೆಗಳಲ್ಲಿ ಮತ್ತು ಸಂಚರಿಸಿದ್ದ ಊರೂರುಗಳಲ್ಲಿ ಎಷ್ಟು ಹುಡುಕಾಟ ನಡೆಸಿದರೂ ಮಾಹಿತಿ ದೊರಕಲಿಲ್ಲ. ನಂಜುಂಡ ಶಿವಯೋಗಿಗಳು ಗಿರಿಜಾಕಲ್ಯಾಣ, ಗಂಗಾವತರಣ, ವೃಷಭಾರೂಢ ಶಿವಪಾರ್ವತಿಯರು, ಇತ್ಯಾದಿ ಅನೇಕ ವರ್ಣಚಿತ್ರಗಳನ್ನು ರಚಿಸಿ ಭಕ್ತರಿಗೆ ನೀಡುತ್ತಿದ್ದರು. ಭಕ್ತರು ಅವನ್ನು ಬಹು ಜೋಪಾನ ಮಾಡಿಕೊಳ್ಳುತ್ತಿದ್ದರು. ಅಟವೀಶಗೀತಾಮಂಜರಿ, ಸುರಭಾಂಡೇಶ್ವರ, ಇತ್ಯಾದಿ ಅನೇಕ ಹಾಡುಹಬ್ಬಗಳನ್ನು ರಚಿಸಿದ್ದ ಶಿವಯೋಗಿಗಳು ವರ್ಣಚಿತ್ರಗಳನ್ನು ಬಹು ಸುಂದರವಾಗಿ ರಚಿಸುತ್ತಿದ್ದಾರೆಂಬ ಮಾಹಿತಿ 'ಶರಣಸಾಹಿತ್ಯ' ಪತ್ರಿಕೆಯೊಂದರ ಲೇಖನದಿಂದ ತಿಳಿದುಬಂತು. ತುಮಕೂರಿನ ಭಕ್ತರೊಬ್ಬರ ಮನೆಯಲ್ಲಿ ವರ್ಣಚಿತ್ರಗಳಿವೆ ಎಂದು ಶಿವಮೂರ್ತಿಶಾಸ್ತ್ರಿಗಳು ಕರಾರುವಕ್ಕಾಗಿ ಹೇಳಿದರು. ಅದೇ ಲೇಖನವನ್ನು ಸಾಕ್ಷಿ ಮಾಡಿಕೊಂಡು ತುಮಕೂರು ಮಂಡಿಪೇಟೆಯ ನಂದಿಆಯಿಲ್ ಮಿಲ್ಸ್‌ನ ಮಾಲೀಕರನ್ನು ಕೇಳಿದಾಗ ಅವರು ತಮ್ಮ ಮನೆಯಲ್ಲಿ ಸಂರಕ್ಷಿಸಿಗೊಂಡಿದ್ದ ವರ್ಣಚಿತ್ರಗಳನ್ನು ತೋರಿಸಿದ್ದರು. ಅವುಗಳನ್ನು ಕ್ಯಾಮರಾದ ಮೂಲಕ ಪ್ರತಿಕೃತಿ ಮಾಡಿಕೊಂಡು ಬಂದಿದ್ದೆವು. ಇದು ಒಂದು ಉದಾಹರಣೆ ಮಾತ್ರ, ಇಂತಹ ನೂರಾರು ಮಾಹಿತಿಗಳು, ಶರಣ ಸಾಹಿತ್ಯ ಪತ್ರಿಕೆಯ ಮೂಲಕ ಲೋಕ ಗೋಚರವಾಗುತ್ತಿದ್ದವು.

ಶಿವಮೂರ್ತಿಶಾಸ್ತ್ರಿಗಳು, 'ಶೂಲಪಾಣಿ' ಎಂಬ ಹೆಸರಿನಿಂದ ಅಥವಾ ಕಾವ್ಯನಾಮದಿಂದ ಸಾಂಪ್ರದಾಯಿಕ ಛಂದಸ್ಸುಗಳಲ್ಲಿ ಪದ್ಯಗಳನ್ನು ಬರೆಯುತ್ತಿದ್ದರು. ಪದ್ಯಗಳಲ್ಲಿ ಪಾಂಡಿತ್ಯದ ಕಣಕವೇ ಹೆಚ್ಚಿರುತ್ತಿತ್ತು ಭಾವದ ಹೂರಣ ಕಡಿಮೆಯೆನಿಸುತ್ತಿತ್ತು.

ಆಕಾಲದಲ್ಲಿಯೇ ಕನ್ನಡ ನವೋದಯ ಸಾಹಿತ್ಯ ಹುಟ್ಟಿಕೊಂಡಿತು. ಸಮಕಾಲೀನರಾದ ಕುವೆಂಪು, ಬಿ.ಎಂ.ಶ್ರೀ, ಕೆ.ಎಸ್.ನ. ಪುತಿನ ಅನೇಕರಿದರು. ಶಾಸ್ತ್ರಿಗಳು ಹಳೆಯ ಛಂದಸ್ಸನ್ನು ಬಿಡದೆ ಆಶ್ರಯಿಸಿ

ಕಾವ್ಯಬರೆದರು ಅವು ಕಾವ್ಯದ ಕಾವಿನಿಂದ ಹೊರಬಂದ ಪಕ್ಷಿಗಳಂತೆ ರೆಕ್ಕೆಬಲಿತು ಹಾರಲಿಲ್ಲ. ಚಂಪೂ, - ವೃತ್ತಗಳು, ಪಟ್ಪದಿ, ಚೌಪದಿ ತ್ರಿಪದಿಗಳ ಲಯಗ್ರಹಣದಿಂದ ಅವರ ಕಾವ್ಯಕೌಮುದಿ ಪ್ರಕಾಶಗೊಳ್ಳಲಿಲ್ಲ.

ಶರಣ ಸಾಹಿತ್ಯದ ಪ್ರಕಟಣೆಯ ವೆಚ್ಚ ಹಾಗೂ ವಿತರಣೆಯಿಂದ ಬರುತ್ತಿದ್ದ ಮೊತ್ತ ಎರಡೂ ಎಂದೂ ಸಮಜೋಡಿಯಾಗಲೇ ಇಲ್ಲ. ಮಾಸಿಕದ ಪ್ರಕಟಣೆಯಿಂದ ಹಣಬಂದಿತೋ ಬಿಟ್ಟಿತೋ ಗೊತ್ತಿಲ್ಲ ಆದರೆ ಶರಣಸಾಹಿತ್ಯದ ವೈಚಾರಿಕ ಮತ್ತು ಸಂಶೋಧನಾ ಲೇಖನಗಳ ರಾಶಿಯನ್ನು ಶಾಸ್ತ್ರಿಗಳು ಅಳೆದರು. ಅವರಿಗದರಿಂದ ಸಂತೋಷವಾಗುತ್ತಿತ್ತು. ಪ್ರಕಟಣೆಯ ನಷ್ಟವನ್ನು ಸಮಾಜಸೇವೆ ಎಂಬ ಶೀರ್ಷಿಕೆಯಿರಿಸಿ ಸಹಿಸಿಕೊಳ್ಳುತ್ತಿದ್ದರು. ತಮ್ಮ ಜೀವನ ಚರಿತ್ರೆಯಲಿ ಶರಣಸಾಹಿತ್ಯ ಪ್ರಕಟಣೆಯ ಬಗ್ಗೆ ಅವರು ಹೇಳಿಕೊಂಡಿರುವ ವಿಚಾರಗಳು ಗಮನಾರ್ಹವಾಗಿವೆ.

“ಇನ್ನು ಶರಣಸಾಹಿತ್ಯ ಮಾಸಿಕದ ವಿಚಾರವಾಗಿ ನಾಲ್ಕು ಮಾತು ಹೇಳಬೇಕಾಗಿದೆ. ಈ ಪತ್ರಿಕೆಯನ್ನು 1936ರಲ್ಲಿ ಪ್ರಾರಂಭಿಸಿದೆನು 1972ರಲ್ಲಿ ನಿಲ್ಲಿಸಬೇಕಾಯಿತು. ಇದರಲ್ಲಿ ದೊಡ್ಡ ದೊಡ್ಡ ವಿದ್ವಾಂಸರು ಲೇಖನಗಳನ್ನು ಬರೆದಿದ್ದಾರೆ. ಇದು ವಿದ್ವಾಂಸರ ಮನ್ನಣೆಯನ್ನು ಗಳಿಸಿದೆ. ತಿಂಗಳಿಗೆ ಸುಮಾರು ಒಂದು ಸಾವಿರ ರೂಪಾಯಿ ವೆಚ್ಚವಾಗುತ್ತಿತ್ತು. ಇದರಿಂದ ನನಗೆ ಬರುತ್ತಿದ್ದ ಹಣ 500-600 ರೂಗಳು ಉಳಿದ ಹಣವನ್ನು ಮುದ್ರಣಾಲಯಗಳ ಕೆಲಸಗಳಿಂದ ಗ್ರಂಥಗಳ ಮಾರಾಟದಿಂದ ಕೂಡಿಸಬೇಕಾಗುತ್ತಿತ್ತು. ಈ ಮಾಸಿಕದ ಆಶ್ರಯದಲ್ಲಿ ಶರಣ ಸಾಹಿತ್ಯ ಗ್ರಂಥ ಮಾಲೆಯನ್ನು ಪ್ರಾರಂಭಿಸಿ ಸುಮಾರು 40 ಗ್ರಂಥಗಳನ್ನು ಸಂಪಾದಿಸಿ, ಸಂಶೋಧಿಸಿ, ಸ್ವತಂತ್ರವಾಗಿ ರಚನೆ ಮಾಡಿ ಬೆಳಕಿಗೆ ತಂದೆನು. ಈ ಗ್ರಂಥಗಳಲ್ಲಿ ಕೊಂಡಗುಳಿ ಕೇಶಿರಾಜನ ಷಡಕ್ಷರ ಮಂತ್ರ ಮಹಿಮೆ, ನಿಜಗುಣ ಶಿವಯೋಗಿಗಳ ಪುರಾತನ ತ್ರಿಪದಿ, ಪಾಲ್ಕುರಿಕಿ ಸೋಮನಾಥನ ಗಣ ಸಹಸ್ರನಾಮ ಮತ್ತು ಬಸವೋದಾಹರಣ ಗುರುಸಿದ್ಧಕವಿಯ ಮಾದೇಶ್ವರ ಸಾಂಗತ್ಯ, ತುರುಗಾಹಿ ರಾಮಣ್ಣನ ವಚನ, ಘನಲಿಂಗಿದೇವರ ವಚನ, ಶರಣ ಕವಿಗಳ ಶರಣಸಾಹಿತ್ಯ, ಚಂದ್ರಶೇಖರ ಕವಿಯ ಪಂಪಾಸಾನವರ್ಣನ ಮತ್ತು ರಾಘವಾಂಕನ ವೀರೇಶ ಚರಿತ್ರೆ, ಮುಖ್ಯವಾದವು.

ಶಾಸ್ತ್ರಿಗಳು ಸ್ವತಂತ್ರವಾಗಿ ಹಲವಾರು ಗ್ರಂಥಗಳನ್ನು ರಚಿಸಿ ಪ್ರಕಟಪಡಿಸಿದ್ದಾರೆ. ಅವುಗಳಲ್ಲಿ ಕರ್ನಾಟಕ ಸಂದರ್ಶನ, ವೀರಶೈವ ಮಹಾ ಪುರುಷರು, ವೀರಶೈವ ಸಾಹಿತ್ಯ ಮತ್ತು ಇತಿಹಾಸ (ನಾಲ್ಕು ಸಂಪುಟಗಳು) ಬಿದನೂರು ಶಿವಪ್ಪನಾಯಕ, ವೀರಶೈವಧರ್ಮ ಮತ್ತು ಸಂಸ್ಕೃತಿ, ಮಾದೇಶ್ವರಚರಿತೆ, ಮಹಾಕವಿ ಷಡಕ್ಷರದೇವ, ಬಸವಪ್ಪಶಾಸ್ತ್ರಿಗಳು ಇತ್ಯಾದಿ ಗ್ರಂಥಗಳು ಮುಖ್ಯವಾದವು.

ಅಷ್ಟ ಭಾಷಾ ಕವಿ ಚಂದ್ರಶೇಖರ ರಚಿಸಿದ 'ಪಂಪಾಸ್ಥಾನ ವರ್ಣನಂ” ಹದಿನೈದನೇ ಶತಮಾನದ ಇತಿಹಾಸ ಮಹತ್ವದ ಕಾವ್ಯ (ಕ್ರಿ.ಶ. 1430) ಈ ಮೊದಲು ಅದು ಪ್ರಕಟವಾಗಿರಲಿಲ್ಲ. ಶಾಸ್ತ್ರಿಗಳು ಹಸ್ತಪ್ರತಿಯನ್ನು ಉತ್ತಮ ರೀತಿಯಲ್ಲಿ ಸಂಪಾದಿಸಿ ಕೊಟ್ಟಿರುತ್ತಾರೆ. ಪಂಪಾವಿರೂಪಾಕ್ಷನ ಆಸ್ಥಾನ ವರ್ಣನೆಯನ್ನು ವಸ್ತುವಾಗಿರಿಸಿಕೊಂಡು ರಚಿತವಾದ ಚಂಪೂಕಾವ್ಯ. ಪ್ರಾಚೀನ ಕಾಲದಿಂದಲೂ ಪಂಪಾಕ್ಷೇತ್ರ ವಿರೂಪಾಕ್ಷ ದೇವರ

ರಾಜ್ಯ ಯಾವ ರಾಜರು ಬಂದರೂ ಪಂಪಾ ಕ್ಷೇತ್ರವನ್ನು ತನ್ನ ಆಡಳಿತಕ್ಕೆ ಒಳಪಡಿಸಿಕೊಳ್ಳದೆ ದೈವಾಡಳಿತ ಕೇಂದ್ರವಾಗಿಯೇ ಗೌರವಿಸುತ್ತಾ ಬಂದಿದ್ದಾರೆ. ಪಂಪಾಕ್ಷೇತ್ರವನ್ನೊಳಗೊಂಡಂತೆ ಸ್ಥಾಪನೆಯಾದ ವಿದ್ಯಾನಗರ ರಾಜಧಾನಿ ಹಲವು ವಂಶದ ಮಹಾರಾಜರುಗಳ ಆಡಳಿತ ಕೇಂದ್ರವಾಗಿತ್ತು. ದೊರೆಗಳು ಹೊರಡಿಸುತ್ತಿದ್ದ ಶಾಸನಗಳು ಶ್ರೀವಿರೂಪಾಕ್ಷನ ಅಂಕಿತದಲ್ಲಿರುತ್ತಿದ್ದವು. ಪಂಪಾಕ್ಷೇತ್ರದ ಹಿರಿಮೆಯನ್ನು ಸಾರುವ ಈ ಗ್ರಂಥವನ್ನು ಶಾಸ್ತ್ರಿಗಳು ತುಂಬಾ ಅಚ್ಚುಕಟ್ಟಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. ಪ್ರಸ್ತಾವನೆಯಲ್ಲಿ ಕವಿ ಕಾವ್ಯವಿಚಾರಗಳನ್ನು ಹೇಳುವರಲ್ಲದೆ ಕಠಿಣ ಶಬ್ದಗಳಿಗೆ ಸರಳಾರ್ಥವನ್ನು ಕೊಟ್ಟಿರುತ್ತಾರೆ.

ಶಿವಮೂರ್ತಿಶಾಸ್ತ್ರಿಗಳು ರಚಿಸಿದ ವೀರಶೈವ ಧರ್ಮ ಮತ್ತು ಸಂಸ್ಕೃತಿ ಎಂಬ ಗ್ರಂಥಕ್ಕೆ ಡಾ. ಡಿ.ಎಲ್. ನರಸಿಂಹಾಚಾರ್ಯರು ಪ್ರಸ್ತಾವನೆ ಬರೆದಿದ್ದಾರೆ. ಘನವಿದ್ವಾಂಸರಾದ ಡಿ.ಎಲ್.ಎನ್. ಸತ್ವವಿಲ್ಲದ ಕೃತಿಗೆ ಪ್ರಸ್ತಾವನೆ ಬರೆಯುವ ಜಾಯಮಾನದವರಲ್ಲ. ಶಿವಮೂರ್ತಿಶಾಸ್ತ್ರಿಗಳ ವಿದ್ವತ್ತನ್ನು ಮುಕ್ತ ಮನಸ್ಸಿನಿಂದ ಶ್ಲಾಘಿಸಿದ್ದಾರೆ. ಈ ಪ್ರಶಂಸಾ ಲೇಖನ ಶಾಸ್ತ್ರಿಗಳು ಪಡೆದ ಅನೇಕ ಬಿರುದುಗಳಿಗಿಂತ ಹೆಚ್ಚಿನದೆಂದು ನನ್ನ ಭಾವನೆ. ಶಾಸ್ತ್ರಿಗಳ ಸಂಶೋಧನಾ ಬರಹಗಳನ್ನು ಮುಕ್ತ ಮನಸ್ಸಿನಿಂದ ಸಮ್ಮತಿಸಿದ್ದಾರೆ. ಶಾಸ್ತ್ರಿಗಳ ಸಮಗ್ರ ಸಾಹಿತ್ಯವನ್ನು ಸಮೀಕ್ಷಿಸಿರುವಂತೆ ಇರುವ ಈ ಲೇಖನ ಈ ಸಂದರ್ಭದಲ್ಲಿ ಉದಾಹರಿಸಬಹುದಾದ ಪ್ರಮಾಣಭರಿತ ದಾಖಲೆಯಾಗುತ್ತದೆ.

**(ಪ್ರೊ.ಡಿ.ಎಲ್.ಎನ್. ಅವರ ಪ್ರಸ್ತಾವನೆ)**:- ವೀರಶೈವ ಧರ್ಮ ಮತ್ತು ಸಂಸ್ಕೃತಿ ಎಂಬ ಗ್ರಂಥವನ್ನು ಬರೆದಿರುವ ಆಸ್ಥಾನ ವಿದ್ವಾನ್, ಪಂಡಿತರತ್ನ, ಪದ್ಮಶ್ರೀ ಬಿರುದಾಂಕಿತ ಬಿ. ಶಿವಮೂರ್ತಿಶಾಸ್ತ್ರಿಗಳು ಕನ್ನಡನಾಡಿನ ವಿಖ್ಯಾತ ಪುರುಷರಲ್ಲಿ ಒಬ್ಬರಾಗಿದ್ದಾರೆ. ಕಳೆದ ನಾಲ್ಕು ದಶಕಗಳಿಂದ ನನಗೆ ಅವರ ಪರಿಚಯದ ಲಾಭವುಂಟಾಗಿದೆ. ಅವರ ಹೆಸರನ್ನು ಅವರ ಕಾರ್ಯದ ಮಹತ್ವವನ್ನು ಅರಿಯದವರು ಕರ್ನಾಟಕದಲ್ಲಿ ಬಹುಶಃ ಯಾರೂ ಇರಲಾರರು. ಸಾಧಾರಣ ಶಾಲಾಮಾಸ್ತರಾಗಿ ತಮ್ಮ ಜೀವನವನ್ನು ಆರಂಭಿಸಿದ ಅವರು ಉಪನ್ಯಾಸ ಮತ್ತು ಕೀರ್ತನೆಗಳನ್ನು ನಡೆಸುತ್ತ, ಕೀರ್ತನಕೇಸರಿ, ಕೀರ್ತನಾಚಾರ್ಯ, ಕರ್ನಾಟಕ ವಿಭೂಷಣ ಎಂಬ ಪ್ರಶಸ್ತಿಗಳನ್ನು ಗುರುಪೀಠಗಳಿಂದ ಗಳಿಸಿದರು. ನಾನು ಚಿಕ್ಕವನಾಗಿದ್ದಾಗ ಅವರು ನಡೆಸಿಸಕೊಟ್ಟ ಒಂದೆರಡು ಕೀರ್ತನೆಗಳನ್ನು ತುಮಕೂರಿನಲ್ಲಿ ಕೇಳಿದ್ದೇನೆ, ಅವರಿಗೆ ಸಂಗೀತದ ಪರಿಚಯ ಅಷ್ಟಾಗಿ ಇಲ್ಲದಿದ್ದರೂ, ಹೆಂಗಸರು, ಮಕ್ಕಳು, ದೊಡ್ಡವರು ಮುಂತಾದವರು ನೆರೆದಿರುವ ದೊಡ್ಡ ದೊಡ್ಡ ಸಭೆಗಳಲ್ಲಿ ಕಥೆ ಆರಂಭವಾಗುವುದೇ ತಡ, ಕೂಡಲೇ ಜನರನ್ನು ಆಕರ್ಷಿಸಿ ಏಕಾಗ್ರತೆಯಿಂದ ಅವರು ಕೇಳುವಂತೆ ಮಾಡುವ ಶಕ್ತಿ ಅವರಲ್ಲಿ ಮಿಗಿಲಾಗಿತ್ತು. ಸಹಸ್ರಾರು ಜನ ನೆರೆದಿರುವ ಮಹಾಸಭೆಗಳನ್ನು ಅವರು ತಮ್ಮ ವಾಗ್ಮಿಯತೆಯಿಂದ ವಶಪಡಿಸಿಕೊಂಡು ತಮ್ಮ ಇಚ್ಛೆಯಂತೆ ಅವುಗಳನ್ನು ಆಡಿಸುತ್ತಾರೆ. ಕುಣಿಸುತ್ತಾರೆ. ತಣಿಸುತ್ತಾರೆ. ಅವರಲ್ಲಿರುವ ರಸ-ಹಾಸ್ಯ-ದೃಷ್ಟಿ ಅಪಾರವಾದ ಲೋಕಾನುಭವ, ಕಥೆಗಳನ್ನು ಸ್ವಾರಸ್ಯವಾಗಿ ನಿರೂಪಿಸುವ ಜಾಣ್ಮೆ, ರಸಭಾವ ತನ್ಮಯತೆ, ಇವೆಲ್ಲ ಅವರ ಕೀರ್ತನಕಾರ ವ್ಯಕ್ತಿತ್ವದ ವಿಶಿಷ್ಟ ಲಕ್ಷಣಗಳಾಗಿದ್ದವು. ಹೀಗೆ ಕೀರ್ತನೆಗಳನ್ನು ಮಾಡುತ್ತಾ ಅವರು ಕನ್ನಡ

ನಾಡಿನಲ್ಲೆಲ್ಲಾ ಸಂಚಾರ ಮಾಡಿ ಜನಜಾಗೃತಿಯನ್ನುಂಟು ಮಾಡಿದ್ದಾರೆ. ಕನ್ನಡ ನಾಡಿನಲ್ಲಿ ಸಮಗ್ರ ಪರ್ಯಟನವನ್ನು ಇವರಂತೆ ಮಾಡಿರುವ ವ್ಯಕ್ತಿಗಳು ಹಲವರಿಲ್ಲವೆಂದು ಹೇಳಬಹುದು. ಸ್ವಪ್ರಯತ್ನದಿಂದ ದೀರ್ಘಕಾಲದ ಸ್ವಸಾಧನೆಯಿಂದ ಕರ್ನಾಟಕ ಭಾಷಾರತ್ನಂ ಕೈ.ಪಿ.ಆರ್. ಕರಿಬಸವಶಾಸ್ತ್ರಿಗಳ ಅನುಗ್ರಹದಿಂದ ಇವರು ತಮ್ಮ ಆತ್ಮ ತೇಜಸ್ಸನ್ನು ಬೆಳೆಸಿಕೊಂಡಿದ್ದಾರೆ. ಕನ್ನಡನಾಡಿನ ಸಂಚಾರದಲ್ಲಿ ನಾಡಿನ ಏಕೀಕರಣಕ್ಕೆ, ಇತಿಹಾಸ ಸಂಶೋಧನೆಗೆ ಇವರು ಮಿಗಿಲಾದ ಸೇವೆಯನ್ನು ಸಲ್ಲಿಸಿದ್ದಾರೆ. ಮಾನ್ಯಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ಮೈಸೂರು ಸರ್ಕಾರದಿಂದ 'ಪಂಡಿತರತ್ನಂ' ಬಿರುದನ್ನು ಭಾರತ ಸರ್ಕಾರದವರಿಂದ “ಪದ್ಮಶ್ರೀ' ಬಿರುದನ್ನು ಹಲವು ಗುರುಪೀಠ ಮತ್ತು ವಿದ್ವತ್ಸಭೆಗಳಿಂದ ಕೆಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ನಾಡಿನ ಜನಗಳಿಂದ 'ದೇವಗಂಗೆ', ಎಂಬ ಪ್ರಶಸ್ತಿ ಗ್ರಂಥವನ್ನು ಒಪ್ಪಿಸಿಕೊಂಡಿದ್ದಾರೆ. ಇವರ ಹಿರಿಮೆಗೆ ಇದೂ ನಿದರ್ಶನವಾಗಿದೆ. ಕೀರ್ತನ ಕಾರ್ಯದಲ್ಲಿ ಇವರು ಸಿದ್ಧಿಯನ್ನು ಪಡೆಯುತ್ತಿರುವಾಗಲೇ ಆಸಕಿಯುಕ್ತ ವ್ಯಾಸಂಗದಿಂದ ಹೆಚ್ಚು ಪಾಂಡಿತ್ಯವನ್ನು ಸಂಪಾದಿಸಿಕೊಂಡರು, ಪ್ರೌಢಶಾಲೆಗಾಗಲಿ, ಕಾಲೇಜಿಗಾಗಲೀ ಇವರು ಹೋಗಲಿಲ್ಲ, ತಮಗೆ ಪರಿಚಯವಿರೊ ಪಂಡಿತರ ನೆರವಿನಿಂದ ಇವರು ಕನ್ನಡ ಸಾಹಿತ್ಯದ ಉದ್ಗ್ರಂಥಗಳ ಅಭ್ಯಾಸವನ್ನು ಮಾಡಿದರು. ಸಂಸ್ಕೃತ ಭಾಷಾಸಾಹಿತ್ಯದಲ್ಲಿಯೂ ಇವರಿಗೆ ವಿಸ್ತಾರವಾದ ಅರಿವುಂಟು. ಇವರು ಮಾಡಿರುವ ಭಾಷಣಗಳು, ಬರೆದಿರುವ ಲೇಖನಗಳು ಪೀಠಿಕೆ ಶಬ್ದ ಕೋಶಾಧಿಗಳೊಡನೆ ಸಂಪಾದಿಸಿರುವ ಪ್ರಾಚೀನ ಕಾವ್ಯಗಳು, ಸಮಷ್ಟಿ, ದೃಷ್ಟಿಯಿಂದ ರಚಿಸಿರುವ ಗ್ರಂಥಗಳು ಇವರ ವಿದ್ವತ್ತಿಗೆ ಪ್ರತೀಕಗಳಾಗಿವೆ. ಅವರ ಲೇಖನಿಯಿಂದ ಇದುವರೆಗೆ ಸುಮಾರು ಮೂವತ್ತು ಗ್ರಂಥಗಳು ಪ್ರಕಾಶಿತವಾಗಿವೆ. ರಾಘವಾಂಕನ ವೀರೇಶಚರಿತೆ, ನಿಜಗುಣರ ಪುರಾತನ ತ್ರಿವಿದಿ, ಕೊಂಡಗುಳಿ ಕೇಶೀರಾಜನ ಷಡಕ್ಷರ ಕಂದ, ಪಾಲ್ಕುರಿಕೆ ಸೋಮನಾಥನ ಗಣಸಹಸ್ರ ಹಾಗೂ ಬಸವೋದಾಹರಣಂ, ಚಂದ್ರಶೇಖರನ ಪಂಪಾಸ್ಥಾನವರ್ಣನಂ, ಶತಕಸಾಹಿತ್ಯ, ಶಿವಶರಣರ ತ್ರಿಪದಿಗಳು, ಘನ ಲಿಂಗಿದೇವರ ವಚನಗಳು ಇತ್ಯಾದಿಗಳನ್ನು ಇಲ್ಲಿ ಹೆಸರಿಸಬಹುದು. ಇದು ಸಾಮಾನ್ಯವಾದ ಸಿದ್ಧಿಯಲ್ಲವೆಂದು ಹೇಳಬಹುದು. ಮೈಸೂರು ಸರ್ಕಾರದ ಪ್ರಕಟಣೆಗಳಾದ ಜೈಮಿನಿಭಾರತ, ಕನಕದಾಸರ ಕೀರ್ತನೆಗಳು, ಹರಿಭಕ್ತಿಸಾರ, ಮೊದಲಾದ ಗ್ರಂಥಗಳನ್ನು, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕರ್ನಾಟಕ ಕವಿ ಚರಿತ್ರೆ (ಭಾಗ 1) ಸೋಮೇಶ್ವರ ಶತಕ (ದ್ವಿತೀಯಮುದ್ರಣ) ಹಾಗೂ ಗಮಕ ಕಾವ್ಯಮಂಜರಿ ಮೊದಲಾದವುಗಳನ್ನು ಸಂಪಾದಿಸಿ ಪ್ರಕಟಿಸಲು ನೆರವಾಗಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಹಾಕವಿ ಕ್ಷಡಕ್ಷರದೇವ ಎಂಬ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಮೈಸೂರು, ಬೆಂಗಳೂರು ವಿಶ್ವವಿದ್ಯಾಲಯಗಳಿಗೂ ಗ್ರಂಥಗಳನ್ನು ಬರೆದುಕೊಟ್ಟಿದ್ದಾರೆ. ಕುಂದದ ಆಸಕ್ತಿ ನಿರಂತರವಾದ ಸಾಧನೆ, ಜ್ಞಾನತೃಷೆ ಇವುಗಳ ಫಲ ಅವರ ವಿದ್ವತ್ತು ಮತ್ತು ಅವರ ಗ್ರಂಥಗಳು. ಅವರಿಗೆ ಇಂಗ್ಲೀಷ್ ಭಾಷಾ ಸಾಹಿತ್ಯದ ಪರಿಚಯವು ಚೆನ್ನಾಗಿಇದ್ದಿದ್ದರೆ ಅವರ ವ್ಯಕ್ತಿತ್ವವು ಇನ್ನೂ ಜ್ವಲಂತವಾಗುತ್ತಿತ್ತು. ಅವರು ಭರತಖಂಡದ ರಾಷ್ಟ್ರೀಯ ನಾಯಕರಲ್ಲಿ ಒಬ್ಬರೆಂದು ಪರಿಗಣಿತರಾಗುತ್ತಿದ್ದರು ಎಂದು ನನ್ನ ನಂಬಿಕೆ. ಪತ್ರಿಕೋದ್ಯಮದಲ್ಲೂ ಶ್ರೀಮಾನ್ ಶಾಸ್ತ್ರಿಗಳವರ ಸಾಧನೆ ಸಿದ್ಧಿಗಳು ಆಶ್ಚರ್ಯಕರವಾಗಿವೆ. ಸ್ವತಂತ್ರ ಕರ್ನಾಟಕ (ಸಾಪ್ತಾಹಿಕ) ಶರಣ ಸಾಹಿತ್ಯ (ಮಾಸಿಕ) ಎಂಬೆರಡು ಪತ್ರಿಕೆಗಳ ಸಂಪಾದಕರಾಗಿ ಅವರು ಅವುಗಳನ್ನು ಹಲವು

ದಶಕಗಳು ನಡೆಸಿಕೊಂಡು ಬಂದರು. ಈಗ ಅವರ ವಾರಪತ್ರಿಕೆ ನಿಂತಿದೆ. 22 ವರ್ಷಗಳಿಂದ ಮಾಸಿಕ ಪತ್ರಿಕೆ ನಡೆಯುತ್ತಿದೆ. ಈ ಮೂಲಕವಾಗಿಯೂ ಅವರ ಸಾಹಿತ್ಯ ಸೇವೆ ನಾಡಿಗೆ ಸಲ್ಲುತ್ತಿದೆ. ಇವುಗಳಿಂದ ಜನಸಾಮಾನ್ಯರಲ್ಲಿ ತಿಳುವಳಿಕೆಯು ಹಬ್ಬುತ್ತಿದೆ. ಸ್ವಂತವಾದ ಮುದ್ರಣಾಲಯವನ್ನು ಬೆಂಗಳೂರಿನಲ್ಲಿ ಇವರು ಸ್ಥಾಪಿಸಿಕೊಂಡಿದ್ದಾರೆ. ಸಾಧಾರಣ ಶಾಲಾ ಉಪಾಧ್ಯಾಯರಾಗಿದ್ದ ಇವರಿಗೆ ಇಷ್ಟು ಉಪಪತ್ತಿ ಶಿವಕೃಪೆಯಿಂದ ಲಭ್ಯವಾಗಿರಬೇಕು. ಚಾಟಿಯಿಲ್ಲದೆ ಬುಗುರಿ ಆಡಿಸುವ ಚಾಕಚಕ್ಯತೆ ಅವರಿಗೆ ಸಹಜವಾದುದೆಂಬಂತೆ ತೋರುತ್ತದೆ. ಸ್ಥಿರಸಂಕಲ್ಪಯುತನಾದ ಒಬ್ಬ ಮನುಷ್ಯನು ನಿರಂತರ ಉದ್ಯೋಗ ಶೀಲತೆಯಿಂದಲೂ, ಪ್ರಯತ್ನದಿಂದಲೂ, ಆತ್ಮೋದ್ಧಾರವನ್ನು ಮಾಡಿಕೊಂಡು ಜನತೆಯ ಉದ್ಧಾರವನ್ನು ಹೇಗೆ ಮಾಡಲು ಸಾಧ್ಯವೆಂಬುದಕ್ಕೆ ಶ್ರೀಮಾನ್ ಶಾಸ್ತ್ರಿಗಳವರ ಜೀವನ ಒಂದು ನಿಚ್ಚಳವಾದ ನಿದರ್ಶನವಾಗಿದೆ. ಎಲ್ಲಕ್ಕೂ ಹೆಚ್ಚಾಗಿ ಇವರು ಸುಮಾರು ನಲವತ್ತು ವರ್ಷಕಾಲ ಕಷ್ಟಪಟ್ಟು ಸಂಗ್ರಹಿಸಿದ ಸುಮಾರು 300-400 ತಾಳೆಯೋಲೆ ಗ್ರಂಥಗಳು, ಸಂಸ್ಕೃತಗ್ರಂಥಗಳು, ತಾಮ್ರಶಾಸನಗಳು ಮೊದಲಾದುವನ್ನು ಮೈಸೂರು, ಬೆಂಗಳೂರು, ಕರ್ನಾಟಕ ವಿಶ್ವವಿದ್ಯಾಲಯಗಳಿಗೆ ನಿಷ್ಕಾಮ ಬುದ್ಧಿಯಿಂದ ಅರ್ಪಿಸಿದ್ದಾರೆ. ಇದು ಇವರ ತ್ಯಾಗ ಗುಣಕ್ಕೆ ಸುಸ್ಪಷ್ಟ ನಿದರ್ಶನವಾಗಿದೆ.

ಶ್ರೀಮಾನ್ ಶಾಸ್ತ್ರಿಗಳವರ ಕನ್ನಡ ಗದ್ಯ ಶೈಲಿ ನಿರರ್ಗಳತೆಯಿಂದ ವಿಶಿಷ್ಟವಾಗಿರುವಂತೆಯೇ ಅವರ ಪದ್ಯ ಶೈಲಿಯೂ ಕೂಡ ಹೃದ್ಯವಾಗಿದೆ. ಕನ್ನಡ ಹಳೆಯ ಛಂದಸ್ಸುಗಳಲ್ಲಿಯೂ, ಹೊಸ ಛಂದೋ ರೂಪಗಳಲ್ಲಿಯೂ ಕವಿತೆಗಳನ್ನು ಬರೆವ ಅವರ ಕೌಶಲ್ಯ ಹಿರಿದಾಗಿದೆ. "ಶೂಲಪಾಣಿ" ಎಂಬ ಕಾವ್ಯನಾಮದಿಂದ "ಶರಣಸಾಹಿತ್ಯದಲ್ಲಿ ಪ್ರಕಟವಾಗಿರುವ ಅವರ ಕವಿತೆಗಳು ಈ ಮಾತಿಗೆ ಉದಾಹರಣೆಗಳಾಗಿವೆ. "ದುಂಬಿನಾದ" ಎಂಬ ಅವರ ಇನ್ನೊಂದು ಕವಿತಾ ಸಂಕಲನ ತನ್ನ ಸರಳ ಶೈಲಿಯಿಂದ ರಮಣೀಯವಾಗಿದೆಯಲ್ಲದೆ ಅವರ ಪತಿಭೆಯು ಬಹುಮುಖವಾಗಿರುವುದನ್ನು ಪ್ರತಿಬಿಂಬಿಸುತ್ತಿದೆ. ಪೊಟ್ಟಲಗೆರೆಶಾಸನ, ಬೀಳಗಿಯಶಾಸನಗಳು, ಶಿವಗಂಗೆಯ ಶಾಸನಗಳು, ಮಾದೇಶ್ವರಬೆಟ್ಟದ ಹೈದರಾಲಿಯ ಶಾಸನ ಮೊದಲಾದವುಗಳನ್ನು ಕಂಡುಹಿಡಿದು ಪ್ರಕಟಿಸಿದ್ದಾರೆ. ಹರಿಹರ ರಾಘವಾಂಕರು, ನಿಜಗುಣ, ಸರ್ವಜ್ಞ ಷಡಕ್ಷರ, ಲಕ್ಷ್ಮೀಶರನ್ನು ಕುರಿತು ಸಂಶೋಧನಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಒಟ್ಟಿನಲ್ಲಿ ಶ್ರೀ ಶಾಸ್ತ್ರಿಗಳವರು ಸಹೃದಯರು, ವಿದ್ವಾಂಸರು, ವಿದ್ವತ್ ಪ್ರೇಮಿಗಳು, ತಮ್ಮ ಲೇಖನೆಗಳಿಂದ, ಉಪನ್ಯಾಸಗಳಿಂದ ಲೋಕಶಿಕ್ಷಕರು, ಸನ್ಮಾನ್ಯರು, ಅವರು ನಿಗರ್ವಿಗಳು, ಕನ್ನಡ ನಾಡೇ ಹೆಮ್ಮೆ ಪಡುವಂಥವರು. ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷದದ್ಧ್ಯಕ್ಷರಾಗಿ 100 ತಿಂಗಳು ಕಾಲ ಮಿಗಿಲಾದ ಸೇವೆಸಲ್ಲಿಸಿದ್ದಾರೆ. ಕನ್ನಡ ವಿಶ್ವಕೋಶ, ಕನ್ನಡ ನಿಘಂಟು ಸಮಿತಿ, ಸಂಗೀತ, ಸಾಹಿತ್ಯ ಅಕಾಡೆಮಿಗಳು, ಆಕಾಶವಾಣಿ ಸಲಹಾ ಸಮಿತಿ, ಬಸವಸಮಿತಿ, ಭಾರತೀಯ ವಿದ್ಯಾಭವನ ಮೊದಲಾದ ಹಿರಿಯ ಸಮಿತಿಗಳಲ್ಲಿದ್ದು ಗಣನೀಯವಾದ ಸೇವೆ ಸಲ್ಲಿಸಿದರು.

ಶ್ರೀಮನ್ ಶಾಸ್ತ್ರಿಗಳವರ ಗ್ರಂಥಗಳನ್ನು ಬಹುವಾಗಿ ಕನ್ನಡಿಗರು ಓದಿರುವರೆಂಬುದರಲ್ಲಿ ಸಂದೇಹಪಡಬೇಕಾಗಿಲ್ಲ. ಏಕೆಂದರೆ ಅವುಗಳಲ್ಲಿ ಕೆಲವು ಮತ್ತೆ ಮತ್ತೆ ಮುದ್ರಣವಾಗಿವೆ. ಅವರ ವೀರಶೈವ ಸಾಹಿತ್ಯ

ಮತ್ತು ಇತಿಹಾಸ (ಮೂರುಭಾಗಗಳು) ಜನಪ್ರಿಯವಾಗಿರುವ ಗ್ರಂಥಗಳು, ವೀರಶೈವ ಮಹಾಪುರುಷರು ಮತ್ತೊಂದು ಪ್ರಮುಖಗ್ರಂಥ, ಇದರಲ್ಲಿ ವೀರಶೈವ ಕವಿಗಳು ವಿದ್ವಾಂಸರು, ಶ್ರೀಮಂತರು, ದಾನಿಗಳು, ವರ್ತಕರು, ಸಮಾಜಸೇವಕರು, ಮಠಾಧಿಪತಿಗಳು, ಅಧಿಕಾರಿಗಳು ಇವರೇ ಮುಂತಾದ ಮಹನೀಯರ ಭಾವಪೂರ್ಣವಾದ, ಪರಿಚಯಾತ್ಮಕವಾದ ಲೇಖನಗಳಿವೆ. ಇವರಲ್ಲಿ ಕೆಲವರು ಇಂದಿನ ತರುಣರಿಗೆ ಆದರ್ಶಪ್ರಾಯರಾಗಿದ್ದಾರೆ. ಇಲ್ಲಿ ಈ ಶತಮಾನದ ಆರಂಭದ ವರ್ಷಗಳಲ್ಲಿ ಮದ್ರಾಸಿನ ಜಿ.ಎಂ. ನಟೇಶನ್ ಮತ್ತು ಕಂಪನಿಯವರು ಅಚ್ಚು ಹಾಕಿಸುತ್ತಿದ್ದ ಭಾರತೀಯ ಮಹಾ ಪುರುಷರು ರಾಜಕಾರಣಿಗಳು, ವಿಜ್ಞಾನಿಗಳು ಮುಂತಾದವರ ಪರಿಚಯದ ಕಿರುಹೊತ್ತಿಗೆಗಳ ನೆನಪುಂಟಾಗುತ್ತದೆ. ಈ ಗ್ರಂಥವನ್ನು ನೋಡಿದಾಗ ಅವು ಇಂಗ್ಲೀಷ್ ಭಾಷೆಯಲ್ಲಿವೆ. ಇವು ತಿಳಿಯಾದ ಕನ್ನಡ ನುಡಿಗಳಲ್ಲಿವೆ. ಎರಡಕ್ಕೂ ಇಷ್ಟೇ ವ್ಯತ್ಯಾಸ. ಈ ಗ್ರಂಥದಿಂದ ಕನ್ನಡ ನಾಡಿನ ಬಾಲೆ-ಬಾಲಕರ ಮೇಲೆ ಒಳ್ಳೆಯ ಪ್ರಭಾವವುಂಟಾಗುತ್ತದೆ. ಕರ್ನಾಟಕ ಸಂದರ್ಶನ, ಬಿದನೂರು ಶಿವಪ್ಪನಾಯಕ ಎಂಬ ಗ್ರಂಥಗಳು ಅವಲೋಕನ ಯೋಗ್ಯವಾಗಿವೆ; ಹಾಗೂ ಸಂಶೋಧನಾತ್ಮಕವಾದ ವಿಚಾರಗಳಿಂದ ಕೂಡಿವೆ. ಕನ್ನಡದಲ್ಲಿರುವ ವೀರಶೈವ ಸಾಹಿತ್ಯವನ್ನು ಶ್ರೀಮಾನ್ ಶಾಸ್ತ್ರಿಗಳವರು ಐತಿಹಾಸಿಕ ದೃಷ್ಟಿಯಿಂದಲೂ, ವಿಮರ್ಶಾತ್ಮಕ ದೃಷ್ಟಿಯಿಂದಲೂ ಅಭ್ಯಾಸ ಮಾಡಿದ್ದಾರೆ. ಹಲವು ಹೊಸ ವಿಷಯಗಳನ್ನು ಹೊರಗೆಡವಿದ್ದಾರೆ. ತಮ್ಮ ನಿರೂಪಣೆಯ ಪರಿಪೂರ್ಣತೆಯ ದೃಷ್ಟಿಯಿಂದ ಅವರು, ಸಂಸ್ಕೃತ, ತೆಲುಗು, ತಮಿಳು ಭಾಷೆಗಳಲ್ಲಿರುವ ವೀರಶೈವ ಸಾಹಿತ್ಯದ ಗ್ರಂಥಗಳನ್ನು ವ್ಯಾಸಂಗಮಾಡಿ ಅವುಗಳಿಂದ ನೆರವನ್ನು ಪಡೆದಿದ್ದಾರೆ. ವೀರಶೈವ ಸಾಹಿತ್ಯವನ್ನು ಕುರಿತಾದ ಅವರ ಜ್ಞಾನವು, ಯಾವ ಉತ್ಕೃಷ್ಟ ಕನ್ನಡ ಸಾಹಿತ್ಯ ಪರೀಕ್ಷೆಯಲ್ಲಿ ತೇರ್ಗಡೆಯಾದ ಸ್ನಾತಕೋತ್ತರ ವಿದ್ಯಾರ್ಥಿಯ ಜ್ಞಾನಕ್ಕಿಂತ ಎಷ್ಟೋ ಅತಿಶಯವಾಗಿದೆ. ಸ್ವಂತಶ್ರಮದಿಂದ ಇಷ್ಟನ್ನೆಲ್ಲಾ ಅವರು ಹೇಗೆ ಕಲಿತರೆಂದು ಅಚ್ಚರಿಪಡಬೇಕಾಗಿದೆ.

ಈಗ ಪ್ರಕಟವಾಗಿರುವ ಈ ಗ್ರಂಥಗಳಲ್ಲಿ ಒಟ್ಟು 20 ಲೇಖನಗಳಿವೆ. ಅವುಗಳಲ್ಲಿ ಹತ್ತು; ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಷಡಕ್ಷರ ಕವಿ, ನಿಜಗುಣಶಿವಯೋಗಿ, ಸರ್ಪಭೂಷಣ, ಗುಬ್ಬಿಮಲ್ಲಣಾರ್ಯ, ತೋಂಟದ ಸಿದ್ಧಲಿಂಗಯತಿ, ಪಾಲ್ಕುರಿಕೆ ಸೋಮನಾಥ ಈ ಕವಿಗಳ ಜೀವನದಲ್ಲಿ ನಡೆದಿರಬಹುದಾದ ಕೆಲವು ಘಟನೆಗಳನ್ನು ಕುರಿತಿವೆ. ಮಹಾಕವಿ ಹರಿಹರನನ್ನು ಆಂಧ್ರಪ್ರದೇಶದ ಗಣಿಕೆಯೊಬ್ಬಳು ಮೋಹಿಸಿ ಹಂಪೆಗೆ ಬಂದು ಆತನ ದರ್ಶನ ಮಾಡಿದ ಕೂಡಲೇ ತನ್ನ ಚಿತ್ತ ವಿಕಾರವನ್ನು ಕಳೆದುಕೊಂಡು ಭಕ್ತಳಾಗಿ ಶಿವಧರ್ಮವನ್ನು ಪಡೆದಳೆಂಬ ಕಥೆ ಸ್ವಾರಸ್ಯವಾಗಿದೆ. ಇಂಥದೇ ಆದ ಒಂದು ಕಥೆ ಪದ್ಮರಾಜ ಪುರಾಣದಲ್ಲಿ ದೊರೆಯುತ್ತದೆ. ಅದು ಕೆರೆಯ ಪದ್ಮರಸನು ತಟಾಕ ನಿರ್ಮಾಣವನ್ನು ಮಾಡಿದ ಪವಾಡದ ಕಥೆಯು, ಆತನನ್ನು ಕುರಿತಾದ ಗ್ರಂಥದಲ್ಲಿ ನಿರೂಪಿತವಾಗಿದೆ. ಇದು ಹೇಗೆ ನಡೆದಿರಬಹುದೆಂಬುದನ್ನು ಭಾವದ ಬಲದಿಂದ ಮನಗಂಡು ಲೇಖಕರು ಇಲ್ಲಿ ಸರಸವಾಗಿ ಹೇಳಿದ್ದಾರೆ. ಷಡಕ್ಷರನು ತನ್ನ ರಾಜಶೇಖರ ವಿಳಾಸವನ್ನು ರಚಿಸುವುದಕ್ಕೆ ಕಾರಣ ಕೆಲವು ದಂತಕಥೆಗಳೆಂದು ಹೇಳಿದೆ. ಶೃಂಗಾರ ಕಾವ್ಯವಾದ ಲೀಲಾವತಿ ಗ್ರಂಥಕ್ಕೆ ಆಗುತ್ತಿದ ಮೆರವಣಿಗೆಯನ್ನು ತಡೆದು ನೇಮಿಚಂದ್ರನನ್ನು ಮೀರಿಸಿದಂತೆ, ಲಕ್ಷ್ಮೀಶ, ರುದ್ರಭಟ್ಟ, ಷಡಕ್ಷರ, ಈ ಮೂವರಿಗೆ ಸಂಬಂಧಿಸಿದ ಇನ್ನೊಂದು ಕಥೆಯನ್ನು ಅವರು ಹೇಳಬಹುದಾಗಿತ್ತು. "ಗುಬ್ಬಿ" ಎಂಬ ಹೆಸರು ಆ ಊರಿಗೆ ಬಂದ ಕಾರಣವನ್ನು ತಿಳಿಸಿದ ಕಥೆ ಆಕರ್ಷಕವಾಗಿದೆ. ಈ ಕವಿಗಳನ್ನು ಅವಲಂಬಿಸಿ ರಚಿತವಾಗಿರುವ ಅಥವಾ ಮರಳಿ ಹೇಳಿರುವ ಈ ಕಥೆಗಳು ಬರೆ

ಕಥೆಗಳಾಗಿಯೇ ಉಳಿದುಕೊಳ್ಳದೇ ಈ ಕವಿಗಳ ಪರಿಚಯವನ್ನು ಸಾಮಾನ್ಯರಿಗೂ ಮಾಡಿ ಕೊಡುವ ಬರಹಗಳಾಗಿವೆ. ಸಾಹಿತ್ಯ ಚರಿತ್ರೆಯ ಪ್ರಧಾನಾಂಶಗಳನ್ನು ಅವರಿಗೆ ತಿಳಿಸಿಕೊಡುತ್ತವೆ. ಈ ದೃಷ್ಟಿಯಿಂದ ಈ ಕಥೆಗಳು ಬೋಧಪ್ರದವಾಗಿವೆ.

ಇನ್ನುಳಿದ ಹತ್ತು ಲೇಖನಗಳು ವೀರಶೈವ ಧರ್ಮಕ್ಕೂ ಸಂಸ್ಕೃತಿಗೂ ಸೇರಿದುದಾಗಿವೆ. "ವೀರಶೈವಧರ್ಮ" ಎಂಬ ಲೇಖನವು ಆ ಧರ್ಮದ ಸ್ವರೂಪವನ್ನು ಸಾಮಾನ್ಯರಿಗೂ ತಿಳಿಯುವಂತೆ ಪ್ರತಿಪಾದನೆ ಮಾಡುತ್ತದೆ. ಜಗತ್ತಿನಲ್ಲಿರುವ ಇತರ ಧರ್ಮಗಳಸಾರವು ಒಂದಲ್ಲ ಒಂದು ತೆರನಾಗಿ ವೀರಶೈವದಲ್ಲಿ ಇದೆ ಎಂಬ ಅವರ ಪ್ರತಿಪಾದನೆ ಅಭಿಮಾನಯುಕ್ತವಾಗಿದೆ. ಈಗಾಗಲೇ ಈ ಲೇಖನವು ತೆಲುಗು ಭಾಷೆಯಲ್ಲಿಯೂ ಅನುವಾದವಾಗಿರುವುದು ಗಮನಾರ್ಹವಾಗಿದೆ. ಶ್ರೀಶೈಲಕ್ಷೇತ್ರವನ್ನು ಕುರಿತು ಹೇಳುತ್ತಾ ಅದು ಹೇಗೆ. ಅಲ್ಲಮಪ್ರಭು, ಮಹದೇವಿಯಕ್ಕ, ಮುಂತಾದ ಭಕ್ತರ ಮುಕ್ತಕ್ಷೇತ್ರವಾಯಿತೆಂಬುದನ್ನು "ಶ್ರೀ ಶೈಲವೂ ವೀರಶೈವವೂ" ಎಂಬ ಲೇಖನ ವರ್ಣಿಸುತ್ತದೆ. 'ಇಷ್ಟ ಲಿಂಗದ ಮಹತ್ವ' ಎಂಬ ಲೇಖನವೂ ಲೇಖಕರ ಧರ್ಮಾನುರಾಗವನ್ನು ಪ್ರದರ್ಶಿಸುವುದಾಗಿದೆ. ಅಲ್ಲದೆ ಅವರಿಗೆ ವೀರಶೈವ ಸಿದ್ಧಾಂತದಲ್ಲಿರುವ ಪಾಂಡಿತ್ಯಕ್ಕೆ ನಿದರ್ಶನವಾಗಿದೆ. "ಶಿವಶರಣರ ಕ್ಷೇತ್ರಗಳು" ಎಂಬ ಲೇಖನ ಅವರ ದೇಶಸಂಚಾರದ ಫಲವಾಗಿದೆ. ತಾವು ಕಣ್ಣಾರೆ ಕಂಡ ಆ ಕ್ಷೇತ್ರಗಳ ಶಿಲ್ಪಕಲೆಯನ್ನೂ ಕಿವಿಯಾರೆ ಕೇಳಿದ ಕ್ಷೇತ್ರದ ಕಥಾನಕಗಳನ್ನು ಅದು ಗರ್ಭೀಕರಿಸಿಕೊಂಡಿದೆ. ಅದು ಓದುಗರಲಿ ಕುತೂಹಲವನ್ನು ಉಂಟುಮಾಡುವುದಾಗಿದೆ. ಗ್ರಂಥದ ಅಂತ್ಯದಲ್ಲಿ ಕಾಣುವ ಶಬ್ದಕೋಶವು ಮುಖ್ಯವಾಗಿ "ಶಿವಾನುಭವ ಶಬ್ದ ಕೋಶವಾಗಿದೆ. ವೀರಶೈವದ ಪರಿಭಾಷೆಯನ್ನು ತಿಳಿಯಲು ಈ ಕೋಶ ನೆರವಾಗುತ್ತದೆ ಒಟ್ಟಿನಲ್ಲಿ ಈ ಗ್ರಂಥವು ಶ್ರೀ. ಬಿ. ಶಿವಮೂರ್ತಿಶಾಸ್ತ್ರಿಗಳು ಕನ್ನಡಕ್ಕೆ ನೀಡಿರುವ ಒಂದು ಬೆಲೆಯುಳ್ಳ ಕೊಡುಗೆಯಾಗಿದೆ. ಇದನ್ನು ಓದಲು ಆರಂಭಿಸಿದರೆ ಪೂರ್ತಿ ಮುಗಿಸುವವರೆಗೂ ಪುಸ್ತಕವನ್ನು ಕೆಳಗಿರಿಸಲು ಮನಸ್ಸು ಬರುವುದಿಲ್ಲ. ಶಾಸ್ತ್ರಿಗಳ ಖ್ಯಾತಿ ಈ ಗ್ರಂಥ ರಚನೆಯಿಂದ ಇನ್ನಷ್ಟು ಹೆಚ್ಚಳಗೊಂಡಿದೆ. ಕನ್ನಡಿಗರೆಲ್ಲರೂ ಈ ಗ್ರಂಥವನ್ನು ಅತಿಶಯವಾದ ಆದರದಿಂದ ಸ್ವಾಗತಿಸುವರೆಂದು ನಂಬಿದ್ದೇನೆ. ಇವರು ನಲವತ್ತು ವರ್ಷಗಳ ಪರಿಶ್ರಮದಿಂದ ರಚಿಸಿರುವ "ವೀರಶೈವ ವಿಭೂತಿಗಳು" ಎಂಬ ಗ್ರಂಥವು ಬೇಗನೆ ಬೆಳಕಿಗೆ ಬರಲೆಂದು ಆಶಿಸುತ್ತೇವೆ. ಇವರು ಪ್ರಕಟಣೆಗಾಗಿ ಸಿದ್ಧಪಡಿಸಿಕೊಂಡಿರುವ ಸಾಧ್ವಿ, ಸದಾಶಿವರಾಯನ ಪಂಚಶತ ನೀತಿಗಳು, ತೋಟದ ರಾಯಾನ ಸಾಂಗತ್ಯ, ಅಭಿನವ ಕಾಳಿದಾಸ; ಮಹಾಕವಿ ಲಕ್ಷ್ಮೀಶ, ಮಹಾತ್ಮ ಕನಕದಾಸ, ನಿಜಗುಣಶಿವಯೋಗಿ, ಕನ್ನಡ ಸಾಹಿತ್ಯ ಸಂದರ್ಶನ, ಕೆಳದಿಯರಾಣಿ, ನಾಟಕ ಮೊದಲಾದ ಗ್ರಂಥಗಳೂ ಬೇಗನೆ ಬೆಳಕಿಗೆ ಬರುವಂತೆ ಭಗವಂತನು ಇವರನ್ನು ಅನುಗ್ರಹಿಸಲಿ, ಕನ್ನಡನಾಡು ನುಡಿ ಸಾಹಿತ್ಯಗಳಿಗೆ ತಮಗೇ ವಿಶಿಷ್ಟವಾಗಿರುವ ರೀತಿಯಲ್ಲಿ ಸೇವೆಸಲ್ಲಿಸುತ್ತಿರುವ ಶಾಸ್ತ್ರಿಗಳಿಗೆ ನನ್ನ ಗೌರವಪೂರಕವಾದ ಅಭಿನಂದನೆಗಳನ್ನು ಸಮರ್ಪಿಸುತ್ತೇನೆ."

**ಡಿ. ಎಲ್. ನರಸಿಂಹಾಚಾರ್**

ಮೈಸೂರು ೯,

ದಿನಾಂಕ 21-9-1970

ಸರಸ್ವತಿಪುರಂ.

ಈ ಲೇಖನ ಶಾಸ್ತ್ರಿಗಳ ಪ್ರಾಮಾಣಿಕ ಬರವಣಿಗೆಗೆ, ಅನ್ವಯಿಕ ಸಾಹಿತ್ಯ ವಿಮರ್ಶೆಯಂತಿದೆ. ಎಲ್ಲ ವಿದ್ವಾಂಸರಿಗೂ ಅಥವಾ ಸಂಶೋಧಕರಿಗೂ ಇಂತಹ ಬರಹ ಮನ್ನಣೆ ದೊರಕಲಾರದು. ಡಾ. ಡಿ.ಎಲ್.ಎನ್. ಅವರನ್ನು ಸಮಕಾಲೀನ ವಿದ್ವಾಂಸರಲ್ಲಿ ನಡೆದಾಡುವ ವಿಶ್ವಕೋಶವೆಂದೇ ಬಣ್ಣಿಸುತ್ತಿದ್ದರು. ಮೆಚ್ಚಲೇಬೇಕಾದ ಪ್ರತಿಭೆಯನ್ನು ಮೆಚ್ಚಲು ಡಿ.ಎಲ್.ಎನ್. ಅವರಿಗಿದ್ದಂತೆ ನಿಷ್ಕಲ್ಮಶ ಹೃದಯವಂತಿಕೆಯಿರಬೇಕು. ಒಂದು ಗ್ರಂಥಕ್ಕೆ ಪ್ರಸ್ತಾವನೆ ಹೇಗೆ ಬರೆಯಬೇಕೆಂದು ತಿಳಿಯ ಬಯಸುವವರಿಗೆ ಇದೊಂದು ಮಾದರಿಯಾಗಿದೆ. ಶಾಸ್ತ್ರಿಗಳು ಡಿ.ಎಲ್.ಎನ್. ಅವರಿಗೆ ಪೂರ್ವಾಗ್ರಹವಿಲ್ಲದ ಒಂದು ಸಣ್ಣ ಉಪಕಾರವನ್ನು ಮಾಡಿದ್ದರು. ಅವರದನ್ನು ತಮ್ಮ ಜೀವನ ಸ್ಮೃತಿಗಳು ಗ್ರಂಥದ ಪುಟ 19ರಲ್ಲಿ ಸಂಕ್ಷಿಪ್ತವಾಗಿ ಹೇಳಿಕೊಂಡಿದ್ದಾರೆ. ಡಿ.ಎಲ್.ಎನ್. ಪಡೆದುದಕ್ಕಿಂತಲೂ ಸಾಸಿರ್ಮಡಿ ಹೆಚ್ಚಾಗಿ ಕೃತಜ್ಞತಾ ಭಾವದಿಂದ ಶಾಸ್ತ್ರಿಗಳ ಗ್ರಂಥಕ್ಕೆ ಪ್ರಸ್ತಾವನೆ ಬರೆದರೆಂದು ಕಾಣುತ್ತದೆ. ಜೊತೆಗೆ ಶಾಸ್ತ್ರಿಗಳ ವಿದ್ವತ್ತೂ ಕೂಡ ಡಿ.ಎಲ್.ಎನ್.ರವರಂಥ ಮೇಧಾವಿಗಳ ಗಮನವನ್ನು ತೀವ್ರವಾಗಿ ಸೆಳೆದಿತ್ತು.

"ದಿ. ಡಾ. ಡಿ. ಎಲ್. ನರಸಿಂಹಾಚಾರ್ಯರು ಕನ್ನಡ ಪ್ರೊಫೆಸರ್ ಆಗುವ ಸಂದರ್ಭದಲ್ಲಿ ಕೂಡ ಇಂತಹ ಪ್ರಸಂಗವೇ ಕಾದಿತ್ತು. ಆಗ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಲ್ಲಿ ಕೆಲವರು ಕೆ.ಎಸ್. ಧರಣೇಂದ್ರಯ್ಯನವರ ಹೆಸರನ್ನು ಮುಂದು ಮಾಡಿದರು. ಆಗ ನಾನು ವಿದ್ಯಾಮಂತ್ರಿಗಳಾಗಿದ್ದ ಶ್ರೀ. ಡಿ. ಎಚ್. ಚಂದ್ರಶೇಖರಯ್ಯನವರಲ್ಲಿ ಹೋಗಿ ಇಬ್ಬರು ಉಮೇದುವಾರರಲ್ಲಿ ಪ್ರೊ.ನರಸಿಂಹಾಚಾರ್ಯರು ಮಹಾವಿದ್ವಾಂಸರು ಕಾಲೇಜಿನಲ್ಲಿ ಪಾಠಹೇಳುವವರು. ಕನ್ನಡಸಾಹಿತ್ಯದ ಬಗ್ಗೆ ಕೂಲಂಕುಶವಾದ ಜ್ಞಾನವುಳ್ಳವರಾಗಬೇಕು. ಕಾಲೇಜಿನಲ್ಲಿ ಪಾಠ ಹೇಳುವವರು ಬ್ರಾಹ್ಮಣ ಬ್ರಾಹ್ಮಣೇತರ ಎಂಬ ರಾಜಕೀಯವನ್ನು ಕುರಿತು ಪಾಠ ಹೇಳುವುದಿಲ್ಲ. ಆದುದರಿಂದ ಈ ಸಂದರ್ಭದಲ್ಲಿ ಶ್ರೀ. ಕೆ.ಎಸ್. ಧರಣೇಂದ್ರಯ್ಯನವರು ಒಳ್ಳೆಯ ವಾಗ್ಮಿಗಳು ನನಗೆ ತುಂಬಾ ಸ್ನೇಹಿತರು, ಎಂಬ ಪರಿಜ್ಞಾನವಿಟ್ಟುಕೊಂಡೇ ನಾನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಡಿ.ಎಲ್.ನರಸಿಂಹಾಚಾರ್ಯರಿಗೆ ಈಸ್ಥಾನ ಕೊಡಬೇಕೆಂದು ವಿದ್ಯಾಮಂತ್ರಿಗಳಾದ ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ ಎಂದು ಅರಿಕೆ ಮಾಡಿದ್ದರ ಮೇರೆಗೆ, ನ್ಯಾಯ ನಿಷ್ಠೆಯುಳ್ಳವರಾದ ಶ್ರೀ. ಡಿ.ಎಚ್. ಚಂದ್ರಶೇಖರಯ್ಯನವರು ಸೆನೆಟ್ ಸಿಂಡಿಕೇಟ್ ಸದಸ್ಯರಿಗೆ ಮಣಿಯದೆ ಡಿ.ಎಲ್. ನರಸಿಂಹಾಚಾರ್ಯರನ್ನು ಪ್ರೊಫೆಸರನ್ನಾಗಿ ಮಾಡಿದರು" (ಜೀವನ ಸ್ಮೃತಿಗಳು ಪುಟ 19-20).

ಮೈಸೂರು ದೇಶ ನಂತರ ಕರ್ನಾಟಕದಲ್ಲಿ ಆಡಳಿತ ಸೇವೆ ನಡೆಸಿದ ಬಹುತೇಕ ಎಲ್ಲ ಮುಖ್ಯಮಂತ್ರಿಗಳೂ ಸಚಿವರೂ ಶಾಸ್ತ್ರಿಗಳಿಗೆ ಹಿತಭಾರಿಯಾಗಿದ್ದರು. ಆದರೆ ಎಸ್. ನಿಜಲಿಂಗಪ್ಪನವರ ಬಗ್ಗೆ ಶಾಸ್ತ್ರಿಗಳಿಗೆ ಅಸಮಾಧಾನವಿತ್ತು. ಈ ಲೇಖಕನ ಮುಂದೆ ಹಲವಾರು ಸಲ ತಮ್ಮ ಅಸಮಾಧಾನವನ್ನು ಹೇಳಿದ್ದೂ ಉಂಟು. ಅವರೇ ಹೇಳಿದ ಒಂದು ಸಂಗತಿಯನ್ನು ಇಲ್ಲಿ ಹೇಳಬಯಸುತ್ತೇನೆ. ತುಮಕೂರಿನ ಅಭಿವೃದ್ಧಿಗಾಗಿ ಧರ್ಮಪ್ರಕಾಶ ಎನ್. ರುದ್ರಯ್ಯನವರು ತುಂಬಾ ಶ್ರಮಿಸುತ್ತಿದ್ದರಂತೆ. ಮಾನ್ಯ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿ ಅಧಿಕಾರಕ್ಕೆ ಬಂದ ನಂತರ ತುಮಕೂರಿನ ಗಣ್ಯ ವರ್ತಕರು ಸಂಘಟಿತರಾಗಿ ಮಾನ್ಯ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರನ್ನು ತುಮಕೂರಿಗೆ ಬರಮಾಡಿಕೊಂಡು ಅವರಿಗೆ ತುಲಾಭಾರ ಮಾಡಿಸಿ ಹೇರಳ ಹಣವನ್ನು

ಮುಖ್ಯಮಂತ್ರಿಗಳ ನಿಧಿಗೆ ಸಮರ್ಪಸಿದ್ದರಂತೆ ತುಲಾಭಾರ ತೂಗಿಸಿ ಕೊಂಡ ಮುಖ್ಯಮಂತ್ರಿಗಳು ತುಮಕೂರಿಗೆ ಏನೊಂದೂ ಅಭಿವೃದ್ಧಿ ಯೋಜನೆಗಳನ್ನು ಮಾಡಲಿಲ್ಲವೆಂಬ ಅಸಮಾಧಾನ ಶಾಸ್ತ್ರಿಗಳಲ್ಲಿತ್ತು. ಶಾಸ್ತ್ರಿಗಳೂ ತುಮಕೂರಿನವರೇ ಆದ್ದರಿಂದ, ಧರ್ಮಪ್ರಕಾಶ ಎನ್.ರುದ್ರಯ್ಯನವರ ವಿಶ್ವಾಸ ಬಂಧುತ್ವವಿದ್ದದ್ದರಿಂದ ತುಮಕೂರಿನ ವರ್ತಕರ ಪರ ನಿಂತು ಶಾಸ್ತ್ರಿಗಳು ನಿಜಲಿಂಗಪ್ಪನವರನ್ನು ಟೀಕಿಸುತ್ತಿದ್ದರು. ಶಾಸ್ತ್ರಿಗಳು ಕೆಂಗಲ್ ಹನುಮಂತಯ್ಯನವರಿಗೆ ತೀರಾ ಆಪ್ತರಾದ್ದರಿಂದ ನಿಜಲಿಂಗಪ್ಪನವರು ಶಾಸ್ತ್ರಿಗಳ ಬಗ್ಗೆ ಅನಾದರಣೆ ತೋರಿಸಿರಲೂಬಹುದು. ಮೀನಿನ ಹೆಜ್ಜೆಯನ್ನು, ಬಿಳಿ ಕಾಗೆಯನ್ನು, ಅತ್ತಿಯ ಹೂವನ್ನು ಬೇಕಾದರೆ ನೋಡಬಹುದು. ರಾಜಕಾರಣಿಗಳ ಮನಸ್ಸನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ಹೊಸ ನಾಣ್ಣುಡಿಯನ್ನು ಇಲ್ಲಿ ಕಟ್ಟಿ ಹೇಳಬಹುದೇನೋ... ಶಾಸ್ತ್ರಿಗಳು ಮಂತ್ರಿ ಮಹೋದಯರ ಬಳಿ ಸಲಗಾನೆ ನುಗ್ಗಿದಂತೆ ಹೋಗಿಬರುತ್ತಿದ್ದರು ಅವರನ್ನು ತಡೆಯುವ ಬಾಗಿಲ ಹ್ಯಾಂಡ್ ಪೋಸ್ಟ್‌ಗಳಿಗೆ ಶಾಸ್ತ್ರಿಗಳಾರೆಂದು ತಿಳಿದಿತ್ತು. ಅವರು ಹತ್ತಿರ ಬಂದ ಕೂಡಲೇ ತಲೆಬಾಗಿ ವಂದಿಸಿ ಬಾಗಿಲು ತೆರೆಯುತ್ತಿದ್ದರು. ಮಂತ್ರಿ ಮಹೋದಯರೂ ಕೂಡ ಶಾಸ್ತ್ರಿಗಳ ಅಸ್ಖಲಿತ ರುದ್ರವಾಣಿಯನ್ನು ಕೇಳಲು ಶ್ರದ್ಧೆ ತೋರುತ್ತಿದ್ದರು. ಮಂತ್ರಿ ಮಹೋದಯರ ಕರ್ಣಗಳಿಗೆ ಕರ್ನಾಟಕದ ಹಿರಿಮೆಯನ್ನು ಹೇಳಿದ ನಂತರವೇ ಶಾಸ್ತ್ರಿಗಳು ಮುಖ್ಯ ವಿಚಾರಕ್ಕೆ ಬರುತ್ತಿದ್ದರು. ದಯಾಮಯನಾದ ಭಗವಂತನ ಕೃಪೆಯಿಂದ ರಾಜಾಧಿಕಾರ ಪ್ರಾಪ್ತವಾಗಿದೆ. ಭಗವಂತ ಪ್ರಜೆಗಳ ರೂಪದಲ್ಲಿದ್ದಾನೆ ಪ್ರಜಾಸೇವೆಯೇ ಭಗವಂತನ ಸೇವೆಯೆಂದು ತಿಳಿಯೋಣವಾಗಬೇಕೆಂದು ಮಂತ್ರಿಮಹೋದಯರನ್ನು ಮುಕ್ತ ಮನಸ್ಸಿನಿಂದ ಪ್ರಶಂಸೆ ಮಾಡತೊಡಗುತ್ತಿದ್ದರು ನೀಲಾಂಜನಕ್ಕೆ ಸಮೀಪವಾದ ಬೆಣ್ಣೆ: ಕರಗುವಂತೆ ಮಂತ್ರಿ ಮಹೋದಯರ ಮನಸ್ಸು ಕರಗಿ ಹೋಗುತ್ತಿತ್ತು. ಒಳ್ಳೆಯ ಮಾತನ್ನಾಡಿ ಉಳ್ಳವರನ್ನು, ಅಧಿಕಾರಾರೂಢರನ್ನು ಗೆಲ್ಲುವ ಶಕ್ತಿ ಶಾಸ್ತ್ರಿಗಳಿಗಿತ್ತು. ನೂರು ತಿಂಗಳು ಸಾಹಿತ್ಯ ಪರಿಷತ್ತನ್ನು ಅನಿರ್ಬಾದಿತವಾಗಿ ನಡೆಸಲು; ಈ ಒಳ್ಳೆಯ ಮಾತುಗಳೇ ಬಂಡವಾಳವಾಗಿದ್ದವು. ಸಾಹಿತ್ಯವೆಂದರೇನೆಂದು ತಿಳಿಯದ ವರ್ತಕ ಸಮುದಾಯವನ್ನು ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರನ್ನಾಗಿ ಮಾಡಿಸಿದ ದಾಖಲೆ ಈಗಲೂ ಶಾಸ್ತ್ರಿಗಳ ಹೆಸರಿನಲ್ಲೇ ಇದೆ.

## ಸಂಶೋಧನೆಯ ಹಾದಿಯಲ್ಲಿ

1960 ರಲ್ಲಿ 'ಬಿದನೂರಪ್ರಭು' ಶಿವಪ್ಪನಾಯಕ ಮತ್ತು ಮಲೆನಾಡಿನ ಮೂರು ರಾಜ್ಯಗಳು ಗ್ರಂಥ ರಚಿಸಿದರು. ಅದು ನಂತರದ ವರ್ಷಗಳಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವೂ ಆಯಿತು. (1963) ಕೃತಿ ರಚನೆಗೆ ಅವರು ಬಳಸಿಕೊಂಡ ಆಧಾರ ಗ್ರಂಥಗಳು ನಡೆಸಿದ ಕ್ಷೇತ್ರಕಾರ್ಯ ಇತಿಹಾಸ ಶೋಧಕರಿಗೆ ಮಾರ್ಗದರ್ಶಿಯಂತಿದ್ದವು. ಕ್ರಿ.ಶ. 1646 ರಲ್ಲಿ ಬಿದನೂರಲ್ಲಿ ಪಟ್ಟಾಧಿಕಾರ ಹೊಂದಿದ ಶಿವಪ್ಪನಾಯಕನ ವರ್ಣಚಿತ್ರವನ್ನು ಯಾವ ಮೂಲದಿಂದಲೋ ಸಂಪಾದಿಸಿ ತಮ್ಮ ಪುಸ್ತಕದಲ್ಲಿ ಅಚ್ಚು ಹಾಕಿಸಿದ್ದರು. ಬಿದನೂರು, ಕೆಳದಿ ಕವಲೇದುರ್ಗ, ಇಕ್ಕೇರಿ, ಕೊಲ್ಲೂರು ಇಲ್ಲೆಲ್ಲಾ ಕ್ಷೇತ್ರಕಾರ್ಯ ನಡೆಸಿ ಅಮೂಲ್ಯ ಛಾಯಾಚಿತ್ರಗಳನ್ನು ತೆಗೆಸಿ

ತಂದು ತಾವು ರಚಿಸಿದ ಹೊತ್ತಗೆಯಲ್ಲಿ ಸೇರಿಸಿ ಕೃತಿಯ ಮೌಲ್ಯವನ್ನು ಹೆಚ್ಚಿಸಿದ್ದರು. ಅವರ ಸಂಶೋಧನೆಗಳು ಆ ಕಾಲಕ್ಕೆ ವೈಜ್ಞಾನಿಕವಾಗಿರುತ್ತಿದ್ದವು.

ಹೈದರ್‌ನಾಮೆಯಲ್ಲಿ ಕೆಳದಿ ರಾಜ್ಯದ ರಾಣಿ ವೀರಮ್ಮಾಜಿಯ ಬಗ್ಗೆ ಅವಹೇಳನಕಾರಿ ಸಂಗತಿಗಳಿದ್ದವು. ಹೈದರಾಲಿ ಬಿದನೂರ ಮೇಲೆ ದಾಳಿಮಾಡಿ, ಕೋಟೆ ಹಾಳು ಮಾಡುವ ಮುನ್ನ ಬಿದನೂರ ರಾಣಿಯ ತೇಜೋವಧೆ ಮಾಡುವಂತಹ ಸುದ್ದಿಗಳನ್ನು ದೇಶದೆಲ್ಲೆಡೆ ಹರಡಿಸಿದ್ದನು. ರಾಣಿ ವೀರಮ್ಮಾಜಿ ತನ್ನ ದಳಪತಿ ನಿಂಬಯ್ಯನೊಡನೆ ಅನೈತಿಕ ಸಂಬಂಧ ಹೊಂದಿದ್ದಳು ಎಂಬುದು ಹೈದರ್‌ನಾಮೆಯ ತಿರುಳಾಗಿತ್ತು. ಶತ್ರುವೊಬ್ಬನ ಅಭಿಪ್ರಾಯವನ್ನು ಇತಿಹಾಸಕಾರರು ಪರಿಗಣಿಸಬಾರದೆಂಬ ಸಲಹೆಯನ್ನು ಶಾಸ್ತ್ರಿಗಳು ತಮ್ಮ ಪುಸ್ತಕದಲ್ಲಿ ಪ್ರಸ್ತಾಪ ಮಾಡಿದ್ದಾರೆ. “ರಾಣಿ ವೀರಮ್ಮಾಜಿ -(ಚನ್ನಮ್ಮಾಜಿಯ ಸೊಸೆ) ನಿಂಬಯ್ಯನ ಸಂಬಂಧದ ಕಥೆಗಳು ನಾಡಿನಲ್ಲಿ ನಾನಾ ರೂಪದಲ್ಲಿ ಹುಟ್ಟಿವೆ. ಕತೆಗಳಾಗಿ, ಕಾದಂಬರಿಗಳಾಗಿ, ನಾಟಕಗಳಾಗಿ ಹಲವರು ಬರೆದಿದ್ದಾರೆ. ಆದರೆ ಕೆಳದಿ ನೃಪವಿಜಯದ ಆಧಾರದಿಂದ ವೀರಮ್ಮಾಜಿಯ ಮೇಲಣ ದೋಷಾರೋಪಣೆ ನಿರಾಧಾರವೆಂದೂ ಕಟ್ಟು ಕಥೆಯೆಂದು ತೋರುತ್ತದೆ”

ರಾಣಿ ವೀರಮ್ಮಾಜಿಯನ್ನು ಕುರಿತು ಅಪಪ್ರಚಾರ ಮಾಡುವುದರಲ್ಲಿ ನವಾಬ ಹೈದರಾಲಿ ಬರೆಯಿಸಿದ ಹೈದರ್‌ನಾಮ ಅಗ್ರಗಣ್ಯವೆನಿಸಿದೆ; ಇದು ಕೆಳದಿಯ ರಾಜ್ಯವನ್ನು ಕಬಳಿಸಲು ಹೈದರ್ ಮಾಡಿದ ಹಂಚಿಕೆಯೆಂದು ಕೆಲವರು ತರ್ಕಿಸುತ್ತಾರೆ. (ಪುಟ 82)

ಇತಿಹಾಸ ಸಂಶೋಧನೆ ನಡೆಸುವವರು ಪಾಲಿಸಲೇಬೇಕಾದ ಆದರ್ಶಗಳನ್ನು ಶಾಸ್ತ್ರಿಗಳು ಇಲ್ಲಿ ಹೇಳುತ್ತಾರೆ. ಇತಿಹಾಸವನ್ನು ಒಂದೇ ಪಾರ್ಶ್ವದಿಂದ ಪುನರ್ರಚಿಸಬಾರದು. ಸಾಧ್ಯವಿರುವ ಇತರ ಮುಖಗಳ ಅವಲೋಕನದಿಂದಲೂ ಸತ್ಯವನ್ನು ಅರಸಬೇಕೆನ್ನುವುದೇ ಶಾಸ್ತ್ರಿಗಳ ಸಲಹೆಯಾಗಿದೆ. ಕುವೆಂಪುರವರ ರಕ್ತಾಕ್ಷಿ, ಮಾಸ್ತಿಯವರ ಚನ್ನಬಸವ ನಾಯಕ ಮುಂತಾದ ರಚನೆಗಳಲ್ಲಿ ಕನ್ನಡನಾಡಿನ ಇತಿಹಾಸವನ್ನು ಪರಿಷ್ಕರಿಸಬೇಕಾದ ಅಗತ್ಯವಿದೆ. ಕೆಳದಿ ನೃಪವಿಜಯವನ್ನು ರಚಿಸಿದ ಲಿಂಗಣ್ಣ ಕವಿಗೆ ಕಾಣಿಸದ ಹಾದರ, ದೂರದ ಹೈದರಾಲಿಗೆ ಕಾಣಿಸಿರುವುದರ ಹಿಂದೆ ಪಿತೂರಿಗಳಿಲ್ಲವೆಂದು ಹೇಳುವುದಾದರೂ ಹೇಗೆ? ಲಿಂಗಣ್ಣ ಕವಿಯನ್ನು ಇತಿಹಾಸಕಾರನೆಂದು ಪರಿಗಣಿಸಿದ ಮೇಲೆ ಆತ ನೀಡುವ ಮಾಹಿತಿಗಳನ್ನು ಇತಿಹಾಸದ ಘಟನೆಗಳೆಂದು ಸ್ವೀಕರಿಸಲೇಬೇಕು. ಆತ ಹೇಳದೇ ಇದ್ದ ವೀರಮ್ಮಾಜಿಯ ನಡತೆಯ ಬಗೆಗಿನ ಸಂಗತಿಗಳನ್ನು ಇತಿಹಾಸದ ಸತ್ಯವೆಂದು ಹೇಳುವುದಾದರೂ ಹೇಗೆ? ಹೈದರ್‌ನಾಮೆಯಲ್ಲಿ ಲಿಂಗಣ್ಣ ಕವಿಗೆ ಮೀರಿದ ಸತ್ಯವಿದೆಯೆಂದು ಹೇಳುವುದು ಸರಿ ಕಾಣುವುದಿಲ್ಲ. ಇವೇ ಸಂಗತಿಯನ್ನು ಕುರಿತ ಕೈಫಿಯತ್ತಿನ ಬರಹವನ್ನು ಇಲ್ಲಿ ಪ್ರಸ್ತಾಪಿಸಬಹುದು. ಕೈಫಿಯತ್ತಿಗೆ ಹೈದರ್‌ನಾಮೆಯೇ ಆಧಾರವಾಗಿರಲೂಬಹುದು. ಜನಜನಿತವಾದ ಕಥೆಗಳನ್ನು ಕೈಫಿಯತ್ತುಗಳಲ್ಲಿ ಬರೆದಿರಿಸಿದವರಿಗೆ ಇತಿಹಾಸದ ಪರಿಕಲ್ಪನೆಯಿರಲಿಲ್ಲವೆಂಬುದು ಬೇರೆ ಮಾತು.

“-ವೊಂದಾನೊಂದು ದಿವಸ, ಇವನ ತಾಯಿ, ಸದರಿ ಚನ್ನಮ್ಮಾಜಿ (>ವೀರಮ್ಮಾಜಿ) ಯೆಂಬುವಳು, ನಿಂಬಯ್ಯ ಎಂಬುವನನ್ನು ಕೂಡಿಕೊಂಡು ಮಲಗಿದಲ್ಲಿ ಅದನ್ನು ಯಿಕೆ ಮಗ, ಸದರಿ ಚನ್ನಬಸವ ನಾಯಕನು

ಕಂಡವನಾಗಿ, ತನ್ನ ಮೈಮೇಲೆಯಿದ್ದ ಕಂದಿನ ಶಲ್ಯವನ್ನು ಅವರ ಮೇಲೆ ಹಾಕಿದನು. ಅವರು ಎಚ್ಚರವಾಗಿ ನೋಡಿ, ಯಿತನು ತಿಳಿದನುಯಂತ ಇವರು ತಿಳಿದುಕೊಂಡು ತನ್ನ ಮಗನಿಗೆ ಈ ದಿವಸ ಎಣ್ಣೆ ಅಭ್ಯಂಜನ ಮಾಡಿಸಬೇಕಂತ ಬೇಲಿಗಳ ಕಯಿಎಣ್ಣೆ ಹಾಕಿದಲ್ಲಿ ಅವಂದಿರು ನರತಿಕ್ಕಿ ತಿರಿಗಿಸಿ ಕೈಕಾಲು ತಿರುವಿ ಗುಂಡಿ ತೆಗೆದು ಹೂಣಿ ಮಣ್ಣುಹಾಕಿ ಹೋದರು. ಈ ಚನ್ನಬಸಪ್ಪ ನಾಯಕನ ಸ್ನೇಹಿತರು ತಿಳಿದು ಆ ಮಣ್ಣು ತೆಗೆದು ಅವನ ಅಂತರಂಗದಲ್ಲಿ ಹೊತ್ತುಕೊಂಡು ಹೋಗಿ ಅಡವಿಯೊಳಗೆ ಇಟ್ಟುಕೊಂಡು ಬೀಸಿ ಆರೈಕೆ ಮಾಡಿದಲ್ಲಿ ಸ್ವಲ್ಪ ಉಸುರು ಇದ್ದ ಕಾರಣ ಮತ್ತೆ ಆರೈಕೆ ಮಾಡಿ ಬದುಕಿಸಿದರು, ಮತ್ತು ಶ್ರೀರಂಗಪಟ್ಟಣಕ್ಕೆ ತೆಗೆದುಕೊಂಡು ಹೋಗಿದ್ದರು. (ಪುಟ 303 ಕೈಫಿಯತ್ತುಗಳು) ಕೈಫಿಯತ್ತು ಬರೆದವನಿಗೆ ವೀರಮ್ಮನ ಹೆಸರು, ಚನ್ನಮ್ಮನ ಹೆಸರುಗಳ ವ್ಯತ್ಯಾಸವೇ ತಿಳಿದಿರಲಿಲ್ಲವೆಂದು ಕಾಣುತ್ತದೆ. ಜನಪದ ಕತೆಗಳಲ್ಲಿ ಕಂಡುಬರುವಂತಹ ಘಟನೆ ಇಲ್ಲಿ ಬಂದಿದೆ. ಇದರ ಸತ್ಯಾಸತ್ಯತೆಯನ್ನು ಸ್ಥಿರಗೊಳಿಸುವುದು ಕೊಂಚ ಕಠಿಣ ಶೋಧನೆಯೇ ಆಗುತ್ತದೆ. ಹಾದರವನ್ನು ಮಹಾಪಾಪವೆಂದು ಕಥೆ ಕಟ್ಟಿದ ಮನಸ್ಸುಗಳೇ ಈ ಸಂಗತಿಯನ್ನು ವೀರಮ್ಮಾಜಿಯ ಹೆಸರಿಗೆ ಸೇರಿಸಿರಲೂ ಬಹುದು. ವೀರಮ್ಮಾಜಿಯ ಕಳ್ಳ ಹಾದರವನ್ನು ಮಗ ಚನ್ನಬಸವನಾಯಕ ಕಂಡನೆಂದು ಆತನನ್ನು ಅಭ್ಯಂಜನ ನೆಪದಲ್ಲಿ ಕೊಲ್ಲಿಸಬೇಕೆಂದೂ ವೀರಮ್ಮಾಜಿ ತೀರ್ಮಾನ ಕೈಗೊಂಡಳೆಂದು ಹೇಳುವುದು ಹಲವು ಅನುಮಾನಗಳಿಗೆ ಆಸ್ಪದವಾಗಿದೆ.

ಇಂತಹ ವಿಚಾರಗಳ ಬಗ್ಗೆ ಬರೆಯುವಾಗ ಇತಿಹಾಸಕಾರನು ಅನುಸರಿಸಬೇಕಾದ ರೀತಿ-ನೀತಿಗಳು ಶಾಸ್ತ್ರಿಗಳು ಅನುಸರಿಸಿದಂತೆಯೇ ಇರಬೇಕಾದದು ಸೂಕ್ತ ಹಾದರದ ತೆವಲಿಗೆ ಅಡಚಣೆಯಾದನೆಂದು ಹೆತ್ತಮಗನನ್ನೇ ಮುಗಿಸಬೇಕೆಂಬಷ್ಟು ಕೆಟ್ಟ ಮನಸ್ಸು ವೀರಮ್ಮಾಜಿಗಿರಲು ಸಾಧ್ಯವಿಲ್ಲ. ತನ್ನ ಕೈ ಕೆಳಗಿನ ಸೇನಾಧಿಪತಿಯೊಡನೆ ಸಲಿಗೆಯಿಂದ ಇದ್ದುದೇ ಲೋಕದ ಕಣ್ಣಿಗೆ ಹಾದರದಂತೆ ತೋರ್ಪಟ್ಟಿದ್ದು ವೀರಮ್ಮಾಜಿಯ ದುರಂತ ಎನ್ನಬೇಕು. ಶಾಸ್ತ್ರಿಗಳು ಆಕೆಯನ್ನು ಅದೃಷ್ಟ ಹೀನಳೆಂದು ಕರೆದದ್ದು ಸರಿಯಾಗಿಯೇ ಇದೆ.

ಕನ್ನಡ ಸಂಸ್ಕೃತಿಯನ್ನು ಕರ್ನಾಟಕ ಇತಿಹಾಸದ ಓದಿನಲ್ಲಿ ಮತ್ತು ಕ್ಷೇತ್ರ ಕಾರ್ಯದಲ್ಲಿ, ಕಂಡು ಕೊಂಡ ಧೀಮಂತ ಸಂಶೋಧಕರಲ್ಲಿ ಶಿವಮೂರ್ತಿಶಾಸ್ತ್ರಿಗಳೂ ಒಬ್ಬರು. ನವೋಲ್ಲಾಸದ, ನವಪೀಳಿಗೆ, ನಾಡುನುಡಿಯ ಬಗ್ಗೆ ತಿಳಿದಿರಬೇಕೆಂಬ ಆಶಯದಿಂದ 'ಕೆಳದಿ ಶಿವಪ್ಪನಾಯಕ ಎಂಬ ಕೃತಿಯನ್ನು ರಚಿಸಿದರು. ಕ್ರಿ.ಶ.1960 ರಲ್ಲಿ ಅದು ಪ್ರಕಟವಾಯಿತು. ಆ ಕಾಲಕ್ಕೆ ಆರೂವರೆಸಾವಿರ ಪ್ರತಿಗಳು ಮುದ್ರಣಗೊಂಡು ಮಾರಾಟವಾಗಿದ್ದವು. 1963 ರಲ್ಲಿ ಹೈಸ್ಕೂಲು ವಿದ್ಯಾರ್ಥಿಳಿಗೆ ಪಠ್ಯಪುಸ್ತಕವೂ ಆಯಿತು. ಶಾಸ್ತ್ರಿಗಳ ಕನಸು ನನಸಾಯಿತು. 'ಬಿನ್ನಹ' ಎಂಬ ಶೀರ್ಷಿಕೆಯಡಿ ಅವರೇ ಹೇಳಿರುವ ಮಾತುಗಳು ಅವರ ಹಂಬಲದ ಕನಸಿಗೆ ಕನ್ನಡಿ ಹಿಡಿದಂತಿವೆ.

"ನಮ್ಮ ಕರ್ನಾಟಕಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಚರಿತ್ರೆಯಿದೆ. ಶಾತವಾಹನ, ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಯಾದವ, ಕಾಕತೀಯ, ವಿಜಯನಗರ, ಕೆಳದಿ ಮೈಸೂರು ಮೊದಲಾದ ರಾಜಮನೆತನಗಳ ಚರಿತ್ರೆಯು ಅನೇಕ ವಾಚನಾರ್ಹ ಸಂಗತಿಗಳಿಂದ ಕೂಡಿದೆ. ನಮ್ಮ ಕನ್ನಡ ಜನ ಅದರಲ್ಲೂ

ವಿದ್ಯಾರ್ಥಿ ವೃಂದವು ನಮ್ಮ ನಾಡಿನ ಉಜ್ವಲ ಇತಿಹಾಸವನ್ನು ತಿಳಿಯುವುದು ಅಗತ್ಯವಾಗಿದೆ. ಪ್ರಕೃತ ಗ್ರಂಥಗಳಲ್ಲಿ ಕರ್ನಾಟಕದ ಪಶ್ಚಿಮ ಪ್ರದೇಶವನ್ನು ಇನ್ನೂರು ಅರವತ್ತಮೂರು (263) ವರ್ಷಗಳ ಕಾಲ ವೈಭವದಿಂದ ಆಳಿಬಾಳಿದ ಕೆಳದಿಯ ರಾಜರ ಚರಿತ್ರೆಯನ್ನು ನಮ್ಮ ಜನ ಓದಲೆಂಬ ದೃಷ್ಟಿಯಿಂದ ಆ ರಾಜ್ಯದಲ್ಲಿ ವಿಖ್ಯಾತನಾದ ಬಿದನೂರು ಶಿವಪ್ಪನಾಯಕನ ಕಥೆಯನ್ನು ಇಲ್ಲಿ ವಿರಚಿಸಲಾಗಿದೆ"...

ಈ ಗ್ರಂಥ ರಚನೆಗೆ ಕೆಳದಿ ನೃಪವಿಜಯ, ಇಕ್ಕೇರಿ ಸಂಸ್ಥಾನದ ಚರಿತ್ರೆ ಶಿವತತ್ವರತ್ನಾಕರ, ಮೈಸೂರುಚರಿತ್ರೆ, ಮೈಸೂರು ಗೆಜಿಟಿಯರ್" ಬೀಳಗಿ ಅರಸರ ವಂಶಾವಳಿ, ಸ್ವಾದಿ ರಾಜರಚರಿತ್ರೆ, ಕೊಡಗಿನ ರಾಜೇಂದ್ರನಾಮ. ಕನ್ನಡ ನಾಡಿನ ಚರಿತ್ರೆ The Nayakao of ikkeri, ಸೇವಂತಿಕಾ ಪರಿಣಯ ನಾಟಕಮ್, ಕರ್ನಾಟಕ ಶಿವಗೀತೆ, ರಾಣಿವೀರಮ್ಮಾಜಿ ಇತ್ಯಾದಿ ಗ್ರಂಥಗಳು ನೆರವಾಗಿವೆ. ಇವುಗಳ ಜೊತೆ ಶಾಸ್ತ್ರಿಗಳು ಕ್ಷೇತ್ರ ಕಾರ್ಯ ನಡೆಸಿ ಛಾಯಾಚಿತ್ರಗಳನ್ನು ಗ್ರಂಥದಲ್ಲಿ ಸೇರಿಸಿದ್ದಾರೆ. ಆ ಕಾಲದಲ್ಲಿ ಶಾಸ್ತ್ರಿಗಳಂತಹ ಸ್ಥೂಲ ಕಾಯವುಳ್ಳವರು ಕವಲೇ ದುರ್ಗವನ್ನು ಏರುವುದಿರಲಿ, ನೆನೆಯಲೂ ಆಯಾಸಗೊಳ್ಳುತ್ತಿದ್ದರು. ಅಂಥದರಲ್ಲಿ ಶಿವಮೂರ್ತಿ ಶಾಸ್ತ್ರಿಗಳು ಕವಲೇ ದುರ್ಗದ ಹಲವಾರು ಛಾಯಾಚಿತ್ರಗಳನ್ನು ಗ್ರಂಥದಲ್ಲಿ ಅಳವಡಿಸಿಕೊಂಡದ್ದು ಅವರ ಶ್ರದ್ಧೆಗೆ ಉದಾಹರಣೆಯಾಗಿದೆ.

ಇತಿಹಾಸಕ್ಕೆ ಸೇರಿದ ಕವಿಗಳ ಕಾಲನಿರ್ಣಯ, ಹಾಗೂ ಸ್ಥಳ ನಿರ್ಣಯಗಳ ಬಗ್ಗೆ ಶಾಸ್ತ್ರಿಗಳು ತುಂಬಾ ಶ್ರದ್ಧೆಯಿಂದ ಸಂಶೋಧನೆಗಿಳಿಯುತ್ತಿದ್ದರು. ಅವರು ಕೊಡುತ್ತಿದ್ದ ಸಾಕ್ಷಾಧಾರಗಳು, ಅವರನ್ನು "ವಾದಭೂಷಣ ಎನ್ನಿಸುತ್ತಿದ್ದವು. ಶಾಸ್ತ್ರಿಗಳು ಎರಡು ನಾಟಕಗಳನ್ನು ರಚಿಸಿದ್ದರು. ಕರ್ನಾಟಕ ವಿಜಯ ಮತ್ತು ಕೆಳದಿಯ ರಾಣಿ ಚನ್ನಮ್ಮಾಜಿ" ಕನ್ನಡ ನಾಡಿನ ಬಗ್ಗೆ ಶಾಸ್ತ್ರಿಗಳಿಗೆ ತೀವ್ರತರವಾದ ಅಭಿಮಾನವಿತ್ತು. ತನ್ನ ಅಭಿಮಾನ ಸುಖವನ್ನು ಎಲ್ಲರ ಜೊತೆ ಹಂಚಿಕೊಳ್ಳುವ ಹಂಬಲವಿತ್ತು. ನಾಟಕ ಬರೆದಾಗ, ಕನ್ನಡ ರಂಗಭೂಮಿಯ ಸುವರ್ಣಯುಗವೇ ಪ್ರಾರಂಭವಾಗಿತ್ತು. ದೇಶದೆಲ್ಲೆಡೆ ವೃತ್ತಿ ನಾಟಕ ಕಂಪನಿಗಳು ಕಲಾ ರಸಿಕರ ಮನಸ್ಸುಗಳನ್ನು ರಸ ಪ್ರವಾಹದಲ್ಲಿ ತೇಲಾಡಿಸುತ್ತಿದ್ದವು. ಶಾಸ್ತ್ರಿಗಳ ರಂಗ ಕೃತಿಗಳನ್ನು ಪ್ರತಿಷ್ಠಿತ ನಾಟಕ ತಂಡಗಳು ಪ್ರಯೋಗ ನಡೆಸಿದ ದಾಖಲೆಗಳು ಲಭ್ಯವಿಲ್ಲ. ಶಿವಮೂರ್ತಿ ಶಾಸ್ತ್ರಿಗಳು, ವೀರಶೈವ ಸಾಹಿತ್ಯದೊಡನೆ ತಮ್ಮನ್ನು ಗುರುತಿಸಿಕೊಂಡದ್ದೇನೋ ನಿಜ, ಅವರ ಆ ಬಗೆಗಿನ ಭಕ್ತಿ ಇಕ್ಕುಳ ಕೈ ಮುಗಿಯುವಂತೆ ಯಾಂತ್ರೀಕೃತವೆನಿಸಲಿಲ್ಲ. ಏತತಲೆ ಬಾಗಿದಂತೆ ತೋರಿಕೆಯ ಭಕ್ತಿಯೂ ಆಗಿರಲಿಲ್ಲ. ಶರಣ ಸಾಹಿತ್ಯದ ಪ್ರಚಾರಕರಂತೆ, ಪರಿಚಾರಿಕೆಗೆ ನಿಲ್ಲದೆ ಆ ಸಾಹಿತ್ಯದಲ್ಲಿ ಪ್ರಭುತ್ವ ಸಾಧಿಸಿದರು. ಕೀರ್ತನ ಕೇಸರಿಯಷ್ಟೇ ಆಗಿನಿಲ್ಲದೆ ಲೇಖನ ಕೇಸರಿಯೂ ಆದರು, ಒಂದು ಅಂದಾಜಿನಂತೆ ಅವರ ಅಧ್ಯಯನದ ವ್ಯಾಪಿಗೆ ಅಳವಡದ ಶರಣ ಸಾಹಿತ್ಯ ಇನ್ನಾವುದಿದೆ ಎಂಬ ಸ್ಥಿತಿಗೇರಿ ಆ ಕಾಲಕ್ಕೆ ಸಂದ ಬಿರುದುಗಳನ್ನೆಲ್ಲಾ ಹಿಂದಿಕ್ಕಿ ಮುಂದೆ ಸಾಗಿದರು.

ಅವರು ಭಾಗವಹಿಸಿದ ಸಭೆಗಳಲ್ಲಿ ಸಭಾಭೂಷಣರೆನಿಸಿಕೊಳ್ಳದೆ ಇರುತ್ತಿರಲಿಲ್ಲ. ರಾಜಕಾರಣಿಗಳನ್ನು ಪಂಡಿತರನ್ನು ಸಿರಿವಂತದಾನಿಗಳನ್ನು ಕೊಂಚ ಹೆಚ್ಚಿನ ರೀತಿಯಲ್ಲಿಯೇ ಹೊಗಳಿ, ಅವರ ಮನಸ್ಸನ್ನು ಕನ್ನಡ ಕಟ್ಟುವ ಸೇವೆಯತ್ತ ಸೆಳೆದುಬಿಡುತ್ತಿದ್ದರು. ಶಾಸ್ತ್ರಿಗಳಷ್ಟು ಗ್ರಂಥ ದಾನಿಗಳನ್ನು ಸೃಷ್ಟಿಸಿದಷ್ಟು ಬೇರೊಬ್ಬರಿರಲಾರರು.

ಶಿವಮೂರ್ತಿಶಾಸ್ತ್ರಿಗಳು ಭಾರತ ಸ್ವಾತಂತ್ರದ ಪೂರ್ವೋತ್ತರಗಳೆರಡನ್ನು ಕಂಡವರು. ಹಾಗೆಯೇ ಮೈಸೂರು ಮತ್ತು ವಿಶಾಲ ಕರ್ನಾಟಕಗಳೆರಡನ್ನೂ ನೋಡಿದವರು. ಬದುಕಿನ ಮೊದಲಹಂತದಲ್ಲಿ ಕೀರ್ತನಾಚಾರ್ಯರಾಗಿದ್ದರು. ಎರಡನೇ ಮಜಲಿನಲ್ಲಿ ನಿಯತಕಾಲಿಕೆಯ ಸಂಪಾದಕರು ಪ್ರಕಟಕರೂ ಆದರು, ಎರಡೂ ಘಟ್ಟಗಳಲ್ಲಿ ಗ್ರಂಥರಚನೆ ನಡೆಸಿದರು. ಸಂಚಾರ ಸಂಪರ್ಕಗಳ ಸೌಕರ್ಯವಿರದಿದ್ದ ಆ ಕಾಲದಲ್ಲಿಯೇ ನಾಡಿನಾದ್ಯಂತ ಸಂಚಾರ ಮಾಡಿದರು. ಎಲ್ಲಿಯೂ ಹೋಗದೆ ಮನೆಯಲ್ಲಿಯೇ ಇದ್ದ ದಿನ ಸಹೃದಯರೊಡನೆ ಸಾಹಿತ್ಯ ಸಲ್ಲಾಪ ನಡೆಸುತ್ತಿದ್ದರು. ತಮ್ಮನ್ನು ಅರಸಿಬಂದ ಅಭಿಮಾನೀ, ಸಹೃದಯರನ್ನು ಶರಣಸಾಹಿತ್ಯಕ್ಕೆ ಚಂದಾದಾರರಾಗುವಂತೆ ಕೇಳುತ್ತಿದ್ದರು. ಶಾಸ್ತ್ರಿಗಳ ಜೀವನ ಶರಣಸಾಹಿತ್ಯವೇ ಮೊದಲಾದ ಸಾರಸ್ವತ ಕೃಷಿಯಿಂದಲೇ ನಡೆಯಬೇಕಾಗಿತ್ತು.

ಮಹಾಕವಿ ಷಡಕ್ಷರದೇವನ ಬಗ್ಗೆ ಕವಿ-ಕಾವ್ಯ ವಿಮರ್ಶೆಯಿಂದ ಮೊದಲುಗೊಂಡು ಹರಿಹರ ರಾಘವಾಂಕರ ತನಕ ಅನೇಕ ಕವಿಗಳ ಬಗ್ಗೆ ಸಂಶೋಧಿತ ಲೇಖನಗಳನ್ನು ಬರೆದರು. ಅವುಗಳಲ್ಲಿ ಹೆಸರಿಸಲೇಬೇಕಾದ ಗ್ರಂಥಗಳಿವು; ಸರ್ವಜ್ಞಮೂರ್ತಿ ಮಹಾತ್ಮ ಕನಕದಾಸ, ಮಹಾಕವಿ ಲಕ್ಷ್ಮೀಶ, ಇತ್ಯಾದಿ.

ಲಕ್ಷ್ಮೀಶನನ್ನು ಕುರಿತು ಶಾಸ್ತ್ರಿಗಳು ರಚಿಸಿದ ಗ್ರಂಥದಲ್ಲಿ ಕವಿಯ ಕಾಲ, ಸ್ಥಳ, ಬಿರುದಾವಳಿಗಳನ್ನು ಚರ್ಚಿಸಿ ನಿರ್ಣಾಯಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕರ್ನಾಟಕ ವಿಚೂತ ವನಚೈತ್ರ ಎಂಬುದನ್ನು ವಿಶ್ಲೇಷಿಸಿ, ಕವಿಚೂತವನಚೈತ್ರ ಸರಿಯೋ ಕವಿಚೈತ್ರವನಚೂತ ಸರಿಯೋ ಎಂಬುದನ್ನು ಸಮಾರ್ಥವಾಗಿ ನಿರ್ಣಯಿಸಿದ್ದಾರೆ. ಜೈಮಿನಿ ಭಾರತ ಪ್ರತಿಗೊಳ್ಳುವಾಗ ಆದ ಪಾಠಾಂತರಗಳ ಬಗ್ಗೆ ಕರಾರುವಾಕ್ಕಾಗಿ ನಿರ್ಣಯಿಸಿ ಕವಿಪಾಠವೇನಿರಬೇಕೆಂದು ನಿರ್ಧರಿಸಿದ್ದಾರೆ.

ಶಾಸ್ತ್ರಿಗಳು ಕನ್ನಡ ಸಾಹಿತ್ಯ ಇತಿಹಾಸದ ಅಂತರಾಳ ಹೊಕ್ಕಿದ್ದರು. ಆ ಕಾಲದಲ್ಲಿ ರಚಿತವಾದ ಸಾಹಿತ್ಯ ರಾಶಿಯನ್ನು ಜಾಲಾಡಿದರು. ಉದ್ಧಾರದ ಮಾತುಗಳನ್ನಾಡಿ ಸಂಶೋಧಕರ ಗಮನ ಸೆಳೆದರು. ಬಿದನೂರ ಶಿವಪ್ಪನಾಯಕ ಹೈಸ್ಕೂಲು ತರಗತಿಗಳಿಗೆ ಪಠ್ಯ ಪುಸ್ತಕವಾಯಿತು. ಸಾಂಪ್ರದಾಯಕ ಓದಿನಲ್ಲಿ ಪ್ರೌಢಶಾಲೆಯನ್ನೂ ಕಾಣದ ಶಿವಮೂರ್ತಿಶಾಸ್ತ್ರಿಗಳು ಪಠ್ಯ ಪುಸ್ತಕ ಬರೆದು ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಹೆಸರನ್ನು ಅಳಿಸಿ ಹೋಗದ ಶಾಯಿಯಲ್ಲಿ ಬರೆದು ಶಿಕ್ಷಣ ತಜ್ಞರು ಹುಬ್ಬೇರಿಸುವಂತೆ ಮಾಡಿದರು.

ವೀರಶೈವ ಸಾಹಿತ್ಯ ಮತ್ತು ಇತಿಹಾಸವನ್ನು ಕುರಿತಾದ ಶಾಸ್ತ್ರಿಗಳ ಅಧ್ಯಯನ ಅನ್ಯದಾಖಲೆಗಳನ್ನು ಹಿಂದಿಕ್ಕಿತ್ತು. ವರಕವಿ ದ.ರಾ.ಬೇಂದ್ರೆಯವರೊಡನೆ ಶಾಸ್ತ್ರಿಗಳು ಸ್ನೇಹದಿಂದಿದ್ದರು. ಒಮ್ಮೆ ಬೇಂದ್ರೆಯವರು

ನಿಜಗುಣ ಶಿವಯೋಗಿಗಳ "ವಿವೇಕ ಚಿಂತಾಮಣಿ' ಯ ಮರಾಠಿ ಭಾಷಾಂತರ ಕೃತಿಯನ್ನು ಬೆಟಗೇರಿ ಕೃಷ್ಣಶರ್ಮರ ಕಡೆಯಿಂದ ಶಾಸ್ತ್ರಿಗಳಿಗೆ ಕೊಡಿಸಿದ್ದರು. ಶಾಸ್ತ್ರಿಗಳು ಮರಾಠಿ ಪಂಡಿತರಿಂದ ಅದನ್ನು ಓದಿಸಿ ಅರ್ಥ ಹೇಳಿಸಿಕೊಂಡರು. ಈ ಮರಾಠಿ ಹಸ್ತ ಪ್ರತಿಯನ್ನು ಶಾಂತಲಿಂಗ ದೇಶಿಕನೆಂಬ ಶರಣ ಕವಿ ಕ್ರಿ.ಶ. 1527 ರಲ್ಲಿ ರಚಿಸಿದ್ದನೆಂಬ ಅಂಶವನ್ನು ಗ್ರಹಿಸಿದ ಮೇಲೆ ನಿಜಗುಣ ಶಿವಯೋಗಿಗಳ ಕಾಲ ಕ್ರಿ.ಶ. 1527 ಕ್ಕೂ ಹಿಂದೆ ಹೋಯಿತೆಂದು ಕಾಲವನ್ನು ಖಚಿತಗೊಳಿಸಿದರು. ನಿಜಗುಣರ ವಿವೇಕ ಚಿಂತಾಮಣಿಯನ್ನು ಶಿವಪ್ರಕಾಶಸ್ವಾಮಿಗಳು ತಮಿಳಿಗೆ ಹದಿನೇಳನೆಯ ಶತಮಾನದಲ್ಲಿ ಭಾಷಾಂತರಿಸಿರುವ ಸಂಗತಿಯನ್ನು ಶಾಸ್ತ್ರಿಗಳು ತಮ್ಮ ಲೇಖನದ ಮೂಲಕ ಪ್ರಕಟಪಡಿಸಿದರು.

ಶಾಸ್ತ್ರಿಗಳ ಸಂಶೋಧನೆ ಸತ್ಯಶೋಧನೆಯ ಆಶಯವನ್ನು ಹೊಂದಿತ್ತು ಇದಕ್ಕೆ ಅವರ ಲೇಖನಗಳೇ ಸಾಕ್ಷಿ. ಕೆಲವು ಕಡೆ ಸಂಗತಿಗಳನ್ನು ಅತಿಯೆನಿಸುವಷ್ಟು ವೈಭವೀಕರಿಸಿ ಹೇಳುತ್ತಿದ್ದರು. ಶಾಸ್ತ್ರಿಗಳಿಗೆ ಪ್ರಾಚೀನ ಕನ್ನಡ ಕಾವ್ಯಗಳ ಮತ್ತು ಅವುಗಳ ರಮಣೀಯ ಛಂದಸ್ಸಿನ ಬಗ್ಗೆ ಅಸದಳ ಪ್ರೀತಿಯಿತ್ತು. ವಿಚಾರ ಪ್ರತಿಪಾದನೆ ಮಾಡುತ್ತಾ ಮಾಡುತ್ತಾ ಭಾವಾವಿಷ್ಟರಾಗಿ ಬಿಡುತ್ತಿದ್ದರು. ಸರ್ವಜ್ಞ ಕವಿಯ ತ್ರಿಪದಿಗಳನ್ನು ಸಂಪಾದಿಸಿ ಪ್ರಕಟಿಸುವ ಸಂದರ್ಭದಲ್ಲಿ ಗ್ರಂಥಕ್ಕೆ ಪ್ರಸ್ತಾವನೆ ಬರೆಯಬೇಕಾಗಿತ್ತು. ಅದು ಸಂಶೋಧನಾ ಪ್ರಬಂಧದ ಘನತೆಯಿಂದಲೇ ಕೂಡಿತ್ತು. ಸರ್ವಜ್ಞ ಕವಿಯ ಕವಿ-ಕಾವ್ಯ ಪರಿಚಯ ಮಾಡಿ ಕೊಡುತ್ತಾ ಕೆಲವು ತ್ರಿಪದಿಗಳನ್ನು ಬರೆದರು ಅವುಗಳನ್ನು ನೋಡಿದರೆ ತ್ರಿಪದಿ ಛಂದಸ್ಸಿಗೆ ಎಷ್ಟರ ಮಟ್ಟಿಗೆ ಸೋತುಹೋಗಿದ್ದರೆಂಬುದು ತಿಳಿಯುತ್ತದೆ.

ವೇದಶಾಸಗಳನ್ನು ಸಾಧಿಸುವ ಶ್ರಮವೇಕೆ
ಸಾದು ಸರ್ವಜ್ಞ ಮೂರುತಿಯ ವಚನಗಳ
ನಾದರಿಸಿ ಕೇಳಿ - ಸರ್ವಜ್ಞ

ಸರ್ವಜ್ಞ ವಚನ ರಾಶಿಗೆ ಪ್ರಕ್ಷಿಪ್ತಗಳು ಹೇಗೆ ಸೇರಿರಬಹುದೆಂದು ನಾವೀಗ ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಸರ್ವಜ್ಞ ತ್ರಿಪದಿಗಳು ಜನಪ್ರಿಯತೆ ಗಳಿಸುತ್ತಾ ಹೋದಂತೆ, ಶಾಸ್ತ್ರಿಗಳಂತಹ ಪಂಡಿತ ಕವಿಗಳು ವಚನಗಳನ್ನು ರಚಿಸಿ ಸರ್ವಜ್ಞನ ಅಂಕಿತವಿರಿಸಿ ರಾಶಿಯೊಳಕ್ಕೆ ಸೇರಿಸಿಬಿಟ್ಟರು. ಎಳ್ಳಿನರಾಶಿಗೆ ಸಾಸುವೆ ಬೆರೆಸಿದಂತಾಗಿ ಬಿಟ್ಟಿತು. ಇದೀಗ ತ್ರಿಪದಿ ರಾಶಿಯಲ್ಲಿ ಕವಿ ಬರೆದ ತ್ರಿಪದಿಗಳಾವುವು ಪ್ರಕಿಪ್ತಗಳಾವುವು ಎಂಬುದನ್ನು ಪತ್ತೆ ಮಾಡಲು ಕೊಂಚ ಶ್ರಮವೇ ಆದೀತು.

ಆವಭಾಷೆಯೊಳುಂಟು ಈ ವಿಧದ ವಚನಗಳು
ಕೋವಿದರೆ ಕೇಳಿ ಭಾಗವಲ್ಲವೆ ನಮ್ಮ
ಭೂವಿನುತ ನುಡಿಯ ಸರ್ವಜ್ಞ

ಶಾಸ್ತ್ರಿಗಳು ಸರ್ವಜ್ಞ ಧ್ಯಾನದಲ್ಲಿರುವಾಗ ಅವನಂತೆಯೇ ಸರಳವಾಗಿ ತ್ರಿಪದಿ ಬರೆಯಬಲ್ಲರು ಷಡಕ್ಷರಿಯ ಧ್ಯಾನಕ್ಕೆ ನಿಂತಾಗ ವೃತ್ತಾಕಂದಗಳನ್ನು ಲೀಲಾಜಾಲವಾಗಿ ಬರೆಯ ಬಲ್ಲವರಾಗಿದ್ದರು. ಷಡಕ್ಷರ ಕವಿಯನ್ನು ಕುರಿತು ಅವರ ಕಂದವನ್ನಿಲ್ಲಿ ನೋಡಬಹುದು.

ರಸವತ್ಕಾ ವ್ಯಂಗಳನೀ
ರಸೆಯೊಳ್ ಸತ್ಕೀರ್ತಿಯಾಂತ ಕವಿಕುಲವಂದ್ಯಂ!
ಅಸಮಂ ಷಡಕ್ಷರಾರ್ಯಂ
ವಸುಧೆಯೊಳೆಯಾಗಿತ್ತು ಪೊರೆಗೆ ಕಲಿಸಂಪದಮಂ।

ಸಂಶೋಧನೆಯ ಸಾಗರದಾಳಕ್ಕಿಳಿಯದೆ ಕಾವ್ಯ ಮಾರ್ಗವೆನಿಸುವ ಖೆಂಚರಗಾಮಿಗಳಾಗಿದ್ದಿದ್ದರೆ ಶಾಸ್ತ್ರಿಗಳು ಮಹಾಕಾವ್ಯವನ್ನು ರಚಿಸುವ ಪ್ರತಿಭೆಯನ್ನು ಹೊಂದಿದ್ದರು 'ಶೂಲಪಾಣಿ' ಎಂಬ ಕಾವ್ಯನಾಮದಿಂದ ಅದೆಷ್ಟೋ ಪದಗಳನ್ನು ರಚಿಸಿದ್ದಾರೆ. ಅದರವು ಪಾಂಡಿತ್ಯ ಪ್ರದರ್ಶನದ ಮುಖಮಾಡಿದವೇ ಹೊರತು ಭಾವ ಪ್ರಕಟದತ್ತ ಮುಖ ತಿರುಗಿಸಲಿಲ್ಲ.

ಕನ್ನಡಿತಿಯೆಂಬುವಳು ಬನ್ನಕೊಳಗಾಗಿಹಳು
ತನ್ನಗೆಳತಿಯರ ಸರಿದೊರೆಗೆ ಬಾರದಲೆ
ಕಣ್ಣೀರೊಳಿಹಳು ಸರ್ವಜ್ಞ.

ಕರ್ನಾಟಕ ಏಕೀಕರಣವಾಗದಿರುವ ಹತಾಶೆಯನ್ನು ಶಾಸ್ತ್ರಿಗಳು ತೋಡಿಕೊಂಡಿರುವ ಪರಿಯಿದು. ಏಕೀಕರಣವಾದರೆ ಭಾರತ ಸ್ವಾತಂತ್ರವಾದಷ್ಟೇ. ಕನ್ನಡನಾಡು ಪ್ರಗತಿ ಹೊಂದದೆಂಬ ನಂಬುಗೆ ಅವರಿಗಿತ್ತು. ಕನ್ನಡತಿಯ ಬನ್ನವನ್ನು ಪರಿಹರಿಸಿ ಕಣ್ಣೀರೊರೆಸುವ ಸಂಕಲ್ಪ ಮಾಡಿದರು.

ಕನ್ನಡದ ಸೌಭಾಗ್ಯವಿನ್ನೊಮ್ಮೆ ಮೆರೆಯಲೈ
ಕನ್ನೈದಿಲೆಗೆ ಚಂದ್ರ ನುದಯಮಂ ಕಂಡಂತೆ
ಇನ್ನೊಮ್ಮೆಬಾರ ಸರ್ವಜ್ಞ

ಉತ್ಸಾಂಗಿ ಚನ್ನಪ್ಪನವರು ಸರ್ವಜ್ಞನ ವಚನಗಳನ್ನು ಸಂಪಾದಿಸಿ ಕವಿಕಾವ್ಯ ಪರಿಚಯಗಳ ಬಗ್ಗೆ ಬಹು ಮೌಲ್ಯಯುತವಾದ ಪ್ರಸ್ತಾವನೆ ಬರೆದು ಕನ್ನಡಿಗರಿಗೆ ಸರ್ವಜ್ಞ ತ್ರಿಪದಿಗಳನ್ನು ಸಮಗ್ರವಾಗಿ ಪರಿಚಯಿಸಿಕೊಟ್ಟರು ಅವರ ಬಗ್ಗೆ ಶಾಸ್ತ್ರಿಗಳಿಗೆ ತುಂಬಾ ಗೌರವವಿತ್ತು.

ಕ್ರೈಸ್ತ ಮತ ಸಂಭವನು ಉತ್ತಾಂಗಿಯೆಂಬುವನು
ಸಿಸ್ತಿನಿಂ ನಿನ್ನ ವಚನಗಳ ಸರಿಗೊಳಿಸಿ
ಕೀರ್ತಿಯಂ ಪಡೆದ ಸರ್ವಜ್ಞ.

ಶೈಲಿಯಲ್ಲಿ, ಸರಳತೆಯಲ್ಲಿ ಸರ್ವಜ್ಞ ವಚನಗಳನ್ನು ಹೋಲುವ ತ್ರಿಪದಿಗಳನ್ನು ಶಾಸ್ತ್ರಿಗಳು ಬರೆಯಬಲ್ಲವರಾಗಿದ್ದರು. ತಮ್ಮ ಕಣ್ಣಮುಂದೆ ಲಿಂಗವಂತ ಧರ್ಮಿಯರು ದಿಕ್ಕು ತಪ್ಪುತ್ತಿದ್ದುದನ್ನು ಶಾಸ್ತ್ರಿಗಳು ಕಂಡು ವಿಷಾದಪಟ್ಟದ್ದುಂಟು.

ಲಿಂಗವಂತರ ಮತವು ಭಂಗ ಕೊಳಗಾಗಿಹುದು
ಮಂಗ ಮಾನಿಸರು ಅರಿವರೇ ಲೋಕದೊಳು
ಲಿಂಗಾಂಗ ದಿರವ ಸರ್ವಜ್ಞ

ಶಾಸ್ತ್ರಿಗಳ ಸಂಶೋಧನೆಯ ಹಾಸು-ಬೀಸುಗಳನ್ನು ನೋಡಬೇಕಾದರೆ ಅವರು ಸರ್ವಜ್ಞ ತ್ರಿಪದಿಗಳಿಗೆ ಬರೆದ ಪ್ರಸ್ತಾವನೆಯನ್ನು ಓದಬೇಕು, ಸರ್ವಜ್ಞ ಎಂಬ ಹೆಸರು ಅಂಕಿತವೋ ನಿಜನಾಮವೋ, ಕವಿಯ ಕಾಲವಿಚಾರ, ತ್ರಿಪದಿಲಕ್ಷಣ, ಸರ್ವಜ್ಞನಿಗೆ ಶಾಸ್ತ್ರ ಜ್ಞಾನವಿತ್ತೇ? ರಾಮಾಯಣ, ಭಾರತಗಳನ್ನೇ ವಿಡಂಬಿಸಿ, ನಿಂದಿಸಿರುವನೋ? ಆತನ ಹೀನೋಪಮೆಗಳು ಎಂಥವು? ಕವಿ, ವಿರಕ್ತನೇ? ಆತನಿಗೆ ರಾಮಭಕ್ತಿಯಿತ್ತೇ? ಇತ್ಯಾದಿ ಪ್ರಶ್ನೆಗಳನ್ನು ಶೀರ್ಷಿಕೆಗಳನ್ನಾಗಿ ಇರಿಸಿಕೊಂಡು ಹೇಳಿರುವ ವಿಚಾರಗಳು ಗಂಭೀರವಾದವುಗಳು. ವಿಷ್ಣುವಿನ ಅವತಾರಗಳ ಬಗ್ಗೆ ಸರ್ವಜ್ಞನಿಗೆ ಗೌರವ ಭಾವನೆಯಿರಲಿಲ್ಲ. ಅಂತೆಯೇ ಶಾಸ್ತ್ರಿಗಳಿಗೂ ಕೂಡ...

ಹತ್ತೂಭವವನು ಎತ್ತಿ ಎತ್ತೂ ಎಮ್ಮೆಯಕಾದು
ಮತ್ತೆ ಪಾಂಡವರಿಗಳಾದ ಹರಿಯುತಾ
ನೆತ್ತಣಾದೈವ ಸರ್ವಜ್ಞ.
ನರಸಿಂಹನವತಾರ ಹಿರಿದಾದ ಅದ್ಭುತವು
ಶರಬನುಗುರಿಂದ ಕೊಲುವಾಗ ಹರಿಯು
ಊರ ನರಿಯಂದವಾದ ಸರ್ವಜ್ಞ.

ಪಂಚಾಚಾರ್ಯರು ಲಿಂಗದಲ್ಲಿ ಒಡೆದು ಮೂಡಿದರೆಂಬ ಸ್ಥಳಗಳಿಗೆ ಶಾಸ್ತ್ರಿಗಳು ಖುದ್ದಾಗಿ ಹೋಗಿ ಪರಿವೀಕ್ಷಣೆ ನಡೆಸಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿರುತ್ತಾರೆ.

“ಹೈದ್ರಾಬಾದಿನಿಂದ ಬೆಜುವಾಡಕ್ಕೆ ಹೋಗುವ ರೈಲುಮಾರ್ಗದಲ್ಲಿ ನಲವತ್ತೈದು ಮೈಲು ದೂರದಲ್ಲಿರುವ 'ಅಲೇರಿ' ಎಂಬ ನಿಲ್ದಾಣಕ್ಕೆ ಸುಮಾರು ಐದು ಮೈಲಿದೂರಕ್ಕೆ ಕೊಲ್ಲಿಪಾಕಿ ಕ್ಷೇತ್ರವಿದೆ...ಈ ಕ್ಷೇತ್ರದಲ್ಲಿ ಈಗ ಹಲವು ಕನ್ನಡ ಶಿಲಾಶಾಸನಗಳು ಕಂಡುಬಂದಿರುವುದರಿಂದ ಒಂದು ಕಾಲದಲ್ಲಿ ಕನ್ನಡವು ಈ ಭಾಗದಲ್ಲಿ ಹೆಚ್ಚಾಗಿ ಬಳಕೆಯಲ್ಲಿತ್ತೆಂದು ಹೇಳಬಹುದಾಗಿದೆ. ಕಲ್ಯಾಣ ಚಾಲುಕ್ಯರಿಗೆ ಕೆಲವು ಕಾಲ ಇದು ರಾಜಧಾನಿಯಾಗಿತ್ತೆಂಬ ವಿಷಯ ಕೂಡ ಸ್ಮರಣಾರ್ಹವಾಗಿದೆ.... ಕೊಲ್ಲಿಪಾಕಿಯಲ್ಲಿ ಹದಿನೆಂಟು ಲಿಂಗವಂತರ ಮಠಗಳಿವೆ, ಇವುಗಳನ್ನು ಅಗಸರ ಮಠ, ಕುರುಬರಮಠ, ಗೌಳಿಗರಮಠ, ಕೊಮಟಿಗರಮಠ, ಒಕ್ಕಲಿಗರಮಠ ಇತ್ಯಾದಿಯಾಗಿ ಕರೆಯುತ್ತಾರೆ. ಪ್ರತಿಯೊಂದು ಮಠದಲ್ಲಿಯೂ ಒಂದೊಂದು ಚಿಕ್ಕ ದೇವಾಲಯವಿದ್ದು ಶಿವಲಿಂಗ - ವೃಷಭಗಳಿವೆ. ಎಲ್ಲ ಮಠಗಳಿಗೂ

ವೀರಶೈವ ಜಂಗಮರೇ ಗುರುಗಳಾಗಿದ್ದಾರೆ. ಆಯಾ ಜಾತಿಯವರು ತಮ್ಮ ತಮ್ಮ ಮಠಕ್ಕೆ ನಡೆದು ಕೊಂಡು ಕಾಣಿಕೆ ಕೊಡುತ್ತಾರೆ.... ಕೊಲ್ಲಿಪಾಕಿಯಲ್ಲಿ ಪ್ರಾಚೀನವಾದ ವೈಷ್ಣವ ದೇವಾಲಯವಿದೆ, ಅದನ್ನು ವೀರನಾರಾಯಣ ದೇವಾಲಯ ಎನ್ನುತ್ತಾರೆ....ಈ ಗುಡಿ ಭವ್ಯವಾಗಿದೆ ಮೂರ್ತಿಸುಂದರವಾಗಿದೆ. ಇಲ್ಲಿ ಎರಡು ಕನ್ನಡ; ಒಂದು ನಾಗರಿ ಅಂತು ಮೂರು ಶಾಸನಗಳಿವೆ. ಅರ್ಚಕರು ಶ್ರೀ ವೈಷ್ಣವ ಬ್ರಾಹ್ಮಣರು ದೇವಾಲಯವು ಜೀರ್ಣಾವಸ್ಥೆಯಲ್ಲಿದೆ....

ಕೊಲ್ಲಿಪಾಕಿಯಲ್ಲಿ ಅತ್ಯಂತ ಪ್ರಾಚೀನವಾದ ಶ್ರೀ ಆದಿನಾಥಸ್ವಾಮಿ ಬಸದಿಯಿದೆ. ಇದು ಶ್ವೇತಾಂಬರ ಜೈನಪಂಥದವರಿಂದ ಉತ್ತಮ ಸ್ಥಿತಿಯಲ್ಲಿ ಇಡಲ್ಪಟ್ಟಿದೆ..... ಈ ಬಸದಿಯಲ್ಲಿ ಒಂದು ಮಹತ್ವದ ಕನ್ನಡ ಶಾಸನದ ಸ್ಥಂಭವಿದೆ. ಕಂಬದ ಮೇಲೆ ಒಂದುಕಡೆ ಲಿಂಗಬಸವ ಇನ್ನೊಂದು ಕಡೆ ನಾರಾಯಣ ಗರುಡ, ಮತ್ತೊಂದು ಕಡೆ ಜಿನಮೂರ್ತಿಗಳಿವೆ... ಶ್ರೀ ಮಹಾವೀರಸ್ವಾಮಿಯ ವಿಗ್ರಹವನ್ನು "ಪಿರೋಜ್" ಎಂಬ ಒಂದು ಮಹತ್ವದ ಶಿಲೆಯಿಂದ ಮಾಡಿದ್ದಾರೆ. ವಿಗ್ರಹ ಸುಮಾರು ಮೂರು ಅಡಿ ಎತ್ತರವಿದ್ದು, ಇಡೀ ಹಿಂದೂಸ್ಥಾನದಲ್ಲಿ ಇಂತಹ ವಿಗ್ರಹವಿಲ್ಲವೆಂದೂ ಇದು ಸುಮಾರು ಎರಡು ಸಾವಿರ ವರ್ಷದಷ್ಟು ಪ್ರಾಚೀನವೆಂದೂ ಅರ್ಚಕರು ಹೇಳುತ್ತಾರೆ. ಕೊಲ್ಲಿಪಾಕಿಗೆ ಬಂದ ಪ್ರಯಾಣಿಕರಿಗೆ ಈ ಬಸದಿಯೇ ಅವಾಸಸ್ಥಾನವೆನಿಸಿದೆ. ಇಲ್ಲಿ ಉಚಿತ ಪ್ರಸಾದ ಲಭಿಸುತ್ತದೆ. ದೇವಾಲಯ ವ್ಯವಸ್ಥೆ ಚೆನ್ನಾಗಿದೆ. ಹಾಗೂ ಶುಚಿರ್ಭೂತವಾಗಿದೆ.

ಶ್ರೀ ರೇಣುಕಾಚಾರ್ಯರು ಕೊಲ್ಲಿಪಾಕಿ ಸೋಮೇಶ್ವರಲಿಂಗದಲ್ಲಿ ಜನಿಸಿದರೆಂಬ ವಿಷಯವನ್ನು ಪ್ರತಿಪಾದಿಸಲು; ಸಿದ್ಧಾಂತ ಶಿಖಾಮಣಿ, ಸಂಸ್ಕೃತ ರೇಣುಕವಿಜಯ, ರೇವಣಸಿದ್ದೇಶ್ವರ ಪುರಾಣ, (ಕವಿಬೊಮ್ಮರಸ) ರೇವಣಸಾಂಗತ್ಯ (ಚನ್ನಬಸವಕವಿ) ರೇವಣಸಿದ್ದೇಶ್ವರರಗಳೆ (ಹರಿಹರ) ರೇಣುಕ ವಿಜಯಮು, ಪಂಚಬ್ರಹ್ಮೋದಯಭಾಷ್ಯಂ, (ಸಾಸಲ ಚಿಕ್ಕವೀರಣಾರಾಧ್ಯ) ಶಿವಾಧಿಕ್ಯಶಿಖಾಮಣಿ, (ಸೋಸಲೆ ರೇವಣಾರಾಧ್ಯ) ಇತ್ಯಾದಿ ಗ್ರಂಥಗಳನ್ನು ಹೆಸರಿಸುತ್ತಾರೆ.

ಶಾಸ್ತ್ರಿಗಳ ಅಧ್ಯಯನ ಶೀಲ ಸಂಶೋಧನೆ ತಲ ಸ್ಪರ್ಶಿಯಾದುದೆಂದು ಈ ಲೇಖನ ಮನವರಿಕೆ ಮಾಡಿಕೊಡುತ್ತದೆ. ರೇಣುಕಾಚಾರ್ಯರ ಬಗ್ಗೆ ಕಾವ್ಯ ಬರೆದಿರುವ ಕವಿಗಳೆಲ್ಲರೂ ವಚನಕಾರರಿಗಿಂತ; ಈಚಿನವರು (ಹನ್ನೆರಡನೆಯ ಶತಮಾನದಿಂದ ಈಚಿನವರು) ಕೊಲ್ಲಿಪಾಕಿಯ ಸೋಮೇಶ್ವರಲಿಂಗ ಜೈನಧರ್ಮದ ಉಗಮಕ್ಕಿಂತ ಪ್ರಾಚೀನವಾಗಿರಲು ಸಾಧ್ಯವಿಲ್ಲ. ಗುಜರಾತಿನ ಸೋಮನಾಥ ಪಾಶುಪತ ಮತ್ತು ಲಕುಮೀಶ್ವರ ಕ್ಷೇತ್ರವೆಂದು ಪ್ರಾಚ್ಯ ಸಂಶೋಧಕರು ನಿರ್ಣಯಿಸಿದ್ದಾರೆ. ಕೊಲ್ಲಿಪಾಕಿಯ ಸೋಮೇಶ್ವರ ದೇವಾಲಯ ಅಥವಾ ಸೋಮೇಶ್ವರ ಲಿಂಗದಿಂದ ಉದ್ಭವವಾದ ಸಂಗತಿ ನಿಜವಾಗಿದ್ದ ಪಕ್ಷದಲ್ಲಿ ಅಂತಹ ಮಹತ್ವವುಳ್ಳ ಸ್ಥಳವನ್ನು ಯಾರೂ ಯಾಕೆ ಸಂರಕ್ಷಿಸಿಕೊಳ್ಳಲು ಸಾಧ್ಯವಾಗಿಲ್ಲ. ಜೀನದೇವಾಲಯದ ಮೂರ್ತಿ ಶಿಲ್ಪಕ್ಕೆ ಎರಡುಸಾವಿರ ವರ್ಷಗಳ ಹಳಮೆಯನ್ನು ಹೇಳುವಂತೆ ಸೋಮೆಶ್ವರ ಲಿಂಗಕ್ಕೆ ಯಾಕೆ ಹೇಳಲು ಸಾಧ್ಯವಾಗಿಲ್ಲ ಎಂಬ ಪ್ರಶ್ನೆಗಳು ಸಹಜವಾಗಿ ಹುಟ್ಟುತ್ತವೆ. ಅದಕ್ಕೆ ಶಾಸ್ತ್ರಿಗಳು ಕೊಡುವ ಉತ್ತರಗಳು ಸಮುಚಿತವಾಗಿವೆ.

ತೋಟದ ಸಿದ್ಧಲಿಂಗೇಶ್ವರಸ್ವಾಮಿಗಳು ಲಿಂಗ ಮುಖದಿಂದ ಉದಯವಾದ ಶರಣರು ಲಿಂಗರೂಪವಲ್ಲದೆ ಮತ್ತೊಂದು ರೂಪವೆನ್ನಬಹುದೇ ಎಂದರೆ ಶ್ರೀ ಬಸವೇಶ್ವರರು ಕರ್ಣದೊಳಗೆ ಹುಟ್ಟಿದವರುಂಟೇ ಎಂದು ಪ್ರಶ್ನಿಸಿದ್ದಾರೆ. ತಾತ್ವಿಕವಾಗಿ ಲಿಂಗಮುಖದಲ್ಲಿ ಹುಟ್ಟಿದವರು ಎನ್ನುವುದನ್ನು ಲಿಂಗದಿಂದಲೇ ಹುಟ್ಟಿದರು ಎಂದು ನಂಬುವುದು ಸರಿಯಲ್ಲ. "ಅಕ್ಕ ಮಹಾದೇವಿ "ಸಂಗದಿಂದಲ್ಲದೆ ದೇಹವಾಗದು ಎಂದು ಹೇಳಿದ್ದಾರೆ..." ಶ್ರೀರೇಣುಕಾಚಾರ್ಯರು ಸೋಮೇಶ್ವರಲಿಂಗದಲ್ಲಿ ಅವತರಿಸಿದರೆಂಬುದನ್ನು ಅಕ್ಷರಶಃ ನಂಬಲು ಇತಿಹಾಸ ಮತ್ತು ವಿಜ್ಞಾನ ಶಾಸ್ತ್ರಜ್ಞರು ಒಪ್ಪಲಾರರು. ಆ ಲಿಂಗದ ಅನುಗ್ರಹದಿಂದ ಆ ಕ್ಷೇತ್ರದಲ್ಲಿ ಲಿಂಗಮುಖಿಗಳಾದ ಶಿವಭಕ್ತರಲ್ಲಿ ಆಚಾರ್ಯರು ಜನಿಸಿದರೆಂಬುದನ್ನು ಮೇಲೆ ಕಂಡ ವಚನಕಾರರ ಮಾತುಗಳಿಂದ ನಾವು ನಿರ್ಧರಿಸಬಹುದು. ಶಾಸ್ತ್ರಿಗಳ ಧಾರ್ಮಿಕ ಚಿಂತನೆಗಳಲ್ಲಿ ಎಲ್ಲಿಯೂ ಅಶಾಸ್ತ್ರೀಯವಾದ ತೀರ್ಮಾನಗಳಿರುವುದಿಲ್ಲ.

ರೇಣುಕಾಚಾರ್ಯರು ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಲ್ಲಿ ಉದ್ಭವರಾದರು ಎಂಬ ಪುರಾಣ ನಂಬುಗೆಯನ್ನು ಶಾಸ್ತ್ರಿಗಳು ಸಾರಾ ಸಾಗಟಾಗಿ ಅಲ್ಲಗಳೆದರು. ವೀರಶೈವ ಮತಸ್ಥಾಪಕರೂ ಅತಿ ಪ್ರಾಚೀನರೂ ಎಂಬ ನಂಬಿಕೆ ಹೊಂದಿದ್ದ ಪಂಚಾಚಾರ್ಯಾ ವಾದಿಗಳಿಗೆ ಶಾಸ್ತ್ರಿಗಳ ನುಡಿ ಕಣ್ಣು ಕೆಂಪಾಗಿಸಿರಲೂಬಹುದು. ಸಾಹಿತ್ಯ ಪ್ರೇಮಿಗಳೂ ಸಂಶೋಧಕರೂ ಆದ ಶಾಸ್ತ್ರಿಗಳು ಪಂಚಾಚಾರ್ಯ ಅನುಯಾಯಿಗಳ ವಿರೋಧಕ್ಕೆ ಸೊಪ್ಪುಹಾಕಲಿಲ್ಲ. ದಿಟ್ಟ ಹಾಗೂ ನೇರನುಡಿಗಳಿಂದ ಪುರಾಣ ನಂಬುಗೆಯನ್ನು ಅಲ್ಲಗಳೆದರು. ರೇಣುಕಾಚಾರ್ಯರು ಲಿಂಗೋದ್ಭವರೆಂದು ಹೇಳಿದಾಕ್ಷಣ ಅವರ ಹಿರಿಮೆ ಗರಿಮೆಗಳು ಹೆಚ್ಚೇನೂ ಆಗುವುದಿಲ್ಲ. ವೀರಶೈವಧರ್ಮದಲ್ಲಿ ಹುಟ್ಟು ಮುಖ್ಯವೇಅಲ್ಲ, ಸಾಮಾನ್ಯ ಶಿಲ್ಪಿ ಕಡೆದ ಲಿಂಗದಲ್ಲಿ ಒಡೆದು ಮೂಡಿ ಹೊರಬಂದರು ಎನ್ನುವುದಕ್ಕಿಂತ ಕೊಲ್ಲಿಪಾಕಿಯ ದೇವಾಲಯದ ಅರ್ಚಕ ದಂಪತಿಗಳು ರೇಣುಕಾಚಾರ್ಯರನ್ನು ಹಡೆದು ಪೋಷಿಸಿ ಅಪಾರ ವಿದ್ಯೆಗಳನ್ನು ಕಲಿಯಿಸಿ ಸಮುದಾಯದ ಉದ್ಧಾರಕ್ಕೆ ಕೊಡುಗೆಯಂತೆ ಕೊಟ್ಟರು ಎನ್ನುವುದರಲ್ಲಿ ತುಂಬಾ ಮಹತ್ವ ಬರುತ್ತದೆ. ಅಯೋನಿಜ, ಅನಿಮಿಷ ಮುಂತಾದ ವಿಶೇಷಣಗಳು ದೇವತೆಗಳ ಮೂರ್ತಿ ಶಿಲ್ಪಕ್ಕೆ ಮಾತ್ರವೇ ಅನ್ವಯವಾಗಬಲ್ಲವು. ಮೂರ್ತಿ ಚೈತನ್ಯವಿಲ್ಲದ ಜಂಗಮ ಶಕ್ತಿಯಿಲ್ಲದ ಸ್ಥಾವರ ದೇವಶಿಲ್ಪಕ್ಕಿಂತ ಪಂಚಾಚಾರ್ಯರೇ ಶ್ರೇಷ್ಠರೆಂಬ ತಿಳಿವು ಜನರಿಗೆ ಅರಿವಾಗಬೇಕಾಗಿದೆ. ಸರ್ವಜ್ಞ ಕವಿ ಒಂದು ವಚನದಲ್ಲಿ "ಹರನ ಶಿಲೆಯೆಂದವಗೆ ಗುರುವನರನೆಂದವಗೆ ಶೇಷಪ್ರಸಾದವನು ಎಂಜಲೆಂದವಗೆ ನಾಯಕ ನರಕವೆಂದು ಹೇಳಿರುವಾಗ ಲಿಂಗ ರೂಪದ ದೇವಶಿಲ್ಪ ಒಂದು ಆಕಾರವೇ ಹೊರತು ಅದೇ ಶಿವನಲ್ಲ ಹೆಚ್ಚೆಂದರೆ ಸಂಕೇತವಾಗಬಹುದು. ಅಯೋನಿಜರು ಎಂಬ ಶಬ್ದದ ಬೆನ್ನಲ್ಲಿ ಸ್ತ್ರೀ ನಿರಾಕರಣ ದೋಷ ಅಂಟಿಯೇ ಇರುತ್ತದೆ. ಲಿಂಗೈಕ್ಯ ಮತ್ತು ಲಿಂಗೋದ್ಭವರ ಈ ಎರಡೂ ಶಬ್ದಗಳು ವೀರಶೈವ ತತ್ವದ ಪಾರಿಭಾಷಿಕ ಪದಗಳೇ ಹೊರತು ಅವುಗಳಿಗೆ ವಾಸ್ತವ ಸ್ವರೂಪಾರ್ಥ ಇರುವುದಿಲ್ಲ.

ಲಿಂಗವಂತ ಸಮುದಾಯದಲ್ಲಿ ಸಾಮಾನ್ಯರಿಗೆ ಇಷ್ಟವಾಗದ, ಹಲವಾರು ಬಣಗಳಿವೆ. ಮೊದಲನೆಯದು ಗುರುವರ್ಗದ ಬಣ, ಎರಡನೆಯದು ಶಿಷ್ಯವರ್ಗದ ಬಣ. ವೀರಶೈವ ಪ್ರಥಮಾಚಾರ್ಯರೆಂದು ಬಣ್ಣನೆಗೊಳ್ಳುತ್ತಿರುವ ಪಂಚಾಚಾರ್ಯರೇ ಶ್ರೇಷ್ಠರೆಂದು ಉಳಿದವರೆಲ್ಲ ಶಿಷ್ಯವರ್ಗದವರೆಂದು ವಿರಕ್ತ ಮಠದವರು ಪಂಚಪೀಠಾಧಿಪತಿಗಳ

ಧರ್ಮಾಡಳಿತಕ್ಕೆ ಒಳಪಡಬೇಕೆಂದೂ ಗುರುವರ್ಗದ ಮಠಾಧಿಪತಿಗಳು ವಯಸ್ಸಿನಲ್ಲಿ ಅನುಭಾವದಲ್ಲಿ ಕಿರಿಯರಾದರೂ ಕೆಲವು ಸಲ ವಿವೇಕ ಶೂನ್ಯರಾದರೂ ಅವರಿಗೆ ವಿರತರು ಕಪ್ಪಕಾಣಿಕೆಗಳನ್ನು ಒಪ್ಪಿಸಿ ಗುರುಕಾಣಿಕೆ ಸಲ್ಲಿಸಿ ಆಶೀರ್ವಾದ ಪಡೆಯಬೇಕೆಂದೂ, ತಮ್ಮ ಪಲ್ಲಕ್ಕಿ ಹೊರಲು ನೇಮಿಸಿಕೊಂಡಿರುವ ಬಣದವರಿಗೆ ಆದ್ಯರೆಂಬ ಸ್ಥಾನಮಾನಗಳು ಸಲ್ಲಬೇಕೆಂದೂ ನಿರೀಕ್ಷೆಯಿರಿಸಿಕೊಂಡೇ ಬರುತ್ತಿದ್ದಾರೆ. ಈ ಮೇಲ್ಮೆಗೆ ಅವರು ಕೊಡುವ ಸಮರ್ಥನೆಗಳಲ್ಲಿ ಕೆಲವು ಇಂತಿವೆ;

ಪಂಚಾಚಾರ್ಯರು ಲಿಂಗೋದ್ಭವರು, ಅಯೋನಿಜರು, ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಿಂದ ಉದ್ಭವವಾದ ರೇಣುಕ ಭಗವತ್ಪಾದರು ಎಲ್ಲ ಆಚಾರ್ಯರಿಗೂ ಹಿರಿಯರು, ಅವರು ಮನೋಗಾಮಿಗಳು, ತ್ರೇತಾಯುಗದ ವಿಭೀಷಣನಿಗೆ ಉಪದೇಶ ಮಾಡಿದವರು. ಶಕ್ತಿ ವಿಶಿಷ್ಟಾದ್ವೈತ ತತ್ವವನ್ನು ಪ್ರಚಾರ ಮಾಡಿದ ವಿದ್ಯಾಶಂಕರರಿಗೆ ಚಂದ್ರಮೌಳೀಶ್ವರಲಿಂಗವನ್ನು ನೀಡಿದವರು. ಕಲಿಯುಗದಲ್ಲಿ ಸಾವಿರ ಸಾವಿರ ಪತ್ನಿಯರನ್ನೇ ಒಳಗೊಂಡು ಸಂಸಾರ ಮಾಡಿದವರು. ಭಾರತಾದ್ಯಂತ ಸಂಚಾರ ಮಾಡಿದವರು ಎಂದು ಹೇಳಿಕೊಳ್ಳುತ್ತಾರೆ. ಕೊಲ್ಲಿಪಾಕಿಯ ಆಸುಪಾಸಿನಲ್ಲಿ ಚತುರಾಚಾರ್ಯರ ಉದ್ಭವಸ್ಥಾನಗಳಿವೆಯೆಂದೂ ಅವೆಲ್ಲವೂ ಮುಸಲ್ಮಾನರ ಧಾಳಿಯಿಂದ ಹಾಳಾದವೆಂದೂ, ಓರಂಗಲ್ಲಿನ ವೀರಭದ್ರ ದೇವಾಲಯ ಧೂಳೀಪಟವಾಗಿದೆಯೆಂದೂ ಇತಿಹಾಸಕಾರರು ಗುರುತಿಸಿದ್ದಾರೆ. ಅವರವರು ತಮ್ಮ ತಮಗೆ ಶ್ರೇಷ್ಠರೆಂದು, ದೊಡ್ಡವರೆಂದು, ಪವಿತ್ರರೆಂದು ಹೇಳಿಕೊಳ್ಳುವುದರಲ್ಲಿ ಯಾವ ಅಭ್ಯಂತರವೂ ಇರಬೇಕಾಗಿಲ್ಲ. ಪಂಚಪೀಠದ ಬಣದವರಿಗಿಂತಲೂ ಒಂದು ಹೆಜ್ಜೆ ಮುಂದೆ ನಿಲ್ಲಲು ಹಂಬಲಿಸುವ ಶಿವಶರಣರ ಹಿನ್ನೆಲೆಯಿಂದ ಬಂದ ಲಿಂಗವಂತರು; ತಮ್ಮದು ವಿಚಾರ ಪರವಾದ ವರ್ಗವೆಂದೂ, ವಚನಕಾರರ ಧೈರ್ಯಾದರ್ಶಗಳನ್ನು ಪಾಲಿಸುವವರೆಂದೂ, ಕಾಯಕಜೀವಿಗಳೆಂದೂ ಷಟ್ಸ್ಥಲಸಿದ್ಧಾಂತ ಗುರು ವರ್ಗದವರಿಗಿರುವಂತೆ ತಮಗೂ ಬಹುಮುಖ್ಯವೆಂದೂ ಗುರುವರ್ಗದವರಿಗೆ ನಾವೂ ಸಮಾನರೆಂದು ವಾದ ಹೂಡುತ್ತಿದ್ದಾರೆ. ಒಟ್ಟಿನಲ್ಲಿ ವೀರಶೈವರು ಮತ್ತು ಲಿಂಗವಂತರು ತಮ್ಮ ತಮ್ಮ ಸ್ವಜನಶೀಲತೆಯನ್ನು ತಮ್ಮ ತಮ್ಮ ದೊಡ್ಡಸ್ತಿಕೆಯನ್ನು ತೋರ್ಪಡಿಸಿಕೊಳ್ಳಲು ಬಳಸಿಕೊಳ್ಳುತ್ತಿವೆ, ಇದು ಸಮುದಾಯದ ಭಾವೈಕ್ಯತೆಯನ್ನು ಹಾಳು ಮಾಡುತ್ತದೆ.

ಶಿವಮೂರ್ತಿಶಾಸ್ತ್ರಿಗಳು ಸಂಶೋಧನೆಯಲ್ಲಿ ದಿಟ್ಟರು. ಅವರಿಗದು ಅಧ್ಯಯನದ ಕುಮ್ಮಕ್ಕಿನಿಂದಲೇ ದೊರಕಿತ್ತು. ಸತ್ಯವೆನಿಸಿದ್ದನ್ನು ನೇರನುಡಿಗಳಿಂದ ಹೇಳಿಬಿಡುತ್ತಿದ್ದರು. ಅನೇಕ ಐತಿಹಾಸಿಕ ಮಹತ್ವದ ಸಂಗತಿಗಳನ್ನು ಅವರು ಹೇಳದೇ ಹೋಗಿದ್ದರೆ ನಮಗೆ ತಿಳಿಯುತ್ತಲೇ ಇರಲಿಲ್ಲ. ಈ ಕಾರಣಕ್ಕೆ ಅವರ ಲೇಖನಗಳು ಸಂಗ್ರಹ ಯೋಗ್ಯವೆನಿಸಿದ್ದವು. ಒಂದು ಉದಾಹರಣೆಯಲ್ಲಿ ಪ್ರಸ್ತಾಪಿಸಿದರೆ ಅವರೆಂಥ ನಿಷ್ಠುರ ಸಂಶೋಧಕರೆಂಬುದು ಮನವರಿಕೆಯಾದೀತು.

ವೀರಶೈವ ಸಾಹಿತ್ಯ ಮತ್ತು ಇತಿಹಾಸ ಎಂಬ ಲೇಖನ ಮಾಲಿಕೆಯ ಗ್ರಂಥದಲ್ಲಿ ಕೊಲ್ಲಿಪಾಕಿ ಮತ್ತು ಓರಂಗಲ್ಲು ಸ್ಥಳಗಳ ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವಗಳನ್ನು ಅವರು ಕ್ಷೇತ್ರ ಕಾರ್ಯ ನಡೆಸಿಯೇ ಹೇಳತೊಡಗುತ್ತಾರೆ.

"ಕೊಲ್ಲಿಪಾಕಿಯು ವೀರಶೈವ ಜಗತ್ತಿಗೆ ಪೂಜ್ಯರಾದ ರೇಣುಕಾಚಾರ್ಯರ ಜನ್ಮಸ್ಥಳದ ಕಾರಣದಿಂದಲೂ ಸುಪ್ರಸಿದ್ಧ ಸೋಮೇಶ್ವರಲಿಂಗದ ಕ್ಷೇತ್ರವಾದುದರಿಂದಲೂ ಚರಿತ್ರೆಯಲ್ಲಿ ಪ್ರಖ್ಯಾತವಾಗಿದೆ. ಓರಂಗಲ್ಲು ಪ್ರಖ್ಯಾತರಾದ ಕಾಕತೀಯ ರಾಜರ ರಾಜಧಾನಿಯೆಂಬ ಕಾರಣದಿಂದಲೂ ಈ ಎರಡೂ ಕ್ಷೇತ್ರಗಳು ಪ್ರಖ್ಯಾತವಾಗಿವೆ."

ಶಿವಮೂರ್ತಿಶಾಸ್ತ್ರಿಗಳು ಧಾರ್ಮಿಕ ಸಂಗತಿಗಳನ್ನು ಇತಿಹಾಸದ ಅಧ್ಯಯನದ ಪರಿಧಿಗೆ ಬಹಳ ಜತನವಾಗಿ ತಂದು ಬಿಡುತ್ತಾರೆ. ಗ್ರಂಥಾಲಯದ ಕಪಾಟುಗಳಲ್ಲಿ ಸುಲಭವಾಗಿ ದೊರಕದ ಮಾಹಿತಿಗಳನ್ನು ಅವರು ನಮಗೆ ಒದಗಿಸಿ ಕೊಟ್ಟಾಗ ನಾವೂ ಸಹ ಸಂಶೋಧನಾ ವಿದ್ಯಾರ್ಥಿಗಳಂತೆ ಮನಸ್ಥಿತಿ ಹೊಂದುತ್ತೇವೆ. ಉಪೇಕ್ಷಿಸಬಹುದಾದ ಬಂಜರು ಭೂಮಿಯ ಗರ್ಭದಲ್ಲಿ ಭೂಗರ್ಭಶಾಸ್ತ್ರಜ್ಞರು ಜಲ ನಿಕ್ಷೇಪವನ್ನು ಕರಾರುವಕ್ಕಾಗಿ ಗುರುತಿಸಿ ಕೊಡುವಂತೆ ಶಾಸ್ತ್ರಿಗಳು ಸಾಹಿತ್ಯ ಮತ್ತು ಇತಿಹಾಸದ ಗರ್ಭದಲ್ಲಿ ಧರ್ಮ ಮತ್ತು ಸಾಮಾಜಿಕ ಮಹತ್ವದ ಸಂಗತಿಗಳನ್ನು ಗುರುತಿಸಿ ಕೊಡಬಲ್ಲರು. ಶಾಸ್ತ್ರಿಗಳ ಸಂಶೋಧನೆಗೆ ಅಳವಡದ ನದೀಮೂಲವಿಲ್ಲ, ಋಷಿಮೂಲವಿಲ್ಲ.

ಇತಿಹಾಸಕಾರರಲ್ಲಿ ಎರಡು ಬಗೆಯವರಿದ್ದಾರೆ. ಒಂದನೇ ಬಗೆಯವರು ಆಕರ ಗ್ರಂಥಗಳ ಅಧ್ಯಯನದಿಂದ ಲಬ್ದವಾದ ಮಾಹಿತಿಗಳನ್ನು ಆಧಾರ ಮಾಡಿಕೊಂಡು ಸಂಶೋಧನಾತ್ಮಕ ಗ್ರಂಥ ಅಥವಾ ಪ್ರಬಂಧ ರಚಿಸಿದರೆ ಎರಡನೇ ಬಗೆಯವರು ಆಕರಗಳಿಂದ ದೊರೆತ ಮಾಹಿತಿಗಳನ್ನು ಒರೆಗೆ ಹಚ್ಚಿ ನಂತರ ಕ್ಷೇತ್ರಕಾರ್ಯ ನಡೆಸಿ, ಆಕರಗಳಲ್ಲಿ ಇರುವುದಕ್ಕೂ ಈಗ ಆಗಿರುವುದಕ್ಕೂ ತಾಳೆಹಾಕಿ ಲೇಖನ ಬರೆಯುತ್ತಾರೆ. ಶಾಸ್ತ್ರಿಗಳು ಎರಡನೇ ಗುಂಪಿಗೆ ಸೇರಿದ ಇತಿಹಾಸಕಾರರು, ಕನ್ನಡ ನಾಡುನುಡಿಯ ಬಗ್ಗೆ ತುಂಬಾ ಆಸಕ್ತಿಯುಳ್ಳವರು. ಕನ್ನಡದ ಆದ್ಯವಚನಕಾರ ಜೇಡರ ದಾಸಿಮಯ್ಯನು ತನ್ನ ಧರ್ಮಪ್ರಚಾರವನ್ನು ನಡೆಸುತಿದ್ದ 'ಪೊಟ್ಟಲಗೆರೆ' ಪ್ರದೇಶವನ್ನು ಶಾಸ್ತ್ರಿಗಳು ಖುದ್ದು ನೋಡಿಬಂದು ಶರಣ ಸಾಹಿತ್ಯದಲ್ಲಿ ಲೇಖನ ಬರೆದರು. ಲೇಖನದ ಆಯ್ದ ಭಾಗವನ್ನು ಇಲ್ಲಿ ನೋಡಬಹುದು.

"ಈ ಪೊಟ್ಟಕೆರೆಯು ಹೈದರಾಬಾದಿನಿಂದ ಜೈರಾಬಾದಿಗೆ ಹೋಗುವ ಮಾರ್ಗದಲ್ಲಿ ಬಲಗಡೆ ಸುಮಾರು ಇಪ್ಪತ್ತು ಮೈಲಿ ದೂರದಲ್ಲಿದೆ. ಇಲ್ಲಿನ ಪ್ರಾಚೀನ ಅವಶೇಷಗಳು, ಗುಡಿಗೋಪುರಗಳು ಈಗ ನಾಶವಾಗಿ ಹೋಗಿವೆ ಆದರೆ ಚಾಲುಕ್ಯರ ಕಾಲದಲ್ಲಿ ಕಟ್ಟಿದ ಎರಡು ಕೆರೆಗಳು ಮಾತ್ರ ಇಂದಿಗೂ ಕಾಣಿಸುತ್ತವೆ. ಹಲವು ಶಿವಾಲಯಗಳು ಮಸೀದಿಗಳಾಗಿವೆ. ಹಿಂದೂ ವಿಗ್ರಹಗಳು ಪುಡಿ ಪುಡಿಯಾಗಿ ಬೀದಿ ಬೀದಿಗಳಲ್ಲಿ ಬಿದ್ದಿವೆ. ಜೇಡರ ದಾಸಿಮಯ್ಯನು ಸ್ಥಾಪಿಸಿದ ನಾಗಲಿಂಗೇಶ್ವರ ದೇವಾಲಯ ಅದರ ಮುಂದಿನ ವೃಷಭಮೂರ್ತಿ ಇಂದು ಅತ್ಯಂತ ದುಸ್ಥಿತಿಯಲ್ಲಿದೆ.

ಆಂಧ್ರ ಸರ್ಕಾರದವರು ಈಗಲೂ ಮನಸ್ಸು ಮಾಡಿ ಅಲ್ಲಿನ ಪ್ರಾಚೀನ ದೇವಾಲಯಗಳನ್ನು ಸಂರಕ್ಷಿಸಿದರೆ ಕರ್ನಾಟಕದ ಇತಿಹಾಸಕ್ಕೆ ಮಹೋಪಕಾರವನ್ನು ಮಾಡಿದಂತಾಗುತ್ತದೆ."

ಪಶ್ಚಿಮದ ಚಾಲುಕ್ಯರು ಕಲ್ಯಾಣವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಳ್ಳುವ ಮುಂಚೆ ಪೊಟ್ಟಲಗೆರೆಯೇ ಅವರ ರಾಜಧಾನಿಯಾಗಿತ್ತು. ಪೊಟ್ಟಲಗೆರೆ, ಜಯಸಿಂಹ, ಸುಗ್ಗಲಾದೇವಿ, ಮತ್ತು ಜೇಡರ ದಾಸಿಮಯ್ಯ, ಸಮಯ ಪರೀಕ್ಷೆ ಬರೆದ ಬ್ರಹ್ಮಶಿವ ಎಲ್ಲರೂ ಈ ಪೊಟ್ಟಲಗೆರೆಯವರೆಂದು ಶಾಸ್ತ್ರಿಗಳು ಅನೇಕ ಸಾಕ್ಷಾಧಾರಗಳಿಂದ ಖಚಿತಪಡಿಸಿದ್ದಾರೆ. ಇತಿಹಾಸಕಾರರಾದ 'ಫ್ಲೀಟ್' ಅವರ ಅಭಿಪ್ರಾಯಗಳನ್ನು ತಮ್ಮ ನಿರ್ಣಯಾದಿಗಳಿಗೆ ಹೊಂದಿಸಿಕೊಂಡಿದ್ದಾರೆ. ಪೊಟ್ಟಲಗೆರೆಯ ಪ್ರಾಚೀನ ಶಾಸನವನ್ನು ಲೇಖನದ ಕೊನೆಯಲ್ಲಿ ಉದಾಹರಿಸಿದ್ದಾರೆ ಅದರ ಪಾಠವೂ ಅಲ್ಲಿ ದೊರೆಯುತ್ತದೆ (ಶರಣಸಾಹಿತ್ಯ ಸಂ. ೨ - ಸಂ. 10).

ನಾಟಕಕಾರರಾಗಿ: ಕಾವ್ಯ, ಸಂಶೋಧನೆ, ಇತಿಹಾಸ, ಗ್ರಂಥಸಂಪಾದನೆ, ವ್ಯಕ್ತಿ ಚಿತ್ರಣ ಮುಂತಾದ ಸಾಹಿತ್ಯ ಪ್ರಕಾರಗಳ ಜೊತೆ ಶಾಸ್ತ್ರಿಗಳು ಎರಡು ನಾಟಕಗಳನ್ನು ಬರೆದಿದ್ದಾರೆ. ಎರಡೂ ನಾಟಕಗಳು ಐತಿಹಾಸಿಕ ವಸ್ತುಗಳನ್ನು, ಕುರಿತಾಗಿದೆ. 'ಕರ್ನಾಟಕ ವಿಜಯ' ಶಾಸ್ತ್ರಿಗಳ ಮೊದಲನೆ ನಾಟಕ, ಎರಡನೆಯದು "ಕೆಳದಿ ರಾಣಿ ಚನ್ನಮ್ಮಾಜಿ', ಕೀರ್ತನಕಲೆ ಅಥವಾ ಕಥಾ ಕಾಲಕ್ಷೇಪ ಎರಡೂ ಸಹ ಪಾತ್ರಗಳ ಮೂಲಕವೇ ಕಥೆಯನ್ನು ಸಂವಹನಗೊಳಿಸಬೇಕಾದಂಥವು, ಸಂಭಾಷಣೆ, ಅಭಿನಯ ಎರಡೂ ಬೆರೆತು ಏಕಪಾತ್ರಭಿನಯದಂತೆ ಕಥೆ ನಡೆಸಿದರೆ ಪ್ರೇಕ್ಷಕರಿಗೆ ಆಸಕ್ತಿಯುಂಟಾಗುತ್ತದೆ. ಧ್ವನಿಯ ಏರಿಳಿತಗಳಿಂದ ಕಥಾವಸ್ತುವಿನ ಎಲ್ಲ ಪಾತ್ರಗಳನ್ನು ತಾವೇ ಅಭಿನಯಿಸಬೇಕಾಗುತ್ತದೆ. ಸಾಮಾನ್ಯವಾಗಿ ಕಥಾಕಾಲಕ್ಷೇಪದ ಕಥಾವಸ್ತುಗಳು ನವರಸಭರಿತವಾಗಿಯೇ ಸಂಯೋಜಿಸಲ್ಪಟ್ಟಿರುತ್ತವೆ. ಸಂಗೀತ, ಪಕ್ಕವಾದ್ಯಗಳ ಮೇಳ ಎಲ್ಲವೂ ನಾಟಕದ ಪ್ರಬಂಧಕ್ಕೆ ನೆರವಾಗಿ ನಿಲ್ಲುತ್ತವೆ. ಶಾಸ್ತ್ರಿಗಳು ಪ್ರತಿಭಾ ಸಂಪನ್ನ ಕೀರ್ತನಕಾರರಾದ್ದರಿಂದ ನಾಟಕರಚನೆ ತುಂಬಾ ಪ್ರಿಯವಾದ ಪ್ರಕಾರವಾಗಬೇಕಿತ್ತು, ಆದರೇಕೋ ಶಾಸ್ತ್ರಿಗಳು ಎರಡು ನಾಟಕಗಳಿಗೇ ತೃಪ್ತರಾಗಿಬಿಟ್ಟರು.

ತಮ್ಮ ಗುರು ಪಿ.ಆರ್. ಕರಿಬಸವಶಾಸ್ತ್ರಿಗಳ ಗುರು ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳ ಬಗ್ಗೆ ಬರೆಯುವಾಗ ಅವರ ಎಲ್ಲ ಏಳುನಾಟಕಗಳ ಸಂಕ್ಷಿಪ್ತ ವಿಮರ್ಶೆಯನ್ನು ಮಾಡಿದರು. ಸಮಕಾಲೀನ ರಂಗಭೂಮಿಯನ್ನು ಕುರಿತು ಅಲ್ಲಲ್ಲಿ ಬರೆಯುತ್ತಲೇ ಇದ್ದರು. ಕನ್ನಡ ನಾಟಕಗಳ ಹಿರಿಮೆಯನ್ನು ಕುರಿತು ಎಂಟು ಕಂದಪದ್ಯಗಳನ್ನು ರಚಿಸಿದರು.

"ಕನ್ನಡ ನಾಟಕ ಕಲೆಯಿಂ
ಚೆನ್ನಹ ಕರ್ನಾಟಕ ರಾಜ್ಯ ಮೆಸೆಯಲಿ ಜಪದಿಂ
ಸನ್ನುತ ಕವಿ ಪಂಡಿತರಿಂ
ಮನ್ನಣೆಯಂ ಪಡೆಯಲೆಮ್ಮ ನಾಟಕಲೋಕಂ"

ಶಿವಮೂರ್ತಿಶಾಸ್ತ್ರಿಗಳ ಹಾರೈಕೆಯಿಂದ ಕನ್ನಡ ರಂಗಭೂಮಿ ಬಹುಮುಖವಾಗಿ ಬೆಳೆಯಿತು. ಕನ್ನಡ ರಂಗಭೂಮಿಯ ಇತಿಹಾಸವನ್ನು ಬರೆಯುವವರು ಶಾಸ್ತ್ರಿಗಳ ಬರಹಗಳನ್ನು (ನಾಟಕ ಕುರಿತಾದ) ಅವರ ಎರಡು ನಾಟಕಗಳನ್ನು ಒಳಗು ಮಾಡಿಕೊಳ್ಳದೇ ಇದ್ದರೆ ಆ ಪ್ರಬಂಧಕ್ಕೆ ಪೂರ್ಣತ್ವ ದೊರಕಲಾರದು.

## 'ಗದ್ಯಶೈಲಿ'

"ಪಂಡಿತರತ್ನ' ಶಿವಮೂರ್ತಿ ಶಾಸ್ತ್ರಿಗಳು ಪ್ರಬಂಧಿಸಿದ ಬರಹಳಲ್ಲಿ ವೀರಶೈವ ಸಾಹಿತ್ಯದ್ದೇ ಸಿಂಹಪಾಲು, ಅವರು ಪ್ರಕಟಿಸುತ್ತಿದ್ದ "ಶರಣಸಾಹಿತ್ಯದಿಂದಾಗಿ ಅಂತಹ ಪ್ರಬಂಧ ರಚನೆ ಅನಿವಾರ್ಯವಾಗಿತ್ತು. ಶರಣಸಾಹಿತ್ಯದಷ್ಟೇ ಆಳವಾಗಿ ಸಂಸ್ಕೃತ ಮತ್ತು ಜೈನಕಾವ್ಯಗಳನ್ನು ಅಧ್ಯಯನ ಮಾಡಿದ್ದರು. ಇತರ ಓದನ್ನು ಕನ್ನಡ ಸಾಹಿತ್ಯದ ರಚನೆಗೆ ಬೆಂಬಲ ಮಾಡಿಕೊಳ್ಳುತಿದ್ದರು. ವೀರಶೈವ ಮತದ ರಾಜವಂಶಗಳ ಬಗ್ಗೆ ಇನ್ನಿಲ್ಲದ ಆಸ್ಥೆ ವಹಿಸಿ ಅನೇಕ ಪ್ರಬಂಧಗಳನ್ನು ರಚಿಸಿದರು. ಕಿತ್ತೂರುಚನ್ನಮ್ಮ, ಕೆಳದಿ ರಾಣಿಚನ್ನಮ್ಮ ಆಕೆಯ ಸೊಸೆ ವೀರಮ್ಮಾಜಿ, ಬೆಳವಡಿಮಲ್ಲಮ್ಮ ಮುಂತಾದ ರಾಣಿಯರನ್ನು ಕುರಿತು ಬರೆಯುವಾಗ ತಾವೂ ಪುಳಕಿತರಾಗಿ ಓದುಗರನ್ನು ಪುಳಕಗೊಳಿಸುತ್ತಿದ್ದರು. ಶಾಸ್ತ್ರಿಗಳ ಶೈಲಿ ಚೇತೋಹಾರಿಯಾದ ಶೈಲಿಯಾಗಿತ್ತು. ಅವರ ಗದ್ಯ ಎ.ಆರ್. ಕೃಷ್ಣಶಾಸ್ತ್ರಿಗಳ ಶೈಲಿಯಷ್ಟೇ ಸಂಗ್ರಹ ಗುಣವನ್ನು ಹೊಂದಿರುತ್ತಿತ್ತು. ಶರಣಸಾಹಿತ್ಯ ಮಾಸಿಕ ಪುಟ ಮಿತಿಯನ್ನು ಅನುಸರಿಸಿಯೇ ಅವರ ಲೇಖನಗಳು ಹಿರಿದು-ಕಿರಿದು ಆಗುತ್ತಿದ್ದವು. ಅವರ ರಚನಾಶೈಲಿಯ ಮಾದರಿಯಾಗಿ 'ಬೆಳವಡಿಮಲ್ಲಮ್ಮ' ವ್ಯಕ್ತಿ ಚಿತ್ರಣವನ್ನು ನೋಡಬಹುದು. ಸಂಕ್ಷಿಪ್ತತೆಯೇ ಪ್ರಬಂಧದ ಗುಣವೆನ್ನುವಂತೆ ಬೆಳವಡಿಮಲ್ಲಮ್ಮನನ್ನು ಕುರಿತಾದ ಪರಿಚಯ ಲೇಖನವಿದೆ. ಅನಗತ್ಯವಾಗಿ ಒಂದು ಚಿಕ್ಕ ಪದವನ್ನು ಬಳಸದಂತಹ ಪ್ರಬುದ್ಧ ಬರವಣಿಗೆ ಶಾಸ್ತ್ರಿಗಳಿಗೆ ಸಿದ್ಧಿಸಿತ್ತು. ಅವರ ಮಾತಿನಲ್ಲಿಯೇ ಬೆಳವಡಿಮಲ್ಲಮ್ಮನ ಕಥೆಯನ್ನು ಓದಿದರೆ ಶಾಸ್ತ್ರಿಗಳ ಗದ್ಯಶೈಲಿಯ ಪರಿಚಯವಾಗುವುದು.

ಈಗಿನ ಮೈಸೂರು ರಾಜ್ಯದ ಬೆಳಗಾವಿ ಜಿಲ್ಲಾ ಬೈಲಹೊಂಗಲಕ್ಕೆ ಅನತಿ ದೂರದಲ್ಲಿ ಬೆಳವಡಿ' ಎಂಬ ಹಳ್ಳಿಯೊಂದಿದೆ. ಅದನ್ನು ನೋಡಿದರೆ ಅದು ಹಿಂದೆ ಒಂದು ರಾಜಧಾನಿಯಾಗಿತ್ತೆಂದು ತಿಳಿಯಪಡಿಸುತ್ತದೆ. ತನ್ನ ಗತ ವೈಭವದ ಕೋಟೆ ಕೊತ್ತಳಗಳಿಂದ ಕ್ರಿ.ಶ. 17ನೇ ಶತಕದ ಉತ್ತರಾರ್ಧದಲ್ಲಿ 360 ಹಳ್ಳಿಗಳ ಒಡೆತನವುಳ್ಳ ಬೆಳವಡಿ ನಾಡಿಗೆ ಈಶಪ್ರಭು ಅರಸನಾಗಿದ್ದನು. ಇವನ ಪ್ರೀತಿಯ ರಾಣಿಮಲ್ಲಮ್ಮ, ಇವಳು ಮಲೆನಾಡಿನ ಸ್ವಾದಿಯರಾಜ ಮಧುಲಿಂಗನಾಯಕನ ಮಗಳು. ಕ್ರಿ.ಶ. 1674 ರಲ್ಲಿ ಈಕೆ ಜೀವಿಸಿದ್ದಂತೆ ಇತಿಹಾಸದ ದಾಖಲೆಗಳಿವೆ. ಈಶಪ್ರಭುವೂ ರಾಣಿ ಮಲ್ಲಮ್ಮನೂ ಶಿವಾಜಿ ಮಹಾರಾಜನೊಡನೆ ಯುದ್ಧ ಮಾಡಿದ ಸಾಹಸ ಕಥೆಯನ್ನು ಇಲ್ಲಿ ಓದಬಹುದು. ಕವಿಖ್ಯಾತ ರಾಜರಾಣಿಯರು, ವೀರಶೈವ ಧರ್ಮಾನುಯಾಯಿಗಳೆಂಬುದನ್ನು ಹೇಳಬೇಕಾಗಿಲ್ಲವಷ್ಟೆ.

ಪರಾಕ್ರಮವೇ ಮೂರ್ತಿವೆತ್ತು ಮೈದೋರಿದಂತಿದ್ದ ಸ್ವಾದಿಯ ಮಧುಲಿಂಗನಾಯಕನ ನೆಚ್ಚಿನ ಕುವರಿ, ಮಲ್ಲಮ್ಮಾಜಿ, ಬೆಳವಡಿಯ ಈಶಪ್ರಭು ರಾಯನ ಮೆಚ್ಚಿನ ಮಹಾರಾಣಿ. ಅನುರೂಪ ದಾಂಪತ್ಯ ಮಿಲನವು ವಿಧಿಯ ಹಣೆಯ ಬರಹದಲ್ಲಿಯೇ ಇಲ್ಲವೆನ್ನುವ ಸಾಮಾನ್ಯ ವಿಧಾನಕ್ಕೆ ಈ ದಂಪತಿಗಳ ಉದಾಹರಣೆಯೂ ಅಪವಾದವಾಗಿತ್ತು. ಬೆಳೆಯ ಸಿರಿಯು ಮೊಳಕೆಯಲ್ಲಿ ಎಂಬಂತೆ ಚಿಕ್ಕಂದಿನಲ್ಲಿಯೇ ಅಸಾಧಾರಣವಾದ ಧೈರ್ಯವೂ ಅನುಪಮವಾದ ಶೌರ್ಯವೂ, ವಿಲಕ್ಷಣವಾದ ಬುದ್ಧಿಮತ್ತೆಯೂ ಇವಳಲ್ಲಿ ಕಂಡುಬರುತ್ತಿದ್ದವು. ನಾಯಕನು ನಿಯೋಜಿಸಿದ ಗುರುಗಳ ಸಮ್ಮುಖದಲ್ಲಿ ಅಣ್ಣನಾದ ಸದಾಶಿವನಾಯಕರೊಡನೆ ಈಕೆಯ ವಿದ್ಯಾವ್ಯಾಸಂಗಕ್ಕೆ ಮೊದಲಾಯಿತು. ಇವರೊಡನೆ ರಾಜ್ಯದಲ್ಲಿಯ ಮನೆಮನೆಯರ ಮಕ್ಕಳೂ ಇದ್ದರು. ಮಲ್ಲಮ್ಮಾಜಿಯ ಅಪೂರ್ವ ಪ್ರತಿಭೆಯ ಮುಂದೆ ಒಮ್ಮೊಮ್ಮೆ ಸಹಪಾಠಿಗಳು ತಲೆ ತಗ್ಗಿಸಬೇಕಾಗಿತ್ತು. ವಿದ್ಯಾರ್ಥಿಗಳಲ್ಲಿ ವಿದ್ಯಾಧ್ಯಯನದಲ್ಲಿ ಅವಳೇ ಮುಂದಾಗಿದ್ದಳು. ಶೈಶವವನ್ನು ಪೂರೈಸಿ ಮಲ್ಲಮ್ಮಾಜಿಯು ಕ್ಷಾತ್ರ ವಿದ್ಯೆಗಳಲ್ಲಿಯೂ ಕನ್ನಡಸಂಸ್ಕೃತ ಮೊದಲಾದ ಭಾಷೆಗಳಲ್ಲಿಯೂ ಪಾರಂಗತಳಾಗಿ ಪಾಂಡಿತ್ಯವನ್ನು ಸಂಪಾದಿಸಿದಳು. ಪ್ರೌಢವಯಸ್ಕಳಾದ ಮೇಲೆ ನಾಯಕನು ಸ್ವಯಂವರವನ್ನು ಸಾರಿದನು. ಸ್ವಯಂವರದ ಪಣವನ್ನು ಗೆದ್ದು ಕೂಡಿದ ರಾಜಕುಮಾರರಲ್ಲಿ ಬೆಳವಡಿಯ ಈಶಪ್ರಭುರಾಯನು ಜಯಶಾಲಿಯಾದನು. ಮಲ್ಲಮಾಜಿಯ ವಿವಾಹಮಾಲೆಯು ಈಶಪ್ರಭುವಿನ ಕೊರಳನ್ನಲಂಕರಿಸಿತು. ಜಯಲಕ್ಷ್ಮಿಯು ಅವನನ್ನು ಕೈಹಿಡಿದಳು. ಕರ್ನಾಟಕದಲ್ಲಿ ಭಾಗ್ಯಶಾಲಿಯೆನಿಸಿದನು.

ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದೆಂಬಂತೆ ಬೆಳವಡಿಯು ಒಂದು ಸಣ್ಣ ಸಂಸ್ಥಾನವಾದರೂ ಯಾರಿಗೂ ಸೊಪ್ಪು ಹಾಕದೆ, ತನ್ನ ಸ್ವತ್ತನ್ನು ಕಾಯ್ದುಕೊಂಡಿತ್ತು. ಬೆಳವಡಿಯ 'ರಟ್ಟಧ್ವಜವು ಸ್ವತಂತ್ರತೆಯಿಂದ ತಲೆಯೆತ್ತಿ ಮೆರೆಯುತ್ತಿತ್ತು. ಆದರೆ ಆಕಾಶದಲ್ಲಿ ಉನ್ನತವಾಗಿ ಹಾರಾಡುತ್ತಿದ್ದ ಆ ಧ್ವಜವನ್ನು ಹಾಗೆಯೇ ಹಾರಿಸಿ ಬಿಡುವುದೋ ಎನ್ನುವಂತೆ, ಭೀಕರವಾದ ಬಿರುಗಾಳಿಯೊಂದು ಬೀಸಿತು. ದಕ್ಷಿಣದ ವಿಜಯ ಯಾತ್ರೆಯಿಂದ ಹಿಂತಿರುಗುವಾಗ ಛತ್ರಪತಿ ಶಿವಾಜಿಯು, ತನ್ನ ದಂಡಿನೊಡನೆ ಈ ಬೆಳವಡಿಯ ಬಳಿ ಬೀಡುಬಿಟ್ಟನು. ಈ ಸುದ್ದಿಯನ್ನು ತಿಳಿದು ಹಿಂದೂ ಜನರ ಶಿಷ್ಟಾಚಾರ ಪದ್ಧತಿಯಂತೆ ಅತಿಥಿ ಸತ್ಕಾರದ ವ್ಯವಸ್ಥೆಗಾಗಿ ಈಶ್ವರ ಪ್ರಭುರಾಯನು ಏರ್ಪಾಟು ಮಾಡಿಸುವುದರಲ್ಲಿದ್ದನು. ಅಷ್ಟರಲ್ಲಿಯೇ ಒಂದು ಉದ್ಧಟತನ ನಡೆದು ಆತಿಥ್ಯದ ಬದಲು ಯುದ್ಧದ ಸಿದ್ಧತೆಗಳು ನಡೆಯಬೇಕಾಯಿತು. ಶಿವಾಜಿಯ ದಂಡಿನವರು, ಹಾಲಿನ ಸಲುವಾಗಿ ಬೆಳವಡಿಯ ಗ್ರಾಮದ ಸುತ್ತಮುತ್ತಲಿನ ಆಕಳುಗಳನ್ನು ಹೊಡೆದುಕೊಂಡು ಹೋದರು. ಪ್ರಭುವಿನ ಅಪ್ಪಣೆಯಂತೆ ಅವುಗಳನ್ನು ಬಿಡಿಸಿಕೊಂಡು ಬರಲು ಹೋದ ಸೇನಾನಾಯಕನಿಗೆ ಸಫಲತೆ ದೊರೆಯಲಿಲ್ಲ. ಆಗ ಮಹಾರಾಣಿ ಮಲ್ಲಮ್ಮಾಜಿ ಸ್ವತಃ ತನ್ನ ಸ್ತ್ರೀ ಸೇನೆಯನ್ನು ತೆಗೆದುಕೊಂಡು ಹೋಗಿ ಮರಾಠರನ್ನು ಸೋಲಿಸಿ ವಿಜಯಶಾಲಿಯಾಗಿ ಮರಳಿ ಗ್ರಾಮ ಗ್ರಾಮಗಳಲ್ಲಿ ವಿಜಯ ಧ್ವಜವನ್ನು ಮೆರೆಯಿಸಿದಳು. ಕೆಚ್ಚೆದೆಯ ಕನ್ನಡತಿಯರ ಕಡುಗಲಿತನವನ್ನು ಕಂಡು ಶಿವಾಜಿ ಮಹಾರಾಜನು ಬೆರಗಾಗಿ ಹೋದನು. ಶಿವಾಜಿಯ ಈ ಅಪಜಯವೇ ಮುಂದೆ 'ಬೆಳವಡಿಯ' ಕೋಟೆಗೆ ಮರಾಠರ ಮುತ್ತಿಗೆ ಬೀಳಲು ಮೂಲವಾಯಿತು.

ರಣಧೀರ ರಟ್ಟವಂಶದ ರಾಜನಾದ ಈಶ್ವರ ಪ್ರಭುರಾಯನು ಕೋಟೆಯ ಬಾಗಿಲುಗಳನ್ನು ಮುಚ್ಚಿಸಿ ಸಮರಕ್ಕೆ ಸಿದ್ಧನಾದನು. ಶಿವಾಜಿಯ ಸೇನೆ ಸುತ್ತುವರಿಯಿತು. ಬೆಳವಡಿಯ ಕೋಟೆಗೆ ಮುತ್ತಿಗೆ ಬಿದ್ದಿತು. ಇದೇನು ಮಹಾಕಾರ್ಯವೆಂದು ತಿಳಿದು ಅಲಕ್ಷ್ಯತನದಿಂದಿದ್ದ ಶಿವಾಜಿಯ ಎಣಿಕೆ ತಪ್ಪಾಯಿತು. ಎಷ್ಟು ದಿನಗಳಾದರೂ ಕೋಟೆಯು ಕೈವಶವಾಗುವ ಲಕ್ಷಣಗಳು ಕಾಣಿಸಲಿಲ್ಲ. ಸ್ವಾತಂತ್ರ್ಯ ಪ್ರಿಯರ ಶೌರ್ಯದ ಮುಂದೆ ವಿಜಯೋನ್ಮಾದವು ಮುಗ್ಗರಿಸಿತು. ಕೊನೆಗೆ ಕಪಟದಿಂದ ಒಳನುಗ್ಗಬೇಕಾಯಿತು. ಆಗ ಬೆಳವಡಿಯವರಿಗೂ ಮರಾಠರಿಗೂ ಕೈಗೆ ಕೈ ಹತ್ತಿ ಘನಘೋರ ಕದನವಾಗಿ ಈಶಪ್ರಭುವು ಪ್ರಾಣಾಂತಕ ಗಾಯಗಳಾಗಲು, ಮೃತ್ಯುಶಯ್ಯೆಯಲ್ಲೊರಗಿದನು. ಒಡೆಯನಿಲ್ಲದ ಸೈನ್ಯಪಡೆ ಕಂಗೆಟ್ಟು ಕಂಡಕಡೆಗೆ ಓಡತೊಡಗಿತು. ಈ ವಾರ್ತೆ ತಿಳಿದೊಡನೆ ಮಲ್ಲಮ್ಮನು ತನ್ನ ಚಿಕ್ಕ ಮಗುವನ್ನು ರಕ್ಷಕರಿಗೊಪ್ಪಿಸಿ ವೀರಾವೇಶದಿಂದ ರಣಾಂಗಣದತ್ತ ಧಾವಿಸಿದಳು. ತೊಟ್ಟಿಲು ತೂಗುತ್ತಿದ್ದ ಮಾತೆಯ ಕೈ ಖಡ್ಗವನ್ನು ತೊಟ್ಟಿತು. ರಾಣಿಯ ಆಗಮನದಿಂದ ಬೆಳವಡಿಯ ಭಟರಲ್ಲಿ ಮತ್ತೆ ಸ್ಫೂರ್ತಿಯ ಸಂಚಾರವಾಯಿತು. ಕಾಲ್ತೆಗೆದಿದ್ದ ಕನ್ನಡವೀರರು ಮತ್ತೆ ಕಾಲೂರಿದರು. ತುಸು ಹೊತ್ತಿನಲ್ಲಿಯೇ ಶತ್ರುಗಳನ್ನು ಸದೆ ಬಡಿದು ಹೊಡೆದೋಡಿಸಿ, ಕೋಟೆಯ ಬಾಗಿಲುಗಳನ್ನು ಭದ್ರಗೊಳಿಸಿ ಪತಿಯ ಬಳಿಗೆ ಬಂದು ಸೇರಿದಳು. ರಾಣಿಯ ವಿಜಯದಿಂದ ವೀರಸ್ವರ್ಗಾರೋಹಣ ಮಾಡುವುದರಲ್ಲಿದ್ದ ರಾಯನಿಗೆ ಪರಮಾನಂದವಾಯಿತು. ರಾಜ್ಯದ ಸ್ವಾತಂತ್ರ್ಯವನ್ನು ಕಾಪಾಡುವಂತೆ ಹೇಳಿ ಹರಸಿ ಹರನಾಮಸ್ಮರಣೆಯೊಂದಿಗೆ ಕೈಲಾಸಕ್ಕೆ ಪಯಣ ಬೆಳೆಯಿಸಿದನು. ಕನ್ನಡತಿಯ ಪರಾಕ್ರಮವನ್ನು ಮತ್ತೊಮ್ಮೆ ಶಿವಾಜಿ ಮಹಾರಾಜನು ಮನಗಂಡನು ಕನ್ನಡ ರಾಣಿಯ ಕಲಿತನಕ್ಕೆ ತಲೆದೂಗಿದನು.

ಶಿವಾಜಿಗೆ ದಿಗ್ಭ್ರಮೆಯಾಯಿತು. ಹೆಣ್ಣಿಗೆ ಸೋತು ಸುಮ್ಮನಿರುವುದೆ? ಅದೂ ಬೀಳಾದ ಕರ್ನಾಟಕದ ಒಂದು ಸಣ್ಣ ಸಂಸ್ಥಾನದಲ್ಲಿ? ಎಂದಿಗೂ ಇಲ್ಲ. ಮುತ್ತಿಗೆಯ ಕೆಲಸವು ಮತ್ತೆ ಮುಂದುವರೆಯಿತು. ಇಪ್ಪತ್ತೇಳು ದಿನಗಳು ಕಳೆದವು, ಸಾಮಗ್ರಿಗಳ ಸಂಗ್ರಹವು ತೀರಿಹೋಯಿತು. ಕೋಟೆಯನ್ನು ಉಳಿಸಿಕೊಳ್ಳುವುದು ಇನ್ನು ಸಾಧ್ಯವಿಲ್ಲವೆಂದು ಕಂಡು ಬರಲು ಆ ವೀರ ರಾಣಿಯು ಕೋಟೆಯ ಬಾಗಿಲುಗಳನ್ನು ತೆಗೆದು ತನ್ನ ಅನುಯಾಯಿಗಳೊಡನೆ ಹೊರಬಂದು ಶಿವಾಜಿಯ ದಂಡಿನ ಮೇಲೆ ನುಗ್ಗಿ ಎದುರು ಬಂದವರನ್ನು ಹೊಡೆದುಹಾಕುತ್ತ ಮುನ್ನುಗ್ಗಿದಳು. ಸೋಲೆಂಬುದನ್ನು ಅರಿಯದ ಆ ವೀರ ರಾಣಿಯ ಧೈರ್ಯವು ಗೆಲುವು ಅಸಾಧ್ಯವೆಂದು ತೋರಿದಾಗಲೂ ಕುಗ್ಗಲಿಲ್ಲ. ಅದು ತನ್ನ ಮನದಾಳದಿಂದ ಹೊರಹೊಮ್ಮಿತು. ಮರಾಠರು ಮಲ್ಲಮ್ಮಾಜಿಯ ನಿಜರೂಪವನ್ನು ಕಂಡರು. ಅಂದು ಆಕೆಯ ವಿಲಕ್ಷಣವಾದ ವಿರಾಟ ಶೌರ್ಯ ಸೂರೆಯಾಗಿ ಹೋಯಿತು. ಅಪಾರವಾದ ಸೇನಾಸಾಗರವೆಂದು ಈ ಹಿಡಿ ಜನರು ಈಡೇ? ಹೊತ್ತು ಹೋದಂತೆ ಮಲ್ಲಮ್ಮಾಜಿಯ ಅನುಯಾಯಿಗಳು ಕಡಿಮೆಯಾಗತೊಡಗಿ ಕಡೆಗೆ ಕೇವಲ ಬೆಂಗಾವಲಿನವರು ಮಾತ್ರ ಉಳಿದರು. ಶಿವಾಜಿಯ ದಳವಾಯಿಯಾದ ದಾದಾಜಿಯು ಕುದುರೆಯ ಹಿಂಗಾಲನ್ನು ಕಡಿದು ಹಾಕಲು ರಾಣಿಯು ಇನ್ನಷ್ಟು ಅಸಹಾಯಕಳಾದಳು. ಆಗಲೂ ಕೂಡ ಪಾದಚಾರಣಿಯಾಗಿಯೇ ಅವಳು ಕಾದಲನುವಾದಳು. ಆದರೆ ಅಷ್ಟರಲ್ಲಿಯೇ ಅವಳಿಗೆ ತೀವ್ರಗಾಯಗಳಾಗಿ ಮೂರ್ಛಿತಳಾದಳು. ಆ ಅವಸ್ಥೆಯಲ್ಲಿಯೇ ದಾದಾಜಿಯು ಆಕೆಯನ್ನು ಸೆರೆಹಿಡಿದು

ಡೋಲಿಯಲ್ಲಿ ಹಾಕಿಕೊಂಡು ಶಿವಾಜಿಯ ಡೇರೆಯತ್ತ ನಡೆದನು. ಆದರೂ ಕನ್ನಡ ರಾಣಿಯ ಕಡುಗಲಿತನಕ್ಕೆ ತಲೆದೂಗಿದನು ಆ ಮರಾಠ ವೀರನು.

ಆ ವೀರ ರಾಣಿಯೊಡನೆ ಶಿವಾಜಿಯು ಉಚಿತ ಮರ್ಯಾದೆಯಿಂದ ನಡೆದುಕೊಂಡು ಮನ್ನಿಸಿದನು. ಉಭಯತರಲ್ಲಿಯೂ ಸನ್ಮಾನ್ಯ ಒಪ್ಪಂದವಾಯಿತು. ಬೆಳವಡಿಯ ಪ್ರಾಂತ್ಯದ ಪ್ರತಿಯೊಂದು ಗ್ರಾಮದಲ್ಲಿಯೂ ಈ ಯುದ್ಧದ ಸ್ಮಾರಕವಾಗಿ ನಡಿಸಿರುವ ವೀರಗಲ್ಲುಗಳನ್ನು ಈಗಲೂ ಕಾಣಬಹುದು. ಮುಂದೆ ತನ್ನ ಮಗುವಿನ ಪರವಾಗಿ ಮಲ್ಲಮ್ಮಾಜಿಯು ರಾಜ್ಯ ಸೂತ್ರಗಳನ್ನು ವಹಿಸಿ, ಒಳ್ಳೆಯ ಧರ್ಮದಿಂದ ಆಳಿ ಧರ್ಮ ರಾಜ್ಯವನ್ನು ಸ್ಥಾಪಿಸಿದಳು. ಸ್ತ್ರೀ ಸಮಾಜದ ಉನ್ನತಿಗಾಗಿಯೂ ತನ್ನ ಆಳ್ವಿಕೆಯಲ್ಲಿ ಕೆಲವು ವಿಧದ ಕಾರ್ಯಚಟುವಟಿಕೆಗಳನ್ನು ಕೈಗೊಂಡಿದ್ದಳು. ಬೆಳವಡಿಯಲ್ಲಿ ಶುದ್ಧ ಕಾರ್ತೀಕ ಪಂಚಮಿ ದಿವಸ ನಡೆಯುತ್ತಿದ್ದ ಗೌರೀ ಮಹೋತ್ಸವವು ಅವುಗಳಲ್ಲಿ ಒಂದಾಗಿತ್ತು. ಮಲ್ಲಮ್ಮಾಜಿಯು ಯಾತ್ರೆಗೆ ಹೋದ ಸಂಧಿಯನ್ನು ಸಾಧಿಸಿ ಬೆಳವಡಿಯ ಮೇಲೆ ಏರಿಬಂದಿದ್ದ ಸವಣೂರ ನವಾಬನ ಸಮಾಚಾರವನ್ನು ಸಮಯಕ್ಕೆ ಸರಿಯಾಗಿ ಬಂದು ತೆಗೆದುಕೊಂಡಳು. ಮಂಗಳಗಟ್ಟಿಯ ಹತ್ತಿರ ಮಂಗಳಾರತಿಯಾಗಿ ನವಾಬನು ಫಲಾಯನ ಹೇಳಬೇಕಾಯಿತು. ಇಂತಹ ಅದ್ವಿತೀಯ ತೇಜಪುಂಜದ ಕನ್ನಡ ರಾಜ್ಯಲಕ್ಷ್ಮಿಯ ಓಜಸ್ಸು, ಅಂದು ಅಷ್ಟೊಂದು ಪ್ರಭಾವಶಾಲಿಯಾಗಿತ್ತು. ಪ್ರತಾಪಪೂರ್ಣವಾಗಿತ್ತು. ವೀರಶೈವ ರಾಜರುಗಳ ಚರಿತ್ರೆಯಲ್ಲಿ ಕಾಕತೀಯರ ಮಹಾರಾಣಿ ರುದ್ರಮದೇವಿ, ಕೆಳದಿಯರಾಣಿ ಚನ್ನಮ್ಮಾಜಿ, ಕಿತ್ತೂರರಾಣಿ ಚನ್ನಮ್ಮ, ಇವರುಗಳ ಪಂಕ್ತಿಯಲ್ಲಿ ಬೆಳವಡಿಯ ಮಲ್ಲಮ್ಮ ರಾಣಿಯೂ ಕೂಡ ಸ್ಮರಣಾರ್ಹಳಾಗಿದ್ದಾಳೆ. ಪಾವನ ಶೀಲಳೆನಿಸಿದ್ದಾಳೆ. ಕನ್ನಡಿಗರ ಹೆಮ್ಮೆಯ ಸೋದರಿಯೆನಿಸಿದ್ದಾಳೆ. ಕನ್ನಡ ನಾಡಿನ ಹೆಣ್ಣುಮಕ್ಕಳು ಇಂತಹ ವೀರಧೀರ ಸ್ತ್ರೀಯರ ಜೀವನಾದರ್ಶಗಳನ್ನು ಮುಂದಿಟ್ಟುಕೊಂಡಾಗಲೇ ನಮ್ಮ ನಾಡು ಕಡುಗಲಿಗಳ ಬೀಡಾದೀತು. ಸ್ವತಂತ್ರ ಭಾರತದಲ್ಲಿ ತಲೆಯೆತ್ತಿ ನಿಂತೀತು.

ಶಾಸ್ತ್ರಿಗಳ ಬರವಣಿಗೆಯಲ್ಲಿ ಪ್ರವಚನ ಶೈಲಿ, ಅಥವಾ ಕೀರ್ತನ ಶೈಲಿ ತನ್ನನೆರಳನ್ನು ಚಾಚಿದರೂ ಗದ್ಯದಲ್ಲಿ ಒಂದು ತೆರನಾದ ಸ್ಫೂರ್ತಿಮತ್ತತೆ ದಟ್ಟಗೊಂಡಿರುವುದನ್ನು ಕಾಣಬಹುದು. ಇದೇ ರೀತಿಯಲ್ಲಿ ಕಿತ್ತೂರಚನ್ನಮ್ಮ, ಕೆಳದಿರಾಣಿಚನ್ನಮ್ಮಾಜಿ, ಕಾಕತೀಯ ಮಹಾರಾಣಿ ರುದ್ರಮದೇವಿ ವೀರಮಹಿಳೆಯರನ್ನು ಕುರಿತು ಲೇಖನಗಳನ್ನು ರಚಿಸಿ ತಮ್ಮ ಶರಣ ಸಾಹಿತ್ಯದಲ್ಲಿ ಪ್ರಕಟಿಸಿದ್ದಾರೆ.

ಶಾಸ್ತ್ರಿಗಳಲ್ಲಿ ಲಿಂಗನಿಷ್ಠ ರಾಜಭಕ್ತಿ ಎರಡೂ ಇಷ್ಟುರಿಗೊಂಡಿದ್ದವು. ರಚಿಸಿದ ಕೆಲವು ಗ್ರಂಥಗಳನ್ನು ಮೈಸೂರು ದೊರೆಗಳಿಗೆ ಅರ್ಪಣೆ ಮಾಡಿರುವುದನ್ನು ಗಮನಿಸಬಹುದು. ರಾಜಾಶ್ರಯವಿಲ್ಲದೆ ಕವಿ, ಶೋಭಿಸಲಾರನೆಂಬ ಪರಂಪರಾನುಗತ ನಂಬಿಕೆಗೆ ಇವರೂ ಒಳಗಾಗಿಬಿಟ್ಟಿದ್ದರು. ಶಾಸ್ತ್ರಿಗಳು ತಮ್ಮದೊಂದು ಗ್ರಂಥವನ್ನು ಮಹಾರಾಜರಿಗೆ ಅರ್ಪಿಸಿರುವುದನ್ನು ಈಗಲೂ ಗ್ರಂಥಾಲಯದಲ್ಲಿ ನೋಡಬಹುದು.

"ಕರ್ನಾಟಕ ರತ್ನಸಿಂಹಾಸನಾಧೀಶ್ವರರೂ, ಮೈಸೂರಿನ ರಾಜ್ಯಪಾಲರೂ ವಿಶ್ವವಿಖ್ಯಾತ ತತ್ವಜ್ಞಾನಿಗಳೂ ಅನುಭವಿಗಳೂ ಆದ ಶ್ರೀಮಾನ್ ಮಹಾರಾಜ ಜಯಚಾಮರಾಜ ಒಡೆಯರ್ ಬಹಾದ್ದೂರ್ ಮಹಾಸ್ವಾಮಿಯವರ ದಿವ್ಯಸನ್ನಿಧಿಗೆ ರಾಜ ಭಕ್ತಿ ಪೂರ್ವವಾಗಿ ಸಮರ್ಪಿಸಲ್ಪಟ್ಟಿದೆ."

ಪ್ರಜೆಗಳೇ ಪ್ರಭುಗಳೆಂಬ ಪ್ರಜಾಸರ್ಕಾರದ ಕಾಲದಲ್ಲಿಯೂ ಶಾಸ್ತ್ರಿಗಳು ರಾಜ ಭಕ್ತಿಯ ಗುಂಗಿನಿಂದ ಹೊರ ಬಂದಿರಲಿಲ್ಲ. ಅಧಿಕಾರಾರೂಢ ಮಂತ್ರಿ ಮಹೋದಯರ ಬಗ್ಗೆಯೂ ಶಾಸ್ತ್ರಿಗಳಿಗೆ ಉನ್ನತ ಗೌರವ ಭಾವವಿತ್ತು. ತುಂಬಿದ ಸಭೆಗಳಲ್ಲಿ ಸಭಾವೇದಿಕೆಯಲ್ಲಿರುತ್ತಿದ್ದ ರಾಜಕಾರಣಿಗಳನ್ನು ಮುಕ್ತಕಂಠದಿಂದ ಪ್ರಶಂಸೆ ಮಾಡಿ ಅವರಿಂದ ಒಳ್ಳೆಯ ಕೆಲಸಗಳನ್ನು ಮಾಡಿಸುತ್ತಿದ್ದರು. ಹೊಗಳುವ ಚಟವಿಲ್ಲದಿದ್ದರೆ ಆದಾಯ ಮೂಲವಿಲ್ಲದ ಕನ್ನಡ ಸಾಹಿತ್ಯ ಪರಿಷತ್ತನ್ನು ಎರಡು ಅವಧಿಯಲ್ಲಿ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ನಾವು ಯುವ ಪೀಳಿಗೆಯ ಸಾಹಿತ್ಯ ವಿದ್ಯಾರ್ಥಿಗಳು ಬಿ. ಶಿವಮೂರ್ತಿಶಾಸ್ತ್ರಿಗಳ ಭಟ್ಟಂಗಿ ಚಟವನ್ನು ಲೇವಡಿ ಮಾಡಿ ಹಿಂದುಗಡೆ ಅವರ ಬಿರುದು 'ಕೀರ್ತನಕೇಸರಿ' ಎಂಬುದನ್ನು ತಿರುಚಿ "ಕೀರ್ತನಕ್ಕೇಸರಿ' ಎಂದು ಮಾತಿನ ಸೂತಕಕ್ಕೆ ಈಡಾದದ್ದೂ ಉಂಟು. ಕನ್ನಡ ನಾಡಿನ ಪ್ರಾಚೀನ ಶಿಲ್ಪಕಲಾವೈಭವವನ್ನು ನೋಡಲು ಬಳ್ಳಿಗಾವೆಯ ಮಧುಕೇಶ್ವರ ದೇವಾಲಯ ಪ್ರಶಸ್ತವಾಗಿದೆ. ಪ್ರಾಚೀನ ಬೌದ್ಧರ ನೆಲೆಯಾಗಿದ್ದ ಬನವಾಸಿ "ವೈಜಯಂತಿ' ಪುರವೆಂದೇ ಪ್ರಸಿದ್ಧಿ ಪಡೆದಿತ್ತು. ಗ್ರೀಕ್ ಪ್ರವಾಸಿ, ಟಾಲೆಮಿಯು ತನ್ನ ಜಿಯಾಗ್ರಫಿ ಗ್ರಂಥದಲ್ಲಿ ವೈಜಯಂತಿ ಪುರವನ್ನು ಬಿಜಾಂಟಿಯಾನ್ ಎಂದೇ ಉಲ್ಲೇಖಿಸಿದ್ದಾನೆ. ಬನವಾಸಿ ಕದಂಬರ ರಾಜಧಾನಿಯಾಗಿತ್ತು. ಮಧುಕೇಶ್ವರ ದೇವಾಲಯದಲ್ಲಿ ಹನ್ನೆರಡನೇ ಶತಮಾನದ ವಿಚಾರವಾದಿ ಶರಣ ಅಲ್ಲಮಪ್ರಭುದೇವನು ಮದ್ದಳೆವಾದಕನಾಗಿ ಕಾರ್ಯ ನಿರ್ವಹಿಸುತ್ತಿದ್ದುದು ಪ್ರಾಚೀನ ವೀರಶೈವ ಕಾವ್ಯಗಳಿಂದ ತಿಳಿದು ಬರುತ್ತದೆ. ಮಧುಕೇಶ್ವರ ದೇವಾಲಯ ಕನ್ನಡ ನಾಡಿನ ದೇಗುಲಗಳ ರಾಣಿಯೆಂದೇ ಕರೆಯಲ್ಪಡುತ್ತಿದೆ. ಮಧುಕೇಶ್ವರ ದೇಗುಲದ ಶಿಲ್ಪ ಕಲಾ ವೈಭವಕ್ಕೆ ಸೇರಿಕೊಂಡಿರುವ ಇನ್ನೊಂದು ಸೋಜಿಗ ಇಲ್ಲಿರುವ ಒಂದೇ ಕಲ್ಲಿನಲ್ಲಿ ಕಟ್ಟಿದಿರುವ ಬೃಹತ್ತಾದ ಮಂಚ, ಇದರ ಸೊಗಸಿಗೆ ಮರುಳಾಗದ ಯಾತ್ರಿಯಿಲ್ಲ, ಈ ಕಲ್ಲು ಮಂಚವನ್ನು ಕಟ್ಟೆಯಿಸಿ ಈ ದೇಗುಲಕ್ಕೆ ಒಪಿಸಿದವರಾರೆಂಬ ಕುತೂಹಲದತ್ತ ನಮ್ಮ ಮನಸ್ಸು ಹರಿಯುತ್ತದೆ. ಈ ಮಂಚದ ಬಗ್ಗೆ ಎಲ್ಲಿಯಾದರೂ ದಾಖಲೆ ದೊರಕಿತೇ ಎಂಬ ಕುತೂಹಲದಿಂದ ಸಂಬಂಧಪಟ್ಟ ಆಕರಗಳನ್ನು ಶೋಧಿಸಿದ್ದಾಯಿತು. ಶಾಸ್ತ್ರಿಗಳು ತಮ್ಮ ಶರಣಸಾಹಿತ್ಯದಲ್ಲಿ ಬರೆದು ಪ್ರಕಟಿಸಿದ 'ಸ್ವಾದಿ ರಾಜ್ಯ ಚರಿತ್ರೆ' ಎಂಬೊಂದು ಪುಟ್ಟ ಪ್ರಬಂಧದಲ್ಲಿ ಕಲ್ಲು ಮಂಚದ ಬಗ್ಗೆ ವಿವರಗಳನ್ನು ನೀಡಿ ನಮ್ಮ ಕುತೂಹಲವನ್ನು ತಣಿಸಿದ್ದಾರೆ.

"ಅರಸಪ್ಪನಾಯಕನ (ಕ್ರಿ.ಶ. 1555-1568) ಮಗನಾದ ರಾಮಚಂದ್ರ ನಾಯಕನು ತನ್ನ ತಂದೆಯ ಸಂಪ್ರದಾಯವನ್ನು ಮುಂದುವರೆಸಿದನು. ತನ್ನ ರಾಜ್ಯದ ವ್ಯಾಪಾರೀ ಕೇಂದ್ರವಾದ ಸಿರಸಿಯಲ್ಲಿ ಒಂದು ಕೋಟೆಯನ್ನು ಕಟಿಸಿದನು. ರಾಜ್ಯದಲ್ಲಿ ಶಾಂತಿ ಸಮಾಧಾನವನ್ನು ಸ್ಥಾಪಿಸಿದನು ಅನಂತರ ರಘುನಾಥ ನಾಯಕನ ಕಾಲದಲ್ಲಿ ಸ್ವಾದಿರಾಜ್ಯವು ಎಲ್ಲ ವಿಧದಲ್ಲಿಯೂ ಅಭಿವೃದ್ಧಿಯನ್ನು ಪಡೆಯಿತು. (1618-1638) ಇವನು

ಬನವಾಸಿಯಲ್ಲಿರುವ ಮಧುಕೇಶ್ವರ ದೇವರಿಗೆ ಒಂದು ಕಲ್ಲು ಮಂಚವನ್ನು ಶಿವರಾತ್ರಿಯಂದು ಮಾಡಿಸಿ ಕಾಣಿಕೆ ಕೊಟ್ಟಂತೆ ಅಲ್ಲಿರುವ ಒಂದು ಶಾಸನವು ಹೇಳುತ್ತದೆ. ಕರ್ನಾಟಕದಲ್ಲಿ ಅಪೂರ್ವವಾಗಿರುವ ಶಿಲ್ಪಕಲಾವಸ್ತುಗಳಲ್ಲಿ ಈ ಕಲ್ಲು ಮಂಚವು ಪರಿಗಣಿಸಲ್ಪಟ್ಟಿದೆ... ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿರುವ ಕಲ್ಲುಮಂಟಪ ಕೂಡ ಸ್ವಾದಿಯ ರಾಜರ ಕಾಲದಲ್ಲಿ ರಚಿತವಾದುದು. ಅದರಲ್ಲಿ ತೋಳಿಗಟ್ಟು ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ ಹಡಪರ ಅಪ್ಪಣ್ಣ, ಮೊದಲಾದ ಶರಣರ ವಿಗ್ರಹಗಳಿವೆ.

ಶಾಸ್ತ್ರಿಗಳು ಪ್ರವಾಸಿ ಸ್ಥಳಗಳಿಗೆ ಪ್ರವಾಸಿಯಂತೆ ಹೋಗಿಬರುವವರಲ್ಲ ಅಲ್ಲಿನ ವಿಶೇಷಗಳ ಬಗ್ಗೆ ಕೂಲಂಕುಷವಾಗಿ ಅಧ್ಯಯನ ಮಾಡಿಯೇ ಬಂದವರು. ಬನವಾಸಿಯ ಮಧುಕೇಶ್ವರ ದೇವಾಲಯದ ಶಿಲ್ಪದ ಅದ್ಭುತ ರಚನೆಗಳಾದ ಕಲ್ಲುಮಂಚ ಮತ್ತು ಕಲ್ಲುಮಂಟಪಗಳು ಪ್ರಾಚೀನ ಕದಂಬರ ಕಾಲದ ಶಿಲ್ಪಗಳಿರಬಹುದೆಂಬ ನಂಬಿಕೆಯಿದ್ದ ನನಗೆ ಶಾಸ್ತ್ರಿಗಳ ಲೇಖನ ಆ ಕೀರ್ತಿಯನ್ನು ಆದರದಿಂದ ಸ್ವಾದಿ ಅರಸರಿಗೆ ಸಲ್ಲುವಂತೆ ಲೇಖನ ರಚಿಸಿದ್ದು ತುಂಬಾ ಉಪಯುಕ್ತವೆನಿಸಿತು.

ಕನ್ನಡದ ವೀರ ರಾಣಿಯೆಂದು ಕೀರ್ತಿಗಳಿಸಿದ ಬೆಳುವಡಿ ಮಲ್ಲಮ್ಮನೂ ಕೂಡ ಸ್ವಾದಿ ಅರಸು ಕುಮಾರಿಯೇ. ಕ್ರಿ.ಶ. 1638 ರಿಂದ 1674ರ ವರೆಗೆ ಸ್ವಾದಿ ರಾಜ್ಯವನ್ನಾಳಿದ ಮಧುಲಿಂಗನಾಯಕನ ಮಗಳು ಬೆಳವಡಿ ಮಲ್ಲಮ್ಮ... "ಸ್ವಾದಿಯ ಅರಸರಿಗೆ ಸಂಬಂಧಪಟ್ಟ ಕಾಗದ ಪತ್ರಗಳು, ಬಾಂದವಾಡಿಯ ಅರಮನೆಯಲ್ಲಿ ಮರಾಠಿಯ ಬಖೈರುಗಳಲ್ಲಿ ಪೋರ್ಚುಗೀಸರ ರಾಜಧಾನಿಯಲ್ಲಿ ಸಿಕ್ಕುತ್ತವೆ.... ಸ್ವಾದಿ ಪಟ್ಟಣವು ಈ ರಾಜ್ಯದ ಚರಿತ್ರೆಗಿಂತ ಪ್ರಾಚೀನವಾದುದು. ಎಂದು ಹೇಳಲಾಗಿದೆ. ಕನ್ನಡದ ಪ್ರಖ್ಯಾತ ವ್ಯಾಕರಣ ಗ್ರಂಥವಾದ ಶಬ್ದಾನು ಶಾಸನಗಳನ್ನು ಬರೆದ ಭಟ್ಟಾಕಳಂಕನು ಈ ಸ್ವಾದಿಯನವೆಂದು ತಿಳಿದು ಬಂದಿದೆ. ಸ್ವಾದಿಯಲ್ಲಿರುವ ಭಟ್ಟಾಕಳಂಕನ ಮಠವೇ ಅವನ ನಿವಾಸ ಸ್ಥಾನವೆಂದು ಜೈನವಿದ್ವಾಂಸರಿಂದ ಹೇಳಲಾಗಿದೆ....

ಸ್ವಾದಿರಾಜ್ಯಕ್ಕೆ ಕಾರವಾರ, ಹೊನ್ನಾವರ, ಕುಮಟ, ಭಟಕಳ, ಮಿರ್ಜಾನ, ಕಡ್ಮೆ, ಅಂಕೋಲು, ಸುಫ, ಸಾಂಬ್ರಾಣಿ ಈ ಸ್ಥಳಗಳೆಲ್ಲವೂ ಸೇರಿದ್ದವು. ಶಿರಸಿ, ಯಲ್ಲಾಪುರ, ಹಲ್ಯಾಳ ಇವುಗಳೂ ಆಗಿನ ಸ್ವಾದಿಯ ರಾಜ್ಯಕ್ಕೆ ಸೇರಿದ್ದವು. .... ರಾಜಾವಳೀ ಕಥೆಯಲ್ಲಿ ಭಟ್ಟಾಕಳಂಕನು ಸ್ವಾದಿರಾಜರ ಆಶ್ರಯದಲ್ಲಿ ಇದ್ದನೆಂದು ಹೇಳಲಾಗಿದೆ. ಭಟ್ಟಾಕಳಂಕನ ಕಾಲ 1480 ಎಂದು ತಾಮ್ರಪಟಗಳಿಂದ ತಿಳಿದು ಬಂದಿದೆ. ಸದಾಶಿವನಾಯಕನು ಸದಾಶಿವ ನೀತಿ ಎಂಬ ಹೆಸರಿನಿಂದ ಪಂಚಶತನೀತಿಗಳನ್ನು ಬರೆದ ವಿಚಾರಗಳನ್ನು ಈ ಹಿಂದೆಯೇ ತಿಳಿಸಲಾಗಿದೆ."

ಶಾಸ್ತ್ರಿಗಳು ವೀರಶೈವ ಅರಸು ವೀರ ಮಹಿಳೆಯರ ಬಗ್ಗೆ ಅನೇಕ ಮಾಹಿತಿಗಳನ್ನು ಒಳಗೊಂಡಂತೆ ಲೇಖನಗಳನ್ನು ಬರೆದು ಶರಣಸಾಹಿತ್ಯ ಮಾಸಪತ್ರಿಕೆಯಲ್ಲಿ ಪ್ರಕಟಗೊಳಿಸಿದ್ದಾರೆ. ಕನ್ನಡದವರಿಗೆ ಪರಿಚಿತವಲ್ಲದ ತೆಲುಗು ನಾಡಿನ ಓರಂಗಲ್ಲು ರಾಜ್ಯದ ಕಾಕತೀಯ ಗಜಪತಿರಾಯನ ಮಗಳು ರುದ್ರಮ ದೇವಿಯ ಬಗ್ಗೆ ಬರೆದಿರುವ ಲೇಖನ ಉತ್ತಮವೆನಿಸುವ ಲೇಖನವಾಗಿದೆ. ಬರೆದ ಅನೇಕ ಲೇಖನಗಳು ವೀರಶೈವ ಧರ್ಮಾಭಿಮಾನದಿಂದ ಮೈ ತುಂಬಿಕೊಂಡಿವೆ.

## 'ವೀರಶೈವ ಸಮನ್ವಯ - ಸಾಹಿತಿಗಳಾಗಿ'

ವೀರಶೈವ ಸಮನ್ವಯದ ಹರಿಕಾರರಾದ ಶಾಸ್ತ್ರಿಗಳು ವೀರಶೈವ ಧರ್ಮವನ್ನು ಇಡಿಯಾಗಿ ಕಂಡವರು. ಅವರಿಗೆ ಒಳ ಪ್ರಭೇದಗಳ ಸಂಕುಚಿತ ಮನೋಭಾವವಿರಲಿಲ್ಲ. ಪಾಲ್ಕುರಿಕೆ ಸೋಮನಾಥನ ಗಣಸಹಸ್ರ ನಾಮಾವಳಿಯನ್ನು ಸಂಪಾದಿಸುವಾಗ ಆ ಗ್ರಂಥಕ್ಕೆ ಬರೆದ ಪ್ರಸ್ತಾವನೆಯನ್ನು ನೋಡಿದರೆ, ಶಾಸ್ತ್ರಿಗಳಿಗಿದ್ದ ವಿಶಾಲ ಮನೋಭಾವ ನಮಗರಿವಾಗುತ್ತದೆ.

"ಸಹಸ್ರ ನಾಮದಲ್ಲಿ ನಂದೀಶ್ವರ, ಶೃಂಗೀಶ್ವರ, ವೀರಭದ್ರ, ರೇಣುಕ, ದಾರುಕದಂತಹ ದಿವ್ಯಗಣಗಳಿದ್ದಾರೆ, ತಿರುನೀಲಕಂಠ ಅಮರನೀತಿ, ಶಿವಜ್ಞಾನಸಂಬಂಧರ, ಸೌಂದರ್ಯಮೂರ್ತಿಗಳಂತಹ ಪುರಾತನರಿದ್ದಾರೆ. ಬಸವೇಶ್ವರ, ಅಲ್ಲಮಪ್ರಭು, ಚನ್ನಬಸವೇಶ್ವರ, ಮಾಚಿದೇವರು, ಉಡುತಡಿ ಮಹಾದೇವಿ, ಇಂತಹ ಪ್ರಭಾವಶಾಲಿಗಳಿದ್ದಾರೆ. ಕೊಂಡಗುಳಿ ಕೇಶೀರಾಜ, ದೇವರದಾಸಿಮಯ್ಯ, ಏಕಾಂತದ ರಾಮಯ್ಯ ರೇವಣಸಿದ್ದರು, ಅಮರಗೊಂಡದ ಮಲ್ಲೇಶತಂದೆ, ಕುಮಾರ ಪಾಲಗುರ್ಜರ ರಾಜ, ಬೆಟ್ಟೇವಿ, ತೀಮನಾರಾಧ್ಯರು, ಮಂಚಣ್ಣ ಪಂಡಿತರು, ಶ್ರೀಕರಾಚಾರ್ಯರು, ಮೊದಲಾದ ಪಂಡಿತರಿದ್ದಾರೆ. ಹರಳಯ್ಯ, ಕಕ್ಕಯ್ಯ ಶಿವನಾಗಮಯ್ಯರಂತಹ ದೈನ್ಯಭಾವದ ಶರಣರಿದ್ದಾರೆ, ಆದರೆ ಇವರೆಲ್ಲರು ಉದಾರವಾದ ಶೈವದರ್ಶನ, ಹಾಗೂ ವೀರಶೈವ ಧರ್ಮದ ಉಜ್ವಲಪ್ರಕಾಶದಲ್ಲಿ ಕಂಗೊಳಿಸುವ ದಿವ್ಯ ನಕ್ಷತ್ರವಾಗಿದ್ದಾರೆ."

ಗಣಸಹಸ್ರನಾಮದ ಆಶಯವೇ ಸಮನ್ವಯ ಸಂಕಲ್ಪವಾದ್ದರಿಂದ ಶಾಸ್ತ್ರಿಗಳಿಗೆ ಅದು ತುಂಬಾ ಮೆಚ್ಚುಗೆಯಾಗಿತ್ತು. ಪಾಲ್ಕುರಿಕೆ ಸೋಮನಾಥ ಮೂಲತಃ 'ಓರಂಗಲ್ಲು' (ಆಂಧ್ರಪ್ರದೇಶ) ಪ್ರದೇಶದವನು, ಅಲ್ಲಿ ಮುಸಲ್ಮಾನರ ದಾಳಿ ವಿಪರೀತವಾದ್ದರಿಂದಲೋ, ಪ್ರಪಂಚ ಪರ್ಯಾಟನೆ ದೃಷ್ಟಿಯಿಂದಲೂ ಕರ್ನಾಟಕದ ಮಾಗಡಿ ಬಳಿಯ ಕಲ್ಬದ ಸರ್ವಶೀಲೆ ಚನ್ನಮ್ಮನೆಂಬ ಮಹಾಶರಣೆಯ ದರ್ಶನಕ್ಕಾಗಿಯೋ ಮೈಸೂರು ಪ್ರದೇಶಕ್ಕೆ ಬಂದವನು. ಹನ್ನೆರಡನೆಯ ಶತಮಾನದಲ್ಲಿಯೇ ಕಲ್ಯಾಣದ ಬಸವೇಶ್ವರನನ್ನು ದಕಿಣ ಕರ್ನಾಟಕದ ಜನರಿಗೆ ಪರಿಚಯ ಮಾಡಿಕೊಟ್ಟ ಶರಣ ಕವಿಯೀತ. ಈತನ ಗಣಸಹಸ್ರನಾಮಾವಳಿ ವೀರಶೈವ ಧರ್ಮದವರಿಗೆ ಆಧಾರ ಗ್ರಂಥವಾಗಿದೆ. ಅದನ್ನು ರಚಿಸಿದವನೂ ಸೋಮನಾಥ ಕವಿಯೇ ಈತನ ಬಗ್ಗೆ ವಿರಕ್ತ ತೋಂಟದಾರ್ಯನೆಂಬ ಕನ್ನಡ ಕವಿ ಪಾಲ್ಕುರಿಕೆ ಸೋಮನಾಥ ಚಾರಿತ್ರವೆಂಬ ಷಟ್ಪದೀ ಕಾವ್ಯವನ್ನು ರಚಿಸಿದ್ದಾನೆ ಒಬ್ಬ ಪುರಾತನ ಕವಿಯ ಬಗ್ಗೆ ನಂತರದ ಕವಿ ರಚನೆಯಾದ ಈ ಕಾವ್ಯ ಐತಿಹಾಸಿಕ ಮಹತ್ವವುಳ್ಳ ಕೃತಿಯಾಗಿದೆ. ಇದನ್ನು ಪಿ. ಆರ್. ಕರಿಬಸವಶಾಸ್ತ್ರಿಗಳು ಮೊಟ್ಟಮೊದಲಿಗೆ ಸಂಪಾದಿಸಿದರು. ತಮ್ಮ ಗುರುಗಳಿಂದ ಸಂಪಾದಿತವಾದ ಈ ಕೃತಿ ಶಿವಮೂರ್ತಿಶಾಸ್ತ್ರಿಗಳಿಗೆ ತುಂಬಾ ಪ್ರಿಯವೆನಿಸಿತ್ತು.

ಶಾಸ್ತ್ರಿಗಳಿಗೆ ಅಭಿಮಾನಿಗಳಿದ್ದರು. ಉದಯೋನ್ಮುಖ ಸಾಹಿತಿಗಳನ್ನು ಪ್ರೋತ್ಸಾಹಿಸುತ್ತಿದ್ದರು. ತಮ್ಮದೇ ಆದ ಗುಂಪನ್ನು ಮಾತ್ರ ಕಟ್ಟಿಕೊಳ್ಳಲಿಲ್ಲ. ಸಾರಸ್ವತ ವ್ಯವಹಾರವೇನಿದ್ದರೂ ಸಮಾನ ವಿದ್ವಜ್ಜನರ ಜೊತೆ

ನಡೆಸುತ್ತಿದ್ದರು. ನವಯುಗಮಾನಕ್ಕೆ ಸ್ಪಂದಿಸದ ಶಾಸ್ತ್ರಿಗಳ ಬಳಿ ಹೊಸ ತಲೆಮಾರಿನ ಕವಿಗಳು ಹೋಗುತ್ತಿರಲಿಲ್ಲ. ಬಸವರಾಜ ಕಟ್ಟಿಮನಿ ಕೆ.ಪಿ. ಶಿವಲಿಂಗಯ್ಯ, ಬಿ.ಎಸ್.ಸ್ವಾಮಿ, ಶಾಮುಂ. ಕೃಷ್ಣರಾವ್ ಆರ್. ರಾಚಪ್ಪ ಮುಂತಾದ ಸಾಹಿತಿಗಳು ಶಾಸ್ತ್ರಿಗಳ ಒಡನಾಟವಿರಿಸಿಕೊಂಡಿದ್ದರು. ನಾನೂ ಮತ್ತವರ ಕಿರಿಯ ಪುತ್ರ ಎಚ್. ಎಸ್. ಶಿವಪ್ರಕಾಶ್ ಗೆಳೆಯರಾಗಿದ್ದೆವು ಪದ್ಯ ಬರೆಯುವ ಚಟವಿದ್ದ ನಮ್ಮಿಬ್ಬರ ನಡುವೆ ಆತ್ಮೀಯತೆಯಿತ್ತು. ನಾವಿಬ್ಬರು ರಾಜಾಜಿನಗರದ ಎಸ್. ನಿಜಲಿಂಗಪ್ಪ ಕಾಲೇಜಿನಲ್ಲಿ (1974) ಉಪನ್ಯಾಸಕರಾಗಿದ್ದೆವು ಆಗಾಗ್ಗೆ ಶಾಸ್ತ್ರಿಗಳ ಮನೆಗೆ ನಾನು ಹೋಗುತ್ತಿದ್ದೆ.

ಒಂದು ದಿನ ಅವರು ಫೋನಿನಲ್ಲಿ ಮಾತಾಡುತ್ತಿದ್ದಾಗ ನಾನು ಅವರ ಮನೆ ಪ್ರವೇಶಿಸಿದ್ದೆ. ದೂರವಾಣಿಯ ಮೂಲಕವೇ ಪ್ರವಚನಕ್ಕೆ ತೊಡಗಿದಂತಿತ್ತು. ಧ್ವನಿಶೈಲಿ. ಮೈಸೂರಿನಿಂದ ಘನವಿದ್ವಾಂಸರಾದ ತಿಪ್ಪೇರುದ್ರಸ್ವಾಮಿಯವರು ಶಾಸ್ತ್ರಿಗಳಿಗೆ ಫೋನಾಯಿಸಿದ್ದರೆಂದು ಆಮೇಲೆ ತಿಳಿಯಿತು. ಕರ್ನಾಟಕ ಸಂಸ್ಕೃತಿ ಸಮೀಕ್ಷೆ" ಗ್ರಂಥ ಪ್ರಕಟಿಸಿ ಸ್ವಾಮಿಯವರು, ಶಾಸ್ತ್ರಿಗಳ ಅಭಿಪ್ರಾಯಕ್ಕಾಗಿ ಗ್ರಂಥ ಕಳುಹಿಸಿದ್ದರೆಂದು ಕಾಣುತ್ತದೆ. ಗ್ರಂಥದಲ್ಲಿ ಬಂದಿರುವ ವಿಷಯಗಳ ಬಗ್ಗೆ ಶಾಸ್ತ್ರಿಗಳು ಆಕ್ಷೇಪ ಮಾಡುತ್ತಲೇ ಇದ್ದರು. "ಇದು ಇತಿಹಾಸಕ್ಕೆ ಕನ್ನಡ ಸಂಸ್ಕೃತಿಗೆ ಧಕ್ಕೆಯಾಗುವುದಿಲ್ಲವೇ? ಎಂದೆಲ್ಲಾ ವಾದಿಸುತ್ತಿದ್ದರು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಸ್ನಾತಕೋತ್ತರ ಕೇಂದ್ರದ ಕನ್ನಡ ಪ್ರಾಧ್ಯಾಪಕರಾಗಿದ್ದ ತಿಪ್ಪೇರುದ್ರಸ್ವಾಮಿಗಳ ಬಗ್ಗೆ ನನಗೆ ತುಂಬಾ ಅಭಿಮಾನ, ಅಂತಹ ವಿದ್ವಾಂಸರ ಗ್ರಂಥದಲ್ಲಿರುವ ವಿಷಯಗಳ ಬಗ್ಗೆ ಆಕ್ಷೇಪಿಸುತ್ತಿದ್ದ ಶಾಸ್ತ್ರಿಗಳ ಬಗ್ಗೆ ಗೌರವಕ್ಕಿಂತ ಹೆಚ್ಚಾಗಿ ಭಯವುಂಟಾಯಿತು. ನನ್ನ ಬರಹಗಳನ್ನು ಶಾಸ್ತ್ರಿಗಳಿಗೆ ತೋರಿಸಬೇಕೆಂಬ ಹಂಬಲ ದೂರವೇ ಉಳಿಯಿತು. ಇತಿಹಾಸಕ್ಕೆ ಹೊಂದದ ವಿಷಯಗಳನ್ನು ಹೇಳಿದ ವಿದ್ವಾಂಸರ ಬಗ್ಗೆ ಶಾಸ್ತ್ರಿಗಳು ಟೀಕಾ ಪ್ರಹಾರವನ್ನೇ ನಡೆಸುತ್ತಿದ್ದರು. ತಿದ್ದುವ ಅವರ ವೈಖರಿ ಗುದ್ದಿದಂತೆ ಬಿರುಸಾಗಿತ್ತು.

ಶಾಸ್ತ್ರಿಗಳ ಪರಿಚಯ ಮಾಡಿಕೊಳ್ಳುವ ಅವರನ್ನು ಸಭೆ ಸಮಾರಂಭಗಳಿಗೆ ಆಹ್ವಾನಿಸಿ ಒಪ್ಪಿಸುವ ಮಾರ್ಗ ಸರಳವಾದುದು. ಶಾಸ್ತ್ರಿಗಳು ಪ್ರತಿಷ್ಠಿತ ವ್ಯಕ್ತಿಗಳನ್ನು ಪ್ರಶಂಸೆ ಮಾಡಿ ಹೊಗಳುವ ತಂತ್ರವನ್ನೇ ಅವರ ಮೇಲೆ ಪ್ರಯೋಗಿಸಿದರೆ ಸಾಕಾಗುತ್ತಿತ್ತು. ಅವರು ರಚಿಸಿದ ಗ್ರಂಥಗಳ ಹೆಸರು ಹೇಳಿಕೊಂಡು ಓದಬೇಕೆಂಬ ಹಂಬಲ ಹೊರಪಡಿಸಿದರೆ ಸಾಕು. ಶಾಸ್ತ್ರಿಗಳು ಪುಟ್ಟ ವ್ಯಾಖ್ಯಾನಕ್ಕೇ ತೊಡಗುತ್ತಿದ್ದರು. ಕೃತಿಯ ಮೌಲ್ಯವನ್ನು ಮನಸ್ಸಿಗೆ ತುಂಬಿ ಬಿಡುತ್ತಿದ್ದರು ಆಗ್ಗೆ ಶಾಸ್ತ್ರಿಗಳ ವರ್ತನೆ ನನಗೆ ಸರಿಬೀಳುತ್ತಿರಲಿಲ್ಲ. ಮುಂದೆ ನಾನೇ ಬರೆದ ಪುಸ್ತಕಗಳನ್ನು ನಾನೇ ಮಾರಾಟಮಾಡಿ ಹಾಕಿದ ಬಂಡವಾಳ ಹಿಂದಕ್ಕೆ ಪಡೆಯುವ ಸಂದರ್ಭ ಬಂದಾಗ ಎಗ್ಗಿಲ್ಲದೆ ಶಾಸ್ತ್ರಿಗಳ ಮಾರಾಟತಂತ್ರವನ್ನು ಅನುಸರಿಸಲೇಬೇಕಾಯಿತು. ಪುಸ್ತಕ ರಚನೆಯಷ್ಟು ಸರಳವಲ್ಲ ಅದರ ಪ್ರಕಟಣೆ ಮತ್ತು ಮಾರಾಟ, ನಮ್ಮ ಕಾಲಕ್ಕೇ ಹತ್ತಾರು ಕಹಿ ಅನುಭವಗಳು ನಮಗಾಗಿದ್ದವು. ಇನ್ನು ಶಾಸ್ತ್ರಿಗಳು ಬರೆದು ಪ್ರಕಟಿಸುತ್ತಿದ್ದ ಕಾಲ ಹೇಗಿದ್ದಿರಬೇಡ, ಮನೆ ತುಂಬಾ ತಾನೇ ಬರೆದ ಪುಸ್ತಕಗಳನ್ನು ತುಂಬಿಕೊಂಡು ಖರ್ಚಾಗದೇ ಅಟ್ಟ ಸೇರುವ ಗ್ರಂಥರಾಶಿಯ ಬಗ್ಗೆ ಯಾವ ಕವಿಯೂ ಹೆಮ್ಮೆಪಡುವುದಿಲ್ಲ. ಅದನ್ನು ಜನರಿಂದ ಆದ

ತಿರಸ್ಕಾರವೆಂದೇ ಆತ ಭಾವಿಸುತ್ತಾನೆ. ಬಡಸಾಹಿತಿಗಳ ಮನೆಗೆ ಆಗಮಿಸುವ ಧನಿಕರು ಗೌರವ ಪ್ರತಿಗಾಗಿ ಹಂಬಲಿಸುತ್ತಿರುತ್ತಾರೆ. ಅದಿರಲಿ, ಕವಿಯೊಬ್ಬನಿಗೆ ತಾನೇ ಪ್ರಕಟಿಸಿದ ಪುಸ್ತಕಗಳನ್ನು ಕೊಂಡು ಪುಸ್ತಕ ಬರೆದು ಮಾರಾಟಮಾಡಿ ಹಣಗಳಿಸುತ್ತಾರೆಂಬ ಊಹೆ ಖಂಡಿತ ಸರಿಯಲ್ಲ. ನಮ್ಮಂಥವರಿಗೆ ಬರೆದೇ ಜೀವನ ಮಾಡುವ ಪರಿಸ್ಥಿತಿಯಿಲ್ಲ. ಆದರೆ ಶಾಸ್ತ್ರಿಗಳಂತಹ ವಿದ್ವಾಂಸರು ಸಾಹಿತ್ಯರಚನೆ ಮಾಡಿಯೇ ಜೀವನ ನಡೆಸಬೇಕಾದ ಅನಿವಾರ್ಯತೆಯಿತ್ತು. ರಾಜಾಜಿನಗರದ 3 ನೇ ಹಂತದ ಮನೆಗೆ ಆಗಾಗ್ಗೆ ಹೋಗುತ್ತಿದ್ದೆ. ಶಾಸ್ತ್ರಿಗಳಿಗೆ ವಯಸ್ಸಾಗಿತ್ತು. ಸ್ಥೂಲಶರೀರ, ಕೊರಳಲ್ಲಿ ರುದ್ರಾಕ್ಷಿ ಸರಗಳಿರುತ್ತಿದ್ದವು. ಶಿವಪೂಜೆ ಮಾಡಿದ ಮರುಗಳಿಗೆಯಲ್ಲಿ ಅವರು ಪುರಾಣ ಕಾವ್ಯದ ಶರಣ ಪಾತ್ರದಂತೆ ಕಂಗೊಳಿಸುತ್ತಿದ್ದರು. ಹಣೆಯ ಮೇಲೆ ಓರಣವಾಗಿ ವಿಭೂತಿ ಗೆರೆಗಳಿರುತ್ತಿದ್ದವು. ತೋಳು, ಕಿವಿ, ಎದೆ, ಇವೆಲ್ಲಾ ವಿಭೂತಿಯ ಬಿಳಿಯ ಪಟ್ಟೆಗಳು ಕಳೆಯುತ್ತಿದ್ದವು. ಮುಖದಲ್ಲಿ ಮುಪ್ಪಿನ ಕಳೆ ಲವಲೇಶವೂ ಕಾಣಿಸುತ್ತಿರಲಿಲ್ಲ. ಎದುರು ಕುಳಿತವರ ಸ್ವಭಾವಾದಿ ಗುಣಗಳನ್ನು ಜಾಲಾಡುವಂತೆ ಅವರ ಕಣ್ಣುಗಳು ತುಂಟತನದಿಂದ ಹೊಳೆಯುತ್ತಿದ್ದವು.

## ಸಾಹಿತ್ಯ ಪರಿಷತ್ತಿನಲ್ಲಿ

ಎಪ್ಪತ್ತರ ದಶಕದಲ್ಲಿ ಸಾಹಿತ್ಯ ಪರಿಷತ್ತಿನ ಒಡನಾಟ ನನಗಾಯಿತು. ಆನೇಕಲ್ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಅವಕಾಶ ದೊರಕಿತ್ತು. ಚಾಮರಾಜಪೇಟೆಯ ಕನ್ನಡಸಾಹಿತ್ಯ ಪರಿಷತ್ತಿನಲ್ಲಿ ಕರಿಯಣ್ಣ' ಎಂಬ ನೌಕರರಿದ್ದರು. ಅವರಿಗೆ ಕನ್ನಡ ಸಾಹಿತಿಗಳ ಪರಿಚಯವಿತ್ತು. ಹಿರಿಯರಾದ ಶ್ರೀಯುತರು ನನ್ನನ್ನು ತುಂಬಾ ಪ್ರೀತಿಯಿಂದ ಗೌರವದಿಂದ ಮಾತಾಡಿಸುತ್ತಿದ್ದರು. ಒಂದು ದಿನ ನಾನವರನ್ನು ಮಾತಿಗೆಳೆದು ನಿಮ್ಮ ಪ್ರೀತಿಯ ಸಾಹಿತ್ಯಪರಿಷತ್ತಿನ ಅಧ್ಯಕ್ಷರಾಗಿದ್ದವರಲ್ಲಿ ನಿಮಗೆ ಪ್ರಿಯವಾದ ಅಧ್ಯಕ್ಷರಾರೆಂದು ಕೇಳಿದ್ದೆ, ಅವರು ತಡವರಿಸದೆ ಬಿ. ಶಿವಮೂರ್ತಿಶಾಸ್ತ್ರಿಗಳೆಂದು ಹೇಳಿದರು, ಆದಾಯವಿಲ್ಲದ ಕಾಲದಲ್ಲಿ ಸಾಹಿತ್ಯ ಪರಿಷತ್ತನ್ನು ಉಳಿಸಿ ಬೆಳೆಸಿದ ಶಾಸ್ತ್ರಿಗಳ ಸೇವಾ ವೈಖರಿಯನ್ನು ಮುಕ್ತ ಕಂಠದಿಂದ ಹೊಗಳಿದರು. ಕೆಂಗಲ್ ಹನುಮಂತಯ್ಯನವರು ಗಮಕ ಕಲೆಯ ಆರಾಧಕರಾಗಿದ್ದರು. ಸ್ವತಃ ಅವರೇ ಉತ್ತಮ ಗಮಕಿಗಳಾಗಿದ್ದರು. ರಾಜಕಾರಣ ಹೋರಾಟಗಳಲ್ಲಿ ದಸ್ತಗಿರಿಗೊಳಗಾಗಿ ತುರಂಗವಾಸ ಅನುಭವಿಸಬೇಕಾದ ದಿನಗಳಲ್ಲಿ ಕೆಂಗಲ್ಲರು ತಮ್ಮ ಸಹವರ್ತಿಗಳಿಗೆ ಜೈಮಿನಿ ಭಾರತ ವಾಚನಮಾಡಿ ಅಸಹನೀಯ ಕಾಲದ ಬೇಸರವನ್ನು ಪೂರ್ಣ ನೀಗಿಸುತ್ತಿದ್ದರಂತೆ, ಕೆಂಗಲ್ಲರ ಆಶಯಗಳು ಶಿವಮೂರ್ತಿಶಾಸ್ತ್ರಿಗಳ ಆಶಯಗಳಿಗೆ ಹೊಂದಿಕೊಳ್ಳುತ್ತಿದ್ದವು. ಶಿವಮೂರ್ತಿಶಾಸ್ತ್ರಿಗಳು ಗಮಕಿಗಳಾಗಿ ಹೆಸರು ಮಾಡಿದ್ದವರು. ಹಾಗಾಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಗಮಕ ಕಲೆಯನ್ನು ಬೆಸೆದರು. ಕೀರ್ತಿಶೇಷ ರಾಘವೇಂದ್ರರಾಯರು ಆಗಿನ ಕಾಲದ ಬಹುದೊಡ್ಡ ಗಮಕಿಗಳಾಗಿ ಹೆಸರು ಮಾಡಿದ್ದವರು. ಅವರ ಸೇವೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ದೊರಕಿಸಿಕೊಟ್ಟ ಶಾಸ್ತ್ರಿಗಳು ನಾಡಿನೆಲ್ಲೆಡೆ ಗಮಕ ಕಲೆ ಮತ್ತೆ ವಿಜೃಂಭಿಸುವಂತೆ ಮಾಡಿದರು. ಕನ್ನಡ ಸಾಹಿತ್ಯದ ಅಪ್ರತಿಮ ಪ್ರಸಂಗಗಳನ್ನು ಒಂದೆಡೆ ಸೇರಿಸಿ ಗಮಕಗಳಿಗೆ ಒದಗಿಸಿಕೊಟ್ಟರು. ಗಮಕ ತರಗತಿಗಳನ್ನು ಸ್ಥಾಪಿಸುವಂತೆ

ಪ್ರೇರೇಪಿಸಿದರು. ಈ ಕಾರ್ಯದಿಂದಾಗಿ ಕನ್ನಡ ಕಾವ್ಯ ಜಗತ್ತಿನ ಹಿರಿಯ ತಾರೆಗಳು ಜನಸಾಮಾನ್ಯರ ಮನೋಭೂಮಿಯಲ್ಲಿ ನರ್ತಿಸ ತೊಡಗುವಂತಾಯಿತು. ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ಷಡಕ್ಷರದೇವ, ಸಂಚಿ ಹೊನ್ನಮ್ಮ, ಕವಿರತ್ನಾಕರ, ನಂದಳಿಕೆ ನಾರಾಯಣಪ್ಪ ಮುಂತಾದ ಕನ್ನಡ ಕವಿ ಜ್ಯೋತಿಗಳು ನಾಡಿನ ಮನೆ-ಮನಗಳನ್ನು ಬೆಳಗುವಂತೆ ವೇದಿಕೆಗಳನ್ನು ಸೃಷ್ಟಿ ಮಾಡಿಕೊಟ್ಟರು. ನಂತರ ಅಂದರೆ ಶಿವಮೂರ್ತಿಶಾಸ್ತ್ರಿಗಳ ನಂತರ ಬಂದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಲ್ಲಿ ಜಿ. ನಾರಾಯಣರ, ಕನ್ನಡ (ಕಾವ್ಯ) ಗಮಕ ಕಲೆಯಬಗ್ಗೆ ಆಸಕ್ತಿ ವಹಿಸಿದ್ದರು. ಉಳಿದವರಿಗೆ ಗಮಕ ಸಂಗೀತ, ಶಿವಮೂರ್ತಿಶಾಸ್ತ್ರಿಗಳ ಅಧ್ಯಕ್ಷ ಗಿರಿಯಲ್ಲಿ ಕನ್ನಡ ನಿಘಂಟುವಿನ ಕಾರ್ಯ ಚುರುಕುಗೊಂಡಿತು. ಸಾಹಿತ್ಯ ಪರಿಷತ್ತಿನ ನಿಯತಕಾಲಿಕ ಪ್ರಕಟಣೆಗಳಾದ ಕನ್ನಡ ನುಡಿ ಮತ್ತು (ಸಾಹಿತ್ಯ ಪತ್ರಿಕೆಗಳು) ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಗಳು ಮೌಲಿಕ ಲೇಖನಗಳ ತಲಬರಿಗೆಗಳಾದವು. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಒಂದು ಸಂಶೋಧನ ಲೇಖನ ಪ್ರಕಟವಾಗಿಬಿಟ್ಟರೆ ವಿದ್ವಾಂಸರಿಗೆ ಉನ್ನತಮಟ್ಟದ ಕೀರ್ತಿಗೌರವಗಳು ದೊರಕಿಬಿಡುತ್ತಿದ್ದವು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಂತೂ ಸಂಗ್ರಹಯೋಗ್ಯ ನಿಯತಕಾಲಿಕೆಯಾಗಿ ಮೈಸೂರು ವಿಶ್ವವಿದ್ಯಾಲಯದ ಪ್ರಬುದ್ಧ ಕರ್ನಾಟಕದಷ್ಟೇ ಕೀರ್ತಿಗಳಿಸತೊಡಗಿತ್ತು. ನನಗೆ ತಿಳಿದ ಮಟ್ಟಿಗೆ ಕನ್ನಡ ಸಾಹಿತ್ಯ ಪರಿಷತ್ತು ಡಿ.ವಿ.ಜಿಯವರು ಅಧ್ಯಕ್ಷರಾಗಿದ್ದ ಕಾಲದಲ್ಲಿಯೇ ಗಮಕ ಕಲೆಗೆ ಪ್ರಾಮುಖ್ಯತೆ ದೊರಕಿತ್ತು. ಗಮಕ ಹಾಡುಗಾರಿಕೆಗೆ ತರಗತಿಯನ್ನು ಪ್ರಾರಂಭಿಸಿದ್ದ ಕೀರ್ತಿಯೂ ಡಿ.ವಿ.ಜಿಯವರಿಗೆ ಸಲ್ಲುತ್ತದೆ. ಕಾವ್ಯ ರಚನೆಯಷ್ಟೇ ಕಾವ್ಯ ಸಂವಹನ ಮುಖ್ಯವೆಂದು ಅವರು ತಿಳಿದಿದ್ದರು. ಶಿವಮೂರ್ತಿಶಾಸ್ತ್ರಿಗಳು ಅಧ್ಯಕ್ಷರಾದ ಮೇಲೆ ಡಿ.ವಿ.ಜಿಯವರ ಪ್ರಮುಖ ಆಶಯವಾಗಿದ್ದ ಗಮಕ ತರಗತಿಗಳನ್ನು ಮುಂದುವರೆಸಿದರು. ಆರ್ಥಿಕ ಮುಗ್ಗಟ್ಟಿನಿಂದ ಸೊರಗಿದ್ದ ಸಾಹಿತ್ಯ ಪರಿಷತ್ತು ಗಮಕ ಹೇಳಿಕೊಡುತ್ತಿದ್ದ ಗುರುಗಳಿಗೆ ತಿಂಗಳ ಗೌರವಧನ ನೀಡಲೂ ಸಾಧ್ಯವಾಗುತ್ತಿರಲಿಲ್ಲ. ಗಮಕ ತರಗತಿಗಳನ್ನು ನಿಲ್ಲಿಸಬೇಕೆಂಬ ಆಲೋಚನೆಯಲ್ಲಿದ್ದಾಗ ಗಮಕಿ ರಾಘವೇಂದ್ರರಾಯರು ಸಂಸ್ಕೃತ ಮಹಾ ಪಾಠಶಾಲೆಯ ಒಂದು ಕೊಠಡಿಯನ್ನು ಪಡೆದು ಗಮಕ ತರಗತಿಯನ್ನು ಪ್ರಾರಂಭಿಸಿದರು. ಹೇಳಿಕೊಡುವ ಗುರುಗಳಿಗೆ ಅತೀ ಕಡಿಮೆ ಸಂಭಾವನೆ ನೀಡಲಾಗುತ್ತಿದ್ದರೂ ಗಮಕಕಲೆಯ ಗುರುಗಳು ಅದನ್ನೊಂದು ಸೇವೆಯೆಂಬಂತೆ ನಡೆಸಲು ಮುಂದಾದರು. ಕನ್ನಡ ನಾಡಿನಾದ್ಯಂತ ಗಮಕ ತರಗತಿಗಳು ಪ್ರಾರಂಭವಾದುವು. ನಾನಾ ಕಾವ್ಯಭಾಗಗಳನ್ನು ನಾನಾ ಸಂಗೀತ ರಾಗಗಳಲ್ಲಿ ಹಾಡುವ ಮತ್ತು ಕೇಳುವ ಕಾರ್ಯಕ್ರಮಗಳು ನಡೆಯಲಾರಂಭಿಸಿದವು.

ಕನ್ನಡ ಕಾವ್ಯಗಳನ್ನು ಜನಪ್ರಿಯಗೊಳಿಸುತ್ತಿದ್ದವರು ಗಮಕಿಗಳು. ನಾನು ಸ್ಕೂಲಿನಲ್ಲಿ ಓದುತ್ತಿದ್ದಾಗ ನನ್ನ ಊರು ಕಂಬಾಳಿಗೆ ಎರಡು ಮೈಲು ದೂರದ ಕಪಾಳ್ಯ ಎಂಬ ಹಳ್ಳಿಯ ಹನುಮಂತಯ್ಯ ಎಂಬ ವೃದ್ದರು ಆಗಾಗ್ಗೆ ನಮ್ಮ ಶಾಲೆಗೆ ಬಂದು ಗದುಗಿನ ಭಾರತ ವಾಚನ ಮಾಡುತ್ತಿದ್ದರು. ಅವರ ಗಾಯನಕ್ಕೆ ನಮ್ಮ ಶಾಲೆಯ ಹೆಡ್ಮಾಸ್ಟರ್ ಶಿವಣ್ಣ ಮೇಷ್ಟು ಅರ್ಥಹೇಳುತ್ತಿದ್ದರು. ನಾನು ಚಿಕ್ಕಾವನಾಗಿದ್ದಾಗ ಕೇಳಿದ್ದ ಸೌಗಂಧಿಕಾಪುಷ್ಪದ ಪ್ರಸಂಗ ಈಗಲೂ ನನ್ನನ್ನು ಭಾವುಕನನ್ನಾಗಿಸುತ್ತದೆ. ವೃದ್ಧ ಹನುಮಂತಯ್ಯನವರದ್ದು ಕಂಚಿನ ಕಂಠ ಭೀಮ, ಆಂಜನೇಯ, ದ್ರೌಪದಿ ಇವರ ನಡುವಣ ಕಥೆ, ಹುಡುಗರಾದ ನಮ್ಮನ್ನು ಸೆಳೆದಿರಿಸಿಕೊಳ್ಳುತ್ತಿತ್ತು. ಹಾಗೆಯೇ ಉತ್ತರಕುಮಾರನ

ಪ್ರಸಂಗವಂತೂ ನಮ್ಮ ಅಪರಾಹ್ನದ ಹಸಿವನ್ನು ಮರೆಸುತ್ತಿತ್ತು. ಗೋವಳಿಗರ ತಲೆ ಬೋಳಿಸಿ ಅವರ ಮೂಗಿನ ಮೇಲೆ ಪಟ್ಟೆ ನಾಮ ಬಳೆದು ಕಳುಹಿಸಿದ್ದು ಗೋವಳಿಗರು ಉತ್ತರಕುಮಾರನಲ್ಲಿಗೆ ಬಂದದ್ದು. ಆತ ಉತ್ತರಕುಮಾರ "ಏನಿದೇನೆಲವೋ ತುದಿ ಮೂಗಿನಲ್ಲಿ ಬಿಳುಪೇನು?" ಎಂದದ್ದು ಉತ್ತರ ಕುಮಾರನ ಪೌರುಷ ಒಲೆ ಮುಂದೆ, ನಮ್ಮ ಪೌರುಷ ಎಲೆ ಮುಂದೆ ಎಂದೆಲ್ಲಾ ಗಾದೆಗಳು ಹುಟ್ಟಿದ್ದು ಇನ್ನೂ ನೆನಪಿನಲ್ಲಿದೆ. ನಾನು ಮತ್ತು ನನ್ನ ಗೆಳೆಯರು ಗಮಕಕಲೆಯ ಆರಾಧಕರಾಗಿಬಿಟ್ಟಿದ್ದೆವು. ಒಂದು ಪ್ರಸಂಗ ನಾನಾಗ ಎಂ.ಎ. ತರಗತಿಯಲ್ಲಿ ಓದುತ್ತಿದ್ದೆ ನನ್ನ ಸಹಪಾಠಿ ಹನೂರು ಕೃಷ್ಣಮೂರ್ತಿಯವರು ಶಕುಂತಲಾಪಾಂಡುರಂಗರಾಯರ ಬಳಿ ಗಮಕ ಪಾಠಕ್ಕೆ ಹೋಗುತ್ತಿದ್ದರು. ಪಾಂಡುರಂಗಶೆಟ್ಟಿಯೆಂಬ ಗೆಳೆಯ ನಮ್ಮ ಜೊತೆಯಾದ, ನಾವು ಮೂವರೂ ಗಮಕ ಕಾರ್ಯಕ್ರಮಗಳನ್ನು ಕೊಡಲು ಕೆಲವು ಆಹ್ವಾನಿತ ಹೈಸ್ಕೂಲುಗಳಿಗೆ ಹೋಗಿದ್ದುಂಟು. ಸಂಭಾವನೆ ಪಡೆಯದೆ ನಮ್ಮ ಗಾಯನ ನಡೆಯುತ್ತಿತ್ತು. ಪಾಂಡುರಂಗಶೆಟ್ಟಿ ಸ್ತುತಿಪೆಟ್ಟಿಗೆ ಹಿಡಿದು ನಾದ ಹೊರಡಿದರೆ ಕೃಷ್ಣಮೂರ್ತಿ ಹನೂರು ರಾಗವಾಗಿ ಭಾರತವಾಚನ ಮಾಡುತ್ತಿದ್ದರು. ನಾನು ಪದ್ಯಗಳ ಅರ್ಥಸ್ವಾರಸ್ಯವನ್ನು ಹೇಳುತ್ತಿದ್ದೆ. ಹೀಗೆ ನಮಗೆ "ಗಮಕ' ಎಂಬುದು ಪ್ರೀತಿಯ ಹವ್ಯಾಸವಾಗಿತ್ತು. ಈ ಪ್ರಚೋದನೆಗೆ ಕಾರಣ ಸಾಹಿತ್ಯ ಪರಿಷತ್ತು ನಡೆಸುತ್ತಿದ್ದ ಗಮಕ ತರಗತಿಗಳೇ ಕಾರಣವೆಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕೆನಿಸುತ್ತದೆ. ನಮಗೆ ಕನ್ನಡ ಕಾವ್ಯದ ಗಂಧಗಾಳಿ ಪರಿಚಯವಾದದ್ದು ಗಮಕದ ಮೂಲಕವೇ. ಪದ್ಯಗಳನ್ನು ಭಾವಭರಿತವಾಗಿ ಓದುವುದು, ಸಮಾಸಗಳನ್ನು ಬಿಡಿಸಿ ಅರ್ಥ ಪೂರ್ಣವಾಗಿ ಉಚ್ಚಾರಮಾಡುವುದು, ಪದ ವಿಭಾಗ ಮಾಡಿ ಪದಗಳ ಅರ್ಥಗಳನ್ನು ಗ್ರಹಿಸುವುದು ಮುಂತಾದ ಶಿಕ್ಷಣ ದೊರೆತದ್ದು ಪಾಠಶಾಲೆಯ ಹೊರಗಿನ ಗಮಕ ಗೋಷ್ಠಿಗಳಲ್ಲಿ ಎಂದರೆ ತಪ್ಪಾಗಲಾರದು. ಪದ್ಯದ ಪದಕ್ಕೊಂದು ವಿಶೇಷ ಅರ್ಥವಿದೆ ಎಂಬುದನ್ನು ತಿಳಿಯಲು ನಮಗೆ ಗಮಕ ನೀಡುವಷ್ಟು ನೆರವು ಇನ್ನೆಲ್ಲಿಂದಲೂ ದೊರೆಯಲಾರದು.

1956 ರಿಂದ 1964ರ ವರೆಗೆ ಎಂಟುವರ್ಷ ನಾಲ್ಕು ತಿಂಗಳು ಅಥವಾ ನೂರು ತಿಂಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕನ್ನಡ ನುಡಿ ತೇರನ್ನು ಎಳೆದರು. ಶಾಸ್ತ್ರಿಗಳು ಅಧ್ಯಕ್ಷ ಗಾದೆಗೆ ಬರುವಾಗ್ಗೆ ಸಾಹಿತ್ಯ ಪರಿಷತ್ತಿನ ಒಂದು ಭಾಗದ ಗೋಡೆ ಬಿದ್ದೇ ಹೋಗಿತ್ತು. ಸಭಾ ಭವನವಿರಲಿಲ್ಲ. ಶಾಸ್ತ್ರಿಗಳು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ಲರನ್ನು ಕಂಡು ಪರಿಷತ್ತಿನ ಸ್ಥಿತಿಯನ್ನು ವಿವರಿಸಿ ಕನ್ನಡಿಗರೆಲ್ಲರ ಪ್ರಾತಿನಿಧಿಕ ಸಂಸ್ಥೆ ನಮ್ಮ ನಾಡಿನ ಸಾಂಸ್ಕೃತಿಕ ಪ್ರತೀಕದಂತೆ ಕಂಗೊಳಿಸಬೇಕೆಂದು ಒತ್ತಾಯಿಸಿದರು. ಆಗ್ಗೆ ಕರ್ನಾಟಕ ಸರ್ಕಾರ ಮೂವತ್ತೈದು ಸಾವಿರ ರೂಪಾಯಿಗಳ ಅನುದಾನವನ್ನು ನೀಡಿತು. ಆಗಿನ ಕಾಲಕ್ಕೆ ಈ ಹಣ ಸಣ್ಣ ಮೊತ್ತವೇನಾಗಿರಲಿಲ್ಲ. ಶಾಸ್ತ್ರಿಗಳ ಧ್ವನಿ ಕನ್ನಡ ನಾಡು-ನುಡಿಯ ಅಭಿವೃದ್ಧಿಗಾಗಿ ಯಾರನ್ನು ಬೇಕಾದರೂ ನೆರವು ಕೇಳುವ ಹಕ್ಕೊತ್ತಾಯದ ಗಡುಸಿನಿಂದ ಕೂಡಿತ್ತು. ಸಂಕೋಚವಿಲ್ಲದ ನಿರ್ಭೀತವಾಣಿಯಿಂದ ಅಧಿಕಾರಾರೂಢರನ್ನು ಅನುದಾನಕ್ಕೆ ಒತ್ತಾಯಿಸುತ್ತಿದ್ದರು. ಕೆಂಗಲ್ಲರೊಡನೆ ಸ್ನೇಹವಿದ್ದಷ್ಟೇ ಗಾತ್ರದಲ್ಲಿ ಎಸ್. ನಿಜಲಿಂಗಪ್ಪನವರ ಬಗ್ಗೆ ಅಸಮಾಧಾನವೂ ಇತ್ತು.

ಶಾಸ್ತ್ರಿಗಳು ಉಡುಪಿ, ಧಾರವಾಡ, ಬಳ್ಳಾರಿ, ಗದಗ, ಸಿದ್ದಗಂಗೆಗಳಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಯಿಸಿದ್ದರು. ಅರವತ್ತನಾಲ್ಕನೆಯ ಸಾಹಿತ್ಯ ಸಮ್ಮೇಳನ ಸಿದ್ಧಗಂಗೆಯಲ್ಲಿ ನಡೆದಾಗ ನಾನು ಪಾಲ್ಗೊಂಡು ನೂರಾರು ಸಾಹಿತಿಗಳನ್ನು ನೋಡುವ ಅವರ ಮಾತುಗಳನ್ನು ಕೇಳುವ, ಪುಸ್ತಕಕೊಳ್ಳುವ ಅವಕಾಶ ಪಡೆದಿದ್ದೆ. ನನ್ನ ವಿದ್ಯಾ ಗುರುಗಳಾದ ಎಚ್.ಜಿ. ಸಣ್ಣಗುಡ್ಡಯ್ಯನವರು ಕೆಲವು ಕವಿಗಳನ್ನು ನನಗೆ ಪರಿಚಯ ಮಾಡಿಸಿ ಕೊಟ್ಟಿದ್ದರು. ನಮ್ಮ ಸೀಮೆಯವರೇ ಆದ ಕಥೆಗಾರ ಸುಧಾಕರ, ಕೋ ಚನ್ನಬಸಪ್ಪ, ಪ್ರಪಂಚಪತ್ರಿಕೆಯ ಸಂಪಾದಕರಾದ ಪಾಟೀಲ ಪುಟ್ಟಪ್ಪ, ಮುಂತಾದವರನ್ನು ಮಾತಾಡಿಸಿ ಹೆಮ್ಮೆಯಿಂದ ಬೀಗಿದ್ದ ದಿನಗಳವು. ಸಮ್ಮೇಳನದ ಅಧ್ಯಕ್ಷರಾಗಿ ರಂ. ಶ್ರೀ. ಮುಗಳಿಯವರು ಕಾರ್ಯಕ್ರಮ ನಡೆಸಿಕೊಟ್ಟಿದ್ದರು. ಅವರ ಉತ್ತರ ಕರ್ನಾಟಕ ಶೈಲಿಯ ಮಾತುಗಾರಿಕೆ ಕನ್ನಡ ಹೀಗೂ ಉಂಟೆ ಎಂಬಂತಾಯಿತು. ಮುಂದೆ ಹತ್ತು ವರ್ಷಗಳಾದ ಮೇಲೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ರಂ.ಶ್ರೀ. ಮುಗಳಿಯವರೇ ನನಗೆ ಗುರುಗಳಾಗಿ ಪಾಠ ಹೇಳಿದ್ದರು.

ಆಗ್ಗೆ ಮಾಸ್ಟರ್ ಹಿರಣ್ಣಯ್ಯನವರು ವೃತ್ತಿರಂಗ ಭೂಮಿಯಲ್ಲಿ ಪ್ರಖ್ಯಾತಿಗಳಿಸಿದ್ದರು, ಆಹ್ವಾನಪತ್ರಿಕೆಯಲ್ಲಿ ಅವರ ಭಾಷಣ ಇರುವುದನ್ನು ನೋಡಿ ನನ್ನೂರಿನ ಹತ್ತಾರು ಯುವಕರು ಸೈಕಲ್ ಸವಾರಿ ಮಾಡಿಕೊಂಡೇ ಸಿದ್ದಗಂಗೆಗೆ ಬಂದು ಮಾಸ್ಟರ್ ಹಿರಣ್ಣಯ್ಯನವರ ಮಾತು ಕೇಳಿ ಆನಂದಪಟ್ಟಿದ್ದವು. ಸಭೆಯಲ್ಲಿ ಮಾಸ್ಟರ್ ಹಿರಣ್ಣಯ್ಯ ನಾಟಕದಲ್ಲಿ ಆಡುವಂತಹ ಯಾವ ಮಾತನ್ನು ಆಡದೆ, ನಾಟಕ ನವರಸ ಭರಿತವಾಗಿರಬೇಕೆಂದು ಬಹು ಗಂಭೀರವಾಗಿ ಭಾಷಣ ಮಾಡಿ ನಮ್ಮೂರಿನ ರಂಗರಸಿಕರನ್ನು ನಿರಾಸೆಗೊಳಿಸಿದ್ದರು. ನಮ್ಮೂರಿನ ರಂಗರತ್ನಗಳಿಗೆ ದಿವಂಗತ ಕಡಿದಾಳ್ ಮಂಜಪ್ಪನವರ ಬಗ್ಗೆ ಅಪಾರವಾದ ನಂಬುಗೆಯಿತ್ತು. ಅಂಥವರು ಮಾತ್ರವೇ ರಾಜ್ಯದ ಮುಖ್ಯಮಂತ್ರಿಯಾಗಲು ಅರ್ಹರೆಂಬ ವಾದ ಅವರದಾಗಿತ್ತು. ಇನ್ನುಳಿದ ಯಾರನ್ನೂ ಆ ಮಟ್ಟಿಗೆ ಮೆಚ್ಚಿದಂತೆ ಕಾಣಲಿಲ್ಲ. ಸರಕಾರದ ಬಗ್ಗೆ ತಮ್ಮ ಮನಸ್ಸಿನಲ್ಲಿರುವ ಅಸಮಾಧಾನವನ್ನು ಪ್ರತಿನಿಧಿಯಂತೆ ಮಾಸ್ಟರ್ ಹಿರಣ್ಣಯ್ಯ ಟೀಕಿಸುತ್ತಿದ್ದುದು ಬಹು ಪ್ರಿಯವೆನಿಸುತ್ತಿತ್ತು. ಲಂಚಕೋರರನ್ನು, ಪೋಲಿಸರನ್ನು ಪಾತ್ರಗಳನ್ನಾಗಿ ರೂಪಿಸಿಕೊಂಡು ಮಾನ ಜಾಲಾಡುತ್ತಿದ್ದ ಅವರ ಮಾತುಗಾರಿಕೆಗೆ ನಮ್ಮ ಊರಿನ ಜನ ಅಭಿಮಾನಿಗಳಾಗಿ ಹೋಗಿದ್ದರು. ಮಾಸ್ಟರ್ ಹಿರಣ್ಣಯ್ಯನವರನ್ನು ಹತ್ತಿರ ನಿಂತು ನೋಡಿ ಬಂದೆ ಎಂಬ ಹೆಗ್ಗಳಿಕೆಯಿಂದ ನಮ್ಮೂರಿನ ರಂಗರತ್ನಗಳು ಬಹುದಿನಗಳ ತನಕ ಕೊಚ್ಚಿಕೊಳ್ಳುತಿದ್ದರು. ಆಮೇಲೆ 2001 ರಲ್ಲಿ ತ್ಯಾಮಗೊಂಡಲುವಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು. ಸಮ್ಮೇಳನದ ಅಧ್ಯಕ್ಷನನ್ನಾಗಿ ನನ್ನನ್ನು ಆಯ್ಕೆ ಮಾಡಲಾಗಿತ್ತು. ಪೇಟೆಯ ಬೀದಿಗಳಲ್ಲಿ ಸುಂದರ ಬಸವಗಳನ್ನು ಹೂಡಿದ `ಅಲಂಕೃತ ಬಂಡಿಯಲ್ಲಿ ನನ್ನನ್ನು ಕೂರಿಸಿ ಮೆರವಣಿಗೆ ಮಾಡಿದರು. ಸಮ್ಮೇಳನದ ಉದ್ಘಾಟನೆಗೆ ಮಾಸ್ಟರ್ ಹಿರಣ್ಣಯ್ಯನವರೇ ಬಂದಿದ್ದರು. ನನ್ನ ಜೊತೆ ವೇದಿಕೆಯಲ್ಲಿ ಕುಳಿತಿದ್ದರು. ನಮ್ಮೂರಿನ ರಂಗರತ್ನಗಳೂ ನನಗೆ ದೊರೆತ ಗೌರವವನ್ನು ನೋಡಿ ಅವಕ್ಕಾದರು. ನಾನು ರಚಿಸಿದ 'ನಾಟಕದ ಮನೆ' ಪ್ರಬಂಧ ಸಂಕಲನ ಸಮ್ಮೇಳನದಲ್ಲಿ ಬಿಡುಗಡೆಯಾಯಿತು. ಆ ಕೃತಿಗೆ ಪ್ರಕಾಶಕ ಎಲ್. ಕೃಷ್ಣಪ್ಪನವರು ಮಾಸ್ಟರ್ ಹಿರಣ್ಣಯ್ಯನವರಿಂದಲೇ ಮುನ್ನುಡಿಯನ್ನು ಬರೆಯಿಸಿದ್ದರು. ಇಲ್ಲಿ ನನ್ನದೊಂದು ಅನುಭವ ಹೇಳಿಕೊಳ್ಳಬೇಕೆನಿಸಿದೆ. ನಾನು ತುಮಕೂರು ಸರ್ಕಾರಿ ಕಾಲೇಜಿನಲ್ಲಿ ಪ್ರೀ.ಯೂನಿವರ್ಸಿಟಿಯಲ್ಲಿ ಓದುತ್ತಿದ್ದೆ. ಪ್ರತಿ ನಿತ್ಯಾ ಹೇಗೋ ಮಾಡಿ

ಮಾಸ್ಟರ್ ಹಿರಣ್ಣಯ್ಯನವರ ನಾಟಕಕ್ಕೆ ಹಾಜರಾಗುತ್ತಿದ್ದೆ. ಒಂದು ದಿನ ಧೈರ್ಯಮಾಡಿ ಮುನಿರಂಗಪ್ಪನವರನ್ನು ಭೇಟಿಮಾಡಿ ನನಗೂ ನಾಟಕದಲ್ಲಿ ಪಾತ್ರವಹಿಸಲು ಅವಕಾಶ ಕೊಡಿಸಿರೆಂದು ಬೇಡಿಕೊಂಡೆ, ಮುನಿರಂಗಪ್ಪನವರು ನನ್ನನ್ನು ಮಾಸ್ಟರ್ ಹಿರಣ್ಣಯ್ಯನವರ ಮುಂದೆ ನಿಲ್ಲಿಸಿ ನನ್ನ ಹಂಬಲವನ್ನು ತಿಳಿಸಿದರು. ಮಾಸ್ಟರ್ ಹಿರಣ್ಣಯ್ಯನವರು ನನ್ನ ಬಗ್ಗೆ ವಿಚಾರಿಸಿ, ಓದುವುದನ್ನು ಬಿಟ್ಟು ನಾಟಕಕ್ಕೆ ಬರುವುದು ಸರಿಯಲ್ಲ. ನಿನ್ನ ತಂದೆ ತಾಯಿಗಳು ಯಾವ ಕನಸು ಕಟ್ಟಿಕೊಂಡು ನಿಮ್ಮನ್ನು ಓದಿಸುತ್ತಿದ್ದಾರೋ ತಿಳಿದಿಲ್ಲ ಮೊದಲು ಓದು, ಓದು ಪೂರ್ಣವೆನಿಸಿದ ಮೇಲೆ ಉದ್ಯೋಗ ಹಿಡಿ ಅನಂತರ ನಾಟಕಕ್ಕೆ ಸೇರಿಕೊ ಹಾಗಾದ ಮೇಲೆ ನನ್ನ ಬಳಿ ಬಂದರೆ ನಿನಗೆ ಪಾತ್ರ ಗ್ಯಾರಂಟಿ ಎಂದರು. ನಾನು ನಾಟಕ ನಟನಾಗಲೇ ಇಲ್ಲ ನಾಟಕಕಾರನಂತೂ ಆಗಿದ್ದೇನೆಂಬ ತೃಪ್ತಿಯಿದೆ.

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಲು ಶಿವಮೂರ್ತಿಶಾಸ್ತ್ರಿಗಳು ಪ್ರೇರಿತರಾದದ್ದು ಅಧಿಕಾರ ಲಾಲಸೆಯಿಂದಲ್ಲ ಎಂಬುದು ಅವರೇ ಬರೆದು ಕೊಂಡ ಸ್ವಗತದಿಂದ ತಿಳಿದುಬರುತ್ತದೆ.

"ನನ್ನ ಜೀವಮಾನದಲ್ಲಿ ನಾನು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷನಾಗಿ 1956 ರಿಂದ 1964ರ ವರೆಗೆ ಸುಮಾರು 100 ತಿಂಗಳು ಕಾಲ ಕನ್ನಡ ನಾಡು ನುಡಿಗಳ ಸೇವೆ ಮಾಡಿದುದು ಒಂದು ಮುಖ್ಯವಾದ ಸಂಗತಿ. ನಾನು 1931 ರಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯನಾಗಿದ್ದೇನೆ. ಕೆಲವು ಕಾಲ ಕಾರ್ಯ ಸಮಿತಿ ಸದಸ್ಯನಾಗಿ 'ಕನ್ನಡನುಡಿ' ಯ ಸಂಪಾದಕನಾಗಿ ಸೇವೆ ಸಲ್ಲಿಸಿದ್ದೇನೆ. ಪರಿಷತ್ತಿನ ಸದಸ್ಯ ಸಂಪತ್ತನ್ನು ಗ್ರಂಥ ಭಂಡಾರದ ಪುಸ್ತಕ ಸಂಪತ್ತನ್ನು ಅಧಿಕಗೊಳಿಸಲು ಯಥಾಶಕ್ತಿ ನೆರವಾಗಿದ್ದೇನೆ. ಕನ್ನಡನಾಡನ್ನು ಹಲವಾರು ಬಾರಿ ಸುತ್ತಾಡಿ ಜನತೆಯಲ್ಲಿ ಕನ್ನಡತನದ ಅಭಿಮಾನ ಹೆಚ್ಚುವಂತೆ ಪ್ರಚೋದಿಸಿದ್ದೇನೆ. ಈ ಎಲ್ಲ ಕಾರಣಗಳಿಂದ ನಾನು ಒಮ್ಮೆ ಪರಿಷತ್ತಿನ ಅಧ್ಯಕ್ಷನಾಗಬೇಕೆಂದು ಹಲವಾರು ಮಿತ್ರರು ಒತ್ತಾಯಿಸಿದರು. ಇವರುಗಳಲ್ಲಿ ದಿ. ಎಂ. ಆರ್. ಶ್ರೀನಿವಾಸಮೂರ್ತಿ, ದೇವುಡು ನರಸಿಂಹಶಾಸ್ತ್ರಿ, ಪದ್ಮಶ್ರೀ, ಸಿ.ಕೆ. ವೆಂಕಟರಾಮಯ್ಯ..... ಮೊದಲಾದವರು ಮುಖ್ಯರು. 1956 ನೇ ಜೂನ್ ತಿಂಗಳಿನಲ್ಲಿ ಚುನಾವಣೆಯಲ್ಲಿ ಜಯಿಸಿ ಪರಿಷತ್ತಿನ ಅಧ್ಯಕ್ಷನಾದೆನು. ಮತ್ತೆ 1959 ರಲ್ಲಿ ಸರ್ವಾನುಮತದಿಂದ ಅಧ್ಯಕ್ಷನಾಗಿ ಉಳಿದೆನು....

ನಾನು ಪರಿಷತ್ ಅಧ್ಯಕ್ಷನಾಗಿದ್ದಾಗ, ಉಡುಪಿ, ಧಾರವಾಡ, ಬಳ್ಳಾರಿ, ಗದಗ, ಬೀದರ್, ಸಿದ್ದಗಂಗೆ, ಮೊದಲಾದ ಕಡೆಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲಾಯಿತು... ನಾನು ಪರಿಷತ್ ಅಧ್ಯಕ್ಷನಾದ ಕೂಡಲೇ 1956 ರ ಡಿಸೆಂಬರ್ ತಿಂಗಳಲ್ಲಿ ಪರಿಷತ್ತಿನ ಮಾಜಿ ಅಧ್ಯಕ್ಷರು ಮತ್ತು ಸಮ್ಮೇಳನಾಧ್ಯಕ್ಷರು ಇವರುಗಳ ಗೌರವಾರ್ಥವಾಗಿ ಒಂದು ಸನ್ಮಾನ ಸಮಾರಂಭವನ್ನು ಮೈಸೂರು ಮಹಾ ರಾಜರ ಸಮ್ಮುಖದಲ್ಲಿ ನಡೆಸಲಾಯ್ತು. ರಾಷ್ಟ್ರಪತಿಗಳಾಗಿದ್ದ ಡಾ॥ ರಾಜೇಂದ್ರ ಪ್ರಸಾದ್ (1958) ಮತ್ತು ರಾಧಾಕೃಷ್ಣನ್ (1963) ಇವರುಗಳನ್ನು ಪರಿಷತ್ತಿಗೆ ಆಹ್ವಾನಿಸಿ ಗೌರವಿಸಲಾಯ್ತು. ಆಗ ಬೆಂಗಳೂರಿನಲ್ಲಿ ನಡೆದ ಬಂಗಾಳಿ ಸಾಹಿತ್ಯ ಸಮ್ಮೇಳನಕ್ಕೆ ಪರಿಷತ್ತಿನ ಎಲ್ಲಾ ನೆರವನ್ನೂ ಕೊಡಲಾಯಿತು. ಮದ್ರಾಸು ಬೊಂಬಾಯಿ, ಹೈದರಾಬಾದ್, ಹೊಸದೆಹಲಿ, ಮೊದಲಾದ ಕಡೆಗಳಲ್ಲಿರುವ ಕರ್ನಾಟಕ ಸಂಘಗಳಿಗೂ ಪರಿಷತ್ತಿಗೂ ಹೆಚ್ಚಿನ ಸಂಪರ್ಕ ಬೆಳೆಸಲಾಯಿತು.

ಬಡತನದಿಂದ ಪ್ರಾರಂಭವಾದ ಶಿವಮೂರ್ತಿಶಾಸ್ತ್ರಿಗಳ ಬದುಕು. ಸಾರಸ್ವತ ಶಕ್ತಿಯನ್ನು ಆವಾಹಿಸಿಕೊಂಡದ್ದರಿಂದ ಸಿರಿತನ ಅವರಿಂದ ದೂರವೇ ಉಳಿಯಿತು. ತಾವು ರಚಿಸಿದ ಸಾಹಿತ್ಯಕೃತಿಗಳ ಮಾರಾಟದಿಂದ ಬರುತ್ತಿದ್ದ ಅಲ್ಪ ಧನ ಅವರ ಸಾಹಿತ್ಯ ಚಟುವಟಿಕೆಗಳಿಗೆ ವೆಚ್ಚವಾಗಿ ಹೋಗುತ್ತಿತ್ತು. ಶಿವಕಥೆಕೀರ್ತನೆಗಳಿಂದ ಮೊದಮೊದಲು ಆದಾಯವನ್ನು ಎಣಿಸಿದರು ಅನಂತರ ಪಾಂಡಿತ್ಯದ ರಥಿಕರಾದ ಮೇಲೆ ಕೀರ್ತನೆಯನ್ನು ನಿಲ್ಲಿಸಿದರು. ಅದರಿಂದ ಬರುತ್ತಿದ್ದ ಆದಾಯವೂ ನಿಂತಿತು. 'ಶರಣ ಸಾಹಿತ್ಯ' ದ ಚಂದಾದಾರಿಕೆಯಿಂದ ಬರುತ್ತಿದ್ದ ಅತ್ಯಲ್ಪ ಹಣ ಮುದ್ರಣ ಮುಂತಾದವುಗಳಿಗೆ ಖರ್ಚಾಗುತ್ತಿತ್ತು. ಶಾಸ್ತ್ರಿಗಳು ಪಾಂಡಿತ್ಯದಲ್ಲಿ ಹಿಮಾಲಯದ ಆರೋಹಿಗಳಾದರೆ ವ್ಯವಹಾರದಲ್ಲಿ ಪಾತಾಳ ಮುಟ್ಟಿದ್ದರು. ಮುದ್ರಣಾಲಯದ ಮೇಲ್ವಿಚಾರಕರು, ಕೆಲಸಗಾರರು ಶಾಸ್ತ್ರಿಗಳನ್ನು ಸರಳವಾಗಿ ವಂಚಿಸುತ್ತಿದ್ದರು. ಅವರ ಅಸ್ಖಲಿತ ವಾಣಿ ಶ್ರೀಮಂತವಾಗಿತ್ತು. ಮೈಸೂರು ರುಮಾಲು ಘನತೆಯನ್ನು ಬಿಂಬಿಸುತ್ತಿತ್ತು. ಹೆಗಲಮೇಲಿನ ಜರಿ ಜರತಾರಿಶಾಲು ರಾಜ ಕಳೆಯನ್ನು ತಂದು ಕೊಡುತ್ತಿತ್ತು. ಆದರೆ ಸಾಹಿತ್ಯಸಂಶೋಧನೆಗಳನ್ನು ವೃತ್ತಿ-ಪ್ರವೃತ್ತಿ ಮಾಡಿಕೊಂಡ ಎಲ್ಲ ವಿದ್ವಾಂಸರಂತೆ ಶಾಸ್ತ್ರಿಗಳೂ ಸಂಸ್ಕೃತ ಮಹಾಕವಿ ಭಾರವಿಯಂತೆ ಬಡತನವನ್ನೇ ಸರಳಜೀವನವನ್ನಾಗಿ ಮಾರ್ಪಡಿಸಿಕೊಂಡರು. ಅವರ ಬದುಕು ಇನ್ನೇನು ತೊಡಕಿಗೆ ಸಿಕ್ಕಿಕೊಂಡಿತು ಎನ್ನುವಾಗ ಸರ್ಕಾರ (ಕರ್ನಾಟಕ) ಶಾಸ್ತ್ರಿಗಳಿಗೆ ಗೌರವ ಮಾಸಿಕ ಧನವನ್ನು ಮಂಜೂರು ಮಾಡುವುದರ ಮೂಲಕ ಆಸರೆಗೆ ನಿಂತಿತ್ತು. ಮಾಶಾಸನವನ್ನು ಶಾಸ್ತ್ರಿಗಳು ತಮ್ಮ ಹಕ್ಕೆಂದು ಪರಿಭಾವಿಸದೆ ಮಹದುಪಕಾರವೆಂದು ತಮ್ಮ ಜೀವನ ಸ್ಮೃತಿಗಳು ಪುಸ್ತಕದಲ್ಲಿ ಬರೆದುಕೊಂಡಿದ್ದಾರೆ. ಸ್ವಾಭಿಮಾನಿಗಳು ಆಪ್ತ ಬಂಧು ಬಳಗದವರಿಂದ ಸಹಾಯವನ್ನು ಪಡೆಯಲು ಇಷ್ಟಪಡುವುದಿಲ್ಲ. ಯಾರಿಗೂ ಹೊರೆಯಾಗಬಾರದೆಂಬ ಆತ್ಮನಿಷ್ಠೆಗೆ ಬದ್ಧರಾಗಿ ಬದುಕು ನಡೆಸುತ್ತಾರೆ. “ವಿದ್ವತ್ತುಸ್ದಾರಿದ್ರತಾಂ' ಎಂಬುದೊಂದು ಉಕ್ತಿಯುಂಟು. ವಿದ್ವಜ್ಜನರು ಅವರವರ ಜಾಯಮಾನಕ್ಕೆ ತಕ್ಕಂತೆ ದರಿದ್ರರಾಗಿಯೇ ಉಳಿಯುತ್ತಾರೆ. ಶಿವಮೂರ್ತಿ ಶಾಸ್ತ್ರಿಗಳು ತಮ್ಮ ಬದುಕಿಗೆ ಆಸರೆಯಾದ ಮಾಶಾಸನ ಮುಂಜೂರಾದಾಗ ಕೃತಜ್ಞತಾ ಭಾವದಿಂದ ಸರ್ಕಾರವನ್ನು, ಆಡಳಿತ ನಡೆಸುತ್ತಿದ್ದ ಮುಖ್ಯ ಮಂತ್ರಿಗಳನ್ನು ಸ್ಮರಿಸಿ ಬರೆದುಕೊಂಡ ಮಾತುಗಳಲ್ಲಿ ಆಗಿನ ಅವರ ಸ್ಥಿತಿಗತಿಗಳು ತಿಳಿದುಬರುತ್ತವೆ.

ಈಗ ನಾನು (1974) ಬೆಂಗಳೂರಿನ ರಾಜಾಜಿನಗರದಲ್ಲಿ 'ಶಿವಪ್ರಸಾದ' ಎಂಬ ಆಶ್ರಮವನ್ನು ಸ್ಥಾಪನೆ ಮಾಡಿಕೊಂಡು ವಿಶ್ರಾಂತಿ ಜೀವನ ನಡೆಸುತ್ತಿದ್ದೇನೆ. ಹೀಗೆ ಮನುಷ್ಯರು ಪ್ರಾರಂಭಿಸುವ ಕಾರ್ಯ ಎಂದಾದರೂ ಒಂದು ದಿನ ನಿಲ್ಲಬೇಕಾಗುತ್ತದಷ್ಟೆ? ಹುಟ್ಟಿದ ಸೂರ್ಯ ಮುಳುಗಲೇಬೇಕು. ಕಟ್ಟಿದ ಬುತ್ತಿಯು ತೀರಲೇಬೇಕು ಪ್ರಯಾಣ ಹೊರಟ ರೈಲುಗಾಡಿ ಎಲ್ಲಾದರೂ ಒಂದು ಕಡೆ ನಿಲ್ಲಲೇಬೇಕು ಎಂಬ ವಿಧಿ ನಿಯಮದಂತೆ 1922 ನೇ ವರ್ಷದಲ್ಲಿ ನಾವು ಪ್ರಾರಂಭಿಸಿದ ಸೇವಾ ಕಾರ್ಯವು ಐವತ್ತು ವರ್ಷಗಳ ಕಾಲ ಆಗಿ 1972 ರಲ್ಲಿ ಮುಕ್ತಾಯಗೊಂಡಿದೆ. ಈ ಕಷ್ಟಕರವಾದ ಸಂದರ್ಭದಲ್ಲಿ ನನ್ನ ಜೀವನದ ಅಂತಿಮಘಟ್ಟದಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ ಡಿ.ದೇವರಾಜೇಅರಸ್ ಮತ್ತು ಅವರ ಮಂತ್ರಿಮಂಡಲದವರು ಸರ್ಕಾರದಿಂದ

ಉದಾರವಾಗಿ ತಿಂಗಳಿಗೆ 500/- ರೂಪಾಯಿ ವಿಶ್ರಾಂತಿ ವೇತನವನ್ನು ಕೊಟ್ಟು ನಾನು ನಿಶ್ಚಿಂತನಾಗಿ ಬಾಳಲು ನೆರವಾಗಿದ್ದಾರೆ. ಘನ ಸರ್ಕಾರದವರ ಉದಾರ ಉಪಕಾರಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞನಾಗಿರುತ್ತೇನೆ."

ಇವು ಅವರ ಮನಸ್ಸಿನ ಅಂತರಾಳದ ಮಾತುಗಳಾದ್ದರಿಂದ ಇವುಗಳನ್ನು ಸಂಪ್ರದಾಯಕ ನುಡಿಗಳೆಂದು, ತಿಳಿಯುವಂತಿಲ್ಲ. ಶಾಸ್ತ್ರಿಗಳು ಅನೇಕ ಕಡೆ ಬದುಕಿನ ಬವಣೆಗಳನ್ನು ಸೂಕ್ಷ್ಮವಾಗಿ ಚಿತ್ರಿಸಿ ಕೊಂಡಿದ್ದಾರೆ.

"ಕಷ್ಟಕರ ಮನೆತನದಿ ಹುಟ್ಟಿ ಬಂದವನಾನು
ಕಷ್ಟಕಾರ್ಪಣ್ಯಗಳ ನನುಭವಿಸಿದೆ
ಶಿಷ್ಟೆ ನಿನ್ನಿಂದ ಸುಖವಹುದು ಎಂದಿದ್ದೆ
ಕಷ್ಟ ತಮ ಎನಿಸಿಹುದು ಎನ್ನ ಬಾಳು"

ಪಟ್ಟಪಾಡು ಇಲ್ಲಿ ಹಾಡಾದುದರ ಹಿಂದೆ ಶಾಸ್ತ್ರಿಗಳ ಜೀವನಾನುಭವ ಹೆಪ್ಪುಗಟ್ಟಿದೆ. ಚಿಕ್ಕ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಳ್ಳಬಾರದು, ಅಪರ ವಯಸ್ಸಿನಲ್ಲಿ ಧರ್ಮಪತ್ನಿಯನ್ನು ಕಳೆದುಕೊಳ್ಳಬಾರದೆಂಬ ಲೋಕೋಕ್ತಿಯಿದೆ. ಇಂಥ ಸ್ಥಿತಿಗೊಳಗಾದವರು ಎರಡೆರಡು ಸಲ ತಬ್ಬಲಿತನವನ್ನು ಅನುಭವಿಸಬೇಕಾಗುತ್ತದೆ. ಶಿವಮೂರ್ತಿಶಾಸ್ತ್ರಿಗಳು ಎರಡಲ್ಲ ಮೂರುಸಲ ಸಂಸಾರದಲ್ಲಿ ತಬ್ಬಲಿಗಳಂತೆ ಪರಿವರ್ತಿಸಿದ್ದಾರೆ. ಯೌವನದಲ್ಲಿ ಹಿರಿಯ ಹೆಂಡತಿಯನ್ನು ವೃದ್ಧಾಪ್ಯದಲ್ಲಿ ಎರಡನೆಯ ಹೆಂಡತಿಯನ್ನು ಕಳೆದುಕೊಂಡು ಅನಾಥ ಸ್ಥಿತಿಯನ್ನು ಅನುಭವಿಸಿದ್ದಾರೆ, ಬಾಲ್ಯದಲ್ಲಿಯೇ ತಾಯಿ ಮಮತೆಯಿಂದ ವಂಚಿತರಾದ ಈ ಸಾರಸ್ವತ ಕುಂಜರ ಸರಸ್ವತಿಯ ಅಂಬಾರಿ ಹೊತ್ತು ಹಣ್ಣಾಗಿದೆ.

'ದುಂಬಿನಾದ' ಎಂಬ ಶೀರ್ಷಿಕೆಯುಳ್ಳ ಪದ್ಯ ಸಂಕಲನವನ್ನು ಶಾಸ್ತ್ರಿಗಳು ಪ್ರಕಟಿಸಿ ನವೋದಯ ಸಾಹಿತ್ಯದ ಎಳೆಬಿಸಿಲಿನಲ್ಲಿ ತಾವೂ ಹಲವಾರು ಚೌಪದಿಗಳನ್ನು ರಚನೆ ಮಾಡಿದರು. ಅವರ ಕಾವ್ಯ ಭಾಷೆ ಹೊಸತನದಿಂದ ಮೈತುಂಬಿಕೊಳ್ಳಲಿಲ್ಲ. ಶಾಸ್ತ್ರಿಗಳಿಗೆ ಇಂಗ್ಲೀಷ್ ಸಾಹಿತ್ಯದ ಪರಿಚಯವಿರಲಿಲ್ಲ. ದೇಸೀ ಛಂದಸ್ಸಿನ ಚೌಪದಿ ಅವರಿಗೆ ಪ್ರಿಯವಾದ ಆಯ್ಕೆಯಾಗಿತ್ತು. ನನಗೆ ತಿಳಿದಂತೆ ಶಾಸ್ತ್ರಿಗಳ ಕಟ್ಟಕಡೆಯ ಚೌಪದಿ ಧರ್ಮಪತ್ನಿ ಮುದ್ದುವೀರಮ್ಮನವರ ಅಗಲಿಕೆಯಿಂದ ದುಃಖಿತರಾಗಿ ರಚಿಸಿದ ಸಂತಾಪ ಪದ್ಯವೇ ಇರಬೇಕು. ಬದುಕು ಮತ್ತು ಬರಹದ ಸ್ಫೂರ್ತಿಯ ಸೆಲೆಯಾಗಿದ್ದ ಧರ್ಮಪತ್ನಿ ಮುದ್ದುವೀರಮ್ಮನವರು ಇನ್ನಿಲ್ಲವಾದ ನಂತರ ಶಾಸ್ತ್ರಿಗಳ ಎಲ್ಲ ಸಾರಸ್ವತ ಚಟುವಟಿಕೆಗಳು ನಿಂತೇ ಹೋದವು. ವಿದ್ವತ್ ಜೊತೆ ವೃದ್ಧಾಪ್ಯವೂ ಪ್ರಾಪ್ತವಾದಂತೆ ಶಕ್ತಿಗುಂದಿದರು.

ದಿನವು ಕಳೆದಂತೆಲ್ಲ ದುಃಖವದು ಬೆಳೆಯುತ್ತಿದೆ.
ಮನವು ಮಂಕಾಗುತ್ತಿದೆ ಶಕ್ತಿಯುಡುಗುತ್ತಿದೆ.
ವಿನುತೆ ತೈಲವದಿಲ್ಲ ದಿರ್ಪ ದೀಪದ ತೆರದಿ
ಮಿಣುಕುತಿಹ ಹಣತೆಯಂತೆನ್ನ ಪರಿಯು

ಜೀವನೋತ್ಸಾಹವೇ ಉಡುಗಿದಂತೆ ಕಂಗಾಲಾದ ಶಾಸ್ತ್ರಿಗಳು (ಜೀವನ ಸ್ಮೃತಿಗಳು. ಪ್ರ (68) ಹಿತೈಷಿಗಳ ಒತ್ತಾಯದ ಮೇರೆಗೆ 'ಜೀವನ ಸ್ಮೃತಿಗಳು' ಎಂತೆಂಬ ಆತ್ಮ ಚರಿತ್ರೆಯನ್ನು ಬರೆದರು. ಅದು ಅಸಮಗ್ರತೆಯ ಕೊರತೆಯಿಂದ ಹೊರತಾಗಲಿಲ್ಲ. ಡಿ.ವಿ.ಜಿಯವರು 'ಜ್ಞಾಪಕ ಚಿತ್ರ ಶಾಲೆ' ಬರೆದಂತೆ ಶಾಸ್ತ್ರಿಗಳು ತಮ್ಮ ಜೀವನಾನುಭವದ ನವನೀತವನ್ನು ಬರಹದ ರೂಪಕ್ಕೆ ಇಳಿಸಿದ್ದಿದ್ದರೆ ಅವರ ಜೀವನಾನುಭವದ ನಿಧಿ ಅವರ ಜೊತೆ ಕಣ್ಮರೆಯಾಗುತ್ತಿರಲಿಲ್ಲ. ಶಾಸ್ತ್ರಿಗಳು ಪತ್ನಿವಿಯೋಗದಿಂದ ದಿಗ್ಮೂಢರಾದದ್ದು ಸುಳ್ಳಲ್ಲ 'ಶೂಲಪಾಣಿ' ಭಾವಜೀವಿಯಾದ್ದರಿಂದ ಬಾಳಸಂಗಾತಿಯೊಡನೆ ಅಪರ ವಯಸ್ಸಿನ ಬದುಕನ್ನು ನಿರುಮ್ಮಳವಾಗಿ ನಡೆಸುವ ಯೋಗದಿಂದ ವಂಚಿತರಾದರು. ಪತ್ನಿವಿಯೋಗದ ಅಳಲನ್ನು ಮರೆಯಲು ಅವರು ಸಾರಸ್ವತ ಚಟುವಟಿಕೆಗಳಲ್ಲಿ ಮಗ್ನರಾಗಿದ್ದಿದ್ದರೆ ಆ ಮಾತು ಬೇರೆಯದೇ ಆಗಿತ್ತು. ಜೀವನದುದ್ದಕ್ಕೂ ಜನಸಂದಣಿಯ ಜೊತೆ ಸಾಹಿತ್ಯ ಸೌಖ್ಯವನ್ನು ಹಂಚಿಕೊಂಡು ಸಂತಸಪಡುತ್ತಿದ್ದ ಶಾಸ್ತ್ರಿಗಳು ಏಕಾಂತಕ್ಕೆ ಶರಣಾಗಿಬಿಟ್ಟರು. ಹೆಂಡತಿಯ ಕೈಯಡುಗೆಯ ರುಚಿ ಭೋಜನ ಪ್ರಿಯರಾಗಿದ್ದ ಶಾಸ್ತ್ರಿಗಳನ್ನು ಪತ್ನಿಯಿಲ್ಲದ ನಂತರದ ಕಾಲ ತುಂಬಾ ಘಾಸಿಗೊಳಿಸಿತ್ತು.

ಮರೆಯಲಾರೆನು ನಿನ್ನ ಸತ್ಯ ಸೌಂದರ್ಯವಂ
ಮರೆಯಲಾರೆನು ನಿನ್ನ ಸವಿ ನುಡಿಗಳಂ
ಮರೆಯಲಾರೆನು ನಿನ್ನ ಊಟೋಪಚಾರವಂ
ಧರೆಯೊಳು ನಾನಿರ್ಪ ಪರಿಯಂತ ವು

ಮುದ್ದುವೀರಮ್ಮನವರು ಆದರ್ಶ ಗೃಹಿಣಿಯಾಗಿದ್ದರೆಂಬುದರಲ್ಲಿ ಎರಡು ಮಾತಿಲ್ಲ. ಲೋಕ ಸಂಚಾರದಿಂದ, ಕಾವ್ಯಾನುಭವದಿಂದ, ಧೀಮಂತರಾಗಿದ್ದು ಶಾಸ್ತ್ರಿಗಳು ಹೆಂಡತಿಯನ್ನು ಕುರಿತು ಹಾಡಿಕೊಂಡಿರುವ ಪ್ರಶಂಸಾ ಸಾಲುಗಳಲ್ಲಿ ವಾಸ್ತವ ಸಂಗತಿಗಳಿವೆ. ಕವಿ ಪಡೆಯುವ ಕೀರ್ತಿಯ ಬೆನ್ನಲ್ಲಿ ಆತನ ಪತ್ನಿಯಿರುತ್ತಾಳೆ ಆಕೆ 'ಸತ್ಕಳತ್ರ' ಎಂಬ ಗುಣವಾಚಕದಿಂದ ಕರೆಯಲ್ಪಡುತ್ತಾಳೆ ಎಂಬ ಮಾತು ಸತ್ಯವಾದುದು.

ಬಿದ್ದು ಹೋಗಿದ್ದೆನ್ನ ಮನೆಯನುದ್ಧರಿಸಿದೌ
"ಮುದ್ದು' ನಿನ್ನಯ ಸತ್ಯ ನಿಷ್ಠೆಯಿಂದ
ಸದ್ದಿಲ್ಲದಂತೆ ಸಂಸಾರವನ್ನು ನಡೆಸುತ್ತೆ
ಉದ್ಧರಿಸಿದೆ ನಮ್ಮನೆಲ್ಲ ನೀನು;

ಶಾಸ್ತ್ರಿಗಳು ಕ್ಷಡಕ್ಷರದೇವನ ರಾಜಶೇಖರ ವಿಳಾಸವನ್ನು ಕುರಿತು ಪ್ರವಚನ ನಡೆಸುತ್ತಿದ್ದಾಗ, ಹರಿಶ್ಚಂದ್ರ ಕಾವ್ಯವನ್ನು ಕುರಿತು ಕೀರ್ತನೆ ನಡೆಸುವಾಗ, ರಾಜಶೇಖರ ವಿಳಾಸದ ತಿರುಕೊಳವಿನಾಚಿ ತನ್ನ ಪುತ್ರನನ್ನು ಕಳೆದುಕೊಂಡು ಪ್ರಲಾಪಿಸುವ ಪದ್ಯಗಳನ್ನು ಭಾವಪೂರ್ಣವಾಗಿ ಹಾಡಿ ಸಹಸ ಸಹಸ್ರ ಕಣ್ಣುಗಳಲ್ಲಿ ಕಂಬನಿ ಹರಿಯಿಸಿದ್ದವರು, ಚಂದ್ರಮತಿಯ ಪ್ರಲಾಪವನ್ನು ಹೇಳುವಾಗ ನಾರಿಯರ ಹೃದಯವನ್ನು ಆದ್ರಗೊಳಿಸಿದವರು.

ಮರುಕ್ಷಣವೇ ಹಾಸ್ಯದ ಉಪಕತೆಗೆ ಹೊರಳಿ ಸಭಿಕರ ಕಂಬನಿಯ ಹೊಳಪು ಮಾಸುವ ಮುನ್ನ ತುಟಿಯರಳಿಸಿ ಬೆಳ್ಳನೆ ನಗೆ ಹಂಚಿದವರು. ಆದರೆ ಪತ್ನಿಯ ಅಗಲಿಕೆಯ ದುಃಖವನ್ನು ಸಹಿಸಲು ಅಶಕ್ತರಾದರೆಂದೇ ಕಾಣುತ್ತದೆ. ಮುದ್ದುವೀರಮ್ಮನವರು ಅತಿಥಿ ಸತ್ಕಾರದಲ್ಲಿ ಶಿಖರಗಾಮಿಗಳಾಗಿದ್ದವರು. ಅವರು ಬಡಿಸಿದ ಭೋಜನ ವುಂಡವರು ಅವರನ್ನೆಂದಿಗೂ ಮರೆಯುತ್ತಿರಲಿಲ್ಲ. 'ಜೀವನಸ್ಮೃತಿಗಳು' ಪುಸ್ತಕದಲ್ಲಿ ಉಲ್ಲೇಖವಾಗಿರುವ ಹಲಗೂರು ಸುಬ್ಬಣ್ಣ ಎಂಬ ಸಾಹಿತಿಗಳ ಮಾತುಗಳು ಇದಕ್ಕೆ ಸಾಕ್ಷಿ.

"ಚುರುಕು ಬುದ್ಧಿಯುಳ್ಳ ಶ್ರೀಮತಿ ಮುದ್ದುವೀರಮ್ಮನವರು ಮನೆಗೆಲಸಗಳಲ್ಲಿ ಚುರುಕಾಗಿದ್ದರು. ಅವರು ತಮಿಳುನಾಡು, ಮತ್ತು ಕನ್ನಡನಾಡು ಎರಡೂ ಕಡೆಯ ಅಡುಗೆಯಲ್ಲಿಯು ನಿಪುಣರಾಗಿದ್ದರು. ಶುದ್ಧ ಮನಸ್ಸಿನಿಂದ ಸಿದ್ಧಗೊಳಿಸಿದ ಪ್ರಸಾದವು ಅನುಭವಾಮೃತ- ರಸಾಯನ ಎಂಬಂತಿರುತ್ತಿತ್ತು. ಅವರ ಮನೆಗೆ ಅತಿಥಿಗಳಾಗುವುದೇ ಒಂದು ಭಾಗ್ಯವೆಂದು ಜನರು ಭಾವಿಸಿದ್ದರು. ನೆರೆ-ಹೊರೆಯ ಜನರಿಗೆ ಶ್ರೀಮತಿ ಮುದ್ದುವೀರಮ್ಮನವರಲ್ಲಿ ತುಂಬಾ ಗೌರವ. ಆಕೆಯನ್ನು ಒಬ್ಬ ಆದರ್ಶ ಗೃಹಿಣಿ, ಶಿವಶರಣೆ ಎಂದು ಜನರು ಕರೆಯುತ್ತಿದ್ದರು. ತಮಿಳುನಾಡಿನಲ್ಲಿ ಹುಟ್ಟಿ ಕನ್ನಡನಾಡಿನಲ್ಲಿ ಕಂಕಣವನ್ನು ಕಟ್ಟಿಕೊಂಡ ಆ ಮಹಾತಾಯಿ ಉಭಯ ದೇಶಗಳ ಒಂದು ಪ್ರೇಮದ ಸೇತುವೆಯಾಗಿದ್ದರು ....' 'ಹೆಣ್ಣು ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಗಂಡ ಸಾಯಬಾರದು. ಗಂಡಸರಿಗೆ ಮುಪ್ಪಿನಲ್ಲಿ ಹೆಂಡತಿ ಸಾಯಬಾರದು' ಎಂಬ ಲೋಕೋಕ್ತಿಯು ಪ್ರಸಿದ್ಧವಾಗಿದೆಯಲ್ಲವೇ? ಶಿವಮೂರ್ತಿಶಾಸ್ತ್ರಿಗಳ ವೀರಶೈವ ಸಾಹಿತ್ಯದ ಸಂಶೋಧನಾ ಬರಹಗಳು ಹೆಚ್ಚು ಹೆಚ್ಚು ಹೆಸರು ಮಾಡುತ್ತಿದ್ದ ಕಾಲದಲ್ಲಿ ಪತ್ನಿ ಮುದ್ದುವೀರಮ್ಮನವರು ತಮಿಳು ಸಾಹಿತ್ಯದಲ್ಲಿದ್ದ ಶಿವಶರಣರ ವಿಚಾರಗಳನ್ನು ಪತಿಗೆ ತಮಿಳಿನಿಂದ ಕನ್ನಡಕ್ಕೆ ಭಾಷಾಂತರಿಸಿ ಹೇಳುತ್ತಿದ್ದರು. ತಮಿಳಿನ ತೇವಾರ, ತಿರುವಾಚಕಂ, ತಿರುಕುರಳ್, ಪ್ರಭುಲಿಂಗಲೀಲೆ, ಬಸವಪುರಾಣಂ ಪೆರಿಯ ಪುರಾಣಂ ಮೊದಲಾದುವುಗಳನ್ನು ಓದಿ ಹೇಳುತ್ತಾ ಶಾಸ್ತ್ರಿಗಳಿಗೆ ನೆರವಾಗುತ್ತಿದ್ದರು.

ಮುದ್ದುವೀರಮ್ಮನವರು ಬಿಟ್ಟು ಹೋದ ಸಂಪತ್ತು ಯಾವುದು? ಎನ್ನುವುದಾದರೆ ಅದು ಅವರ ಏಕಮಾತ್ರ ಪುತ್ರ ಎಚ್.ಎಸ್. ಶಿವಪ್ರಕಾಶ್, ಇಂಗ್ಲೀಷ್‌ನಲ್ಲಿ ಅತಿಹೆಚ್ಚಿನ ವ್ಯಾಸಂಗ ಮಾಡಿ ಕನ್ನಡದ ಕವಿ ಹಾಗೂ ನಾಟಕಕಾರರಾಗಿ ಹೆಸರುಮಾಡಿ ತಾಯಿಗೆ ತಕ್ಕಮಗ ಎನಿಸಿಕೊಂಡರು. ಮುದ್ದುವೀರಮ್ಮನವರಿಗೆ ತಮಿಳುನಾಡಿನಲ್ಲಿ ಪ್ರಸಿದ್ಧರಾಗಿದ್ದ ವೀರಶೈವ ಕವಿ ತೊರೈಮಂಗಲಂ ಶಿವಪ್ರಕಾಶ ಸ್ವಾಮಿಗಳ ಬಗ್ಗೆ ತುಂಬಾ ಭಕ್ತಿ ಗೌರವಗಳಿದ್ದವು. ಅವರಂತೆ ತಮ್ಮ ಮಗನೂ ಪ್ರಸಿದ್ಧನಾಗಬೇಕೆಂಬ ಹಂಬಲದಿಂದ ಹಡೆದ ಮಗನಿಗೆ 'ಶಿವಪ್ರಕಾಶ' ಎಂದು ಹೆಸರಿಟ್ಟರಂತೆ. ತಾಯಿ ಹರಕೆ ಕೈಗೂಡಿದುದನ್ನು ನಾವು ಕಾಣಬಹುದಾಗಿದೆ.

ಅಪರೂಪದ ಅತಿಥಿಯಾಗಿ ಶಾಸ್ತ್ರಿಗಳೆಡೆಗೆ ಬರುತ್ತಿದ್ದ ಹಲಗೂರು ಸುಬ್ಬಣ್ಣನವರು ಕೇವಲ ಹತ್ತಾರು ಊಟಗಳನ್ನು ಶಾಸ್ತ್ರಿಗಳ ಜೊತೆಯಲ್ಲಿ ಉಂಡು ಆ ಸವಿಯನ್ನು ತಮ್ಮ ಲೇಖನದಲ್ಲಿ ಹೇಳಿಕೊಂಡು ಗತಿಸಿದ ಶರಣೆ ಮುದ್ದುವೀರಮ್ಮನವರನ್ನು ಕೊಂಡಾಡಿದ್ದಾರೆಂದರೆ ಅವರು ಮಹಾ ಸಾಧ್ವಿಯಾಗಿದ್ದರೆಂದೇ ತಿಳಿಯಬೇಕು. ವಿವಾಹ ಪೂರ್ವದಲ್ಲಿ ಮುದ್ದುವೀರಮ್ಮನವರು ಪೆರೈಯೂರಿನ ಹೆಣ್ಣುಮಕ್ಕಳ ಶಾಲೆಯಲ್ಲಿ 'ಟೀಚರ್' ಆಗಿದ್ದವರು.

“ಜನನಿಯಿಂದ ಪಾಠಕಲಿತ ಜನರು ಧನ್ಯರು” ಎಂಬ ಕವಿವಾಣಿ ದಿಟವಾದಂತೆ ಶಿವಪ್ರಕಾಶ ಟೀಚರಮ್ಮನ ಮಗನಾದ್ದರಿಂದ ಉತ್ತಮ ನಾಟಕಕಾರನೂ, ಕವಿಯೂ ಹಲವಾರು ಭಾಷೆಗಳಲ್ಲಿ ಪಂಡಿತನೂ ಆಗಿದ್ದಾನೆ. ಶತಮಾನದ ಸಾಹಿತ್ಯವಲಯದಲ್ಲಿ ಶಿವಮೂರ್ತಿ ಶಾಸ್ತ್ರಿಗಳಿಗೆ ದೊರೆತಷ್ಟು ಮನ್ನಣೆ, ಗೌರವ, ಬಿರುದುಗಳು ಬೇರಾರಿಗೂ ದೊರೆಯಲಿಲ್ಲ. ಬಿರುದುಗಳ ಪ್ರವಾಹದಲ್ಲಿ ಶಿವಮೂರ್ತಿಶಾಸ್ತ್ರಿಗಳ ಹೆಸರು ಕೊಚ್ಚಿಹೋಯಿತೆನ್ನುವ ಮಟ್ಟಿಗೆ ಅನೇಕ ಬಿರುದುಗಳು ಪ್ರಾಪ್ತವಾದವು. ಅರಮನೆ-ಗುರುಮನೆಗಳೆರಡರ ನಿಕಟ ಸಂಪರ್ಕ ಹೊಂದಿದ್ದ ಶಾಸ್ತ್ರಿಗಳು ಲಭ್ಯವಾದ ಬಿರುದುಗಳನ್ನು ಮಹಾಪ್ರಸಾದವೆಂಬಂತೆ ಸ್ವೀಕರಿಸಿದರು. ಮೈಸೂರು ಮಹಾರಾಜರಿಂದ 'ಪಂಡಿತರತ್ನಂ' ಎಂಬ ಬಿರುದೂ, ಆಸ್ಥಾನ ವಿದ್ವಾನ್ ಎಂಬ ಗೌರವ ಪ್ರಶಸ್ತಿಗಳ ಜೊತೆ ರಾಜಮರ್ಯಾದೆಯ ಮೇರು ಕೊಡುಗೆಯಾದ 'ಗಂಡ ಭೇರುಂಡ ಲಾಂಛನವುಳ್ಳ ಬಂಗಾರದ ಕಂಕಣ ಶಾಸ್ತ್ರಿಗಳಿಗೆ ದೊರೆತಿತ್ತು. ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳಿಗೂ ಇಂತಹ ರತ್ನ ಖಚಿತವಾದ 'ಕಂಕಣ' ದೊರೆತಿತ್ತು. ಶಿವಮೂರ್ತಿಶಾಸ್ತ್ರಿಗಳು ಬಸವಪ್ಪಶಾಸ್ತ್ರಿಗಳ ಶಿಷ್ಯರು. ಶಾಸ್ತ್ರಿಗಳ ಗುರು ಪಿ.ಆರ್. ಕರಿಬಸವಶಾಸ್ತ್ರಿಗಳಿಗೆ ಬಸವಪ್ಪಶಾಸ್ತ್ರಿಗಳು ಗುರುಗಳಾಗಿದ್ದರು.

ಚಿತ್ರದುರ್ಗದ ಬೃಹ್ಮನಠದಿಂದ ಶಾಸ್ತ್ರಿಗಳಿಗೆ ಕೀರ್ತನಾಚಾರ್ಯ ಎಂಬ ಪ್ರಶಸ್ತಿ ದೊರೆತಿತ್ತು. ಶ್ರವಣಬೆಳುಗೊಳದ ಸಿದ್ಧಸಿಂಹಾಸನದಿಂದ 'ಕೀರ್ತನ ವಿಚಕ್ಷಣ' ಎಂಬ ಬಿರುದು ಪ್ರಾಪ್ತವಾಯಿತು. 'ಕೀರ್ತನ ಕೇಸರಿ' ಎಂಬ ಬಿರುದು ಶಾಸ್ತ್ರಿಗಳಿಗೆ ಸಾರ್ವಜನಿಕ ಸನ್ಮಾನ ಸಮಾರಂಭದಲ್ಲಿ ದೊರೆತಿತ್ತು. ಬಹುಶಃ ಇದು ಶಾಸ್ತ್ರಿಗಳಿಗೆ ದೊರೆತ ಮೊಟ್ಟಮೊದಲ ಬಿರುದು. 1960 ರ ಇಸವಿಯಲ್ಲಿ ಭಾರತ ರಾಷ್ಟ್ರಾಧ್ಯಕ್ಷರಿಂದ 'ಪದ್ಮಶ್ರೀ' ಗೌರವ ಪ್ರಶಸ್ತಿ ದೊರೆಯಿತು. ರಂಭಾಪುರೀ ಜಗದ್ಗುರು ಶಿವಾನಂದಸ್ವಾಮಿಗಳು ಶಾಸ್ತ್ರಿಗಳಿಗೆ 'ಕವಿರತ್ನ' ಎಂಬ ಬಿರುದನ್ನು ನೀಡಿ ಗೌರವನೀಡಿದ್ದಾರೆ. ಶ್ರೀಶೈಲದ ಜಗದ್ಗುರು ವಾಗೀಶಪಂಡಿತಾರಾಧ್ಯರು “ವಿಮರ್ಶನಾಚಾರ್ಯ” ಎಂಬ ಬಿರುದು ನೀಡಿದ್ದಾರೆ. ಕಾಶಿಜಗದ್ಗುರುಗಳು “ಕರ್ನಾಟಕ ವಿಭೂಷಣ” ಎಂಬ ಗೌರವ ನೀಡಿದ್ದಾರೆ. 1975 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿವೆ.

ಇಷ್ಟೆಲ್ಲ ಪ್ರಶಸ್ತಿ, ಬಿರುದು. ಸನ್ಮಾನಗಳ ಸರಮಾಲೆ ಶಾಸ್ತ್ರಿಗಳ ಹೆಗಲು ಕೊರಳುಗಳಿಗೆ ಭಾರವೆನಿಸಲಿಲ್ಲ. ದೊರೆತ ಗೌರವಗಳೆಲ್ಲ ಕನ್ನಡ ಸಾಹಿತ್ಯಸೇವೆಗೆ ಎಂದು ಭಾವಿಸಿ ಅಪರವಯಸ್ಸಿನವರೆಗೆ ಶರಣ ಸಾಹಿತ್ಯದ ಪ್ರಕಟಣೆಗೆ ಹೆಣಗಿದರು. ಬಂದಿದ್ದ ಬಂಗಾರದ ಪದಕಗಳು. ಗೌರವಾದಿ ಧನಗಳು ಮುದ್ರಣಾಲಯ ರಾವಣಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಾದವು. ಶಾಸ್ತ್ರಿಗಳು ತಾವು ಎದುರಿಸಿದ ಸಂಕಷ್ಟಗಳ ಸರಮಾಲೆಯನ್ನು ಎಲ್ಲಿಯೂ ದಾಖಲೆ ಮಾಡಿಲ್ಲ. ಬರವಣಿಗೆಯ ತುಂಬಾ ಶರಣಸಾಹಿತ್ಯ, ಕರ್ನಾಟಕ ವೈಭವ, ಮುಂತಾದುವೇ ಆವರಿಸಿಕೊಂಡಿದ್ದವು. ವಿಪರ್ಯಾಸವೆಂದರೆ ಶಾಸ್ತ್ರಿಗಳ ಬದುಕು ವೃತ್ತಿರಂಗ ಕಲಾವಿದರ ಬದುಕಿನಂತೆ ಸಹಸ್ರ ತೋಳಿನ ವೃಕ್ಷದ ಕೊಂಬೆ ರೆಂಬೆಗಳು ಒಂದೊಂದೇ ಒಣಗುತ್ತಾ ಬಂದವು. ಕಟ್ಟಕಡೆಗೆ ಸರ್ಕಾರದಿಂದ ಮಾಶಾಸನ ಪಡೆದು ಜೀವಿಸಬೇಕಾದ ಪರಿಸ್ಥಿತಿಯೊದಗಿದುದು ಗೋಪ್ಯವಾಗಿ ಉಳಿಯಲಿಲ್ಲ. ಜೀವಮಾನದ ಪರ್ಯಂತ

ಸಂಗ್ರಹಿಸಿದ ತಾಡವಾಲೆ ಗ್ರಂಥಗಳನ್ನು ವಿಶ್ವವಿದ್ಯಾಲಯಗಳಿಗೆ ದಾನ ಮಾಡಿ ದಾನಶೂರರಾದರು. ಇವರಿಂದ ದಾನ ಪಡೆದ ಸಂಸ್ಥೆಗಳು ಅಮೂಲ್ಯ ಗ್ರಂಥಗಳನ್ನು ಸಾರ್ಥಕ ಪಡಿಸಿಕೊಳ್ಳದೇ ಹೋದರೆ ಶಾಸ್ತ್ರಿಗಳ ಮಹತ್ವಾಕಾಂಕ್ಷೆಗೆ ಭಂಗವುಂಟು ಮಾಡಿದಂತಾದೀತು.

ಕೀರ್ತಿಶೇಷತ್ವ ಪ್ರಾಪ್ತವಾಗುವುದು ಧನ, ಕನಕ, ವಜ್ರ, ವೈಡೂರ್ಯಗಳಿಂದಲ್ಲ. ಒಬ್ಬ ಸಾಹಿತಿಯನ್ನು ಮತ್ತೊಬ್ಬ ಸಾಹಿತಿ ಪೂರ್ವಾಗ್ರಹಿತನಾಗದೆ ಮಾಡಿದ ಪ್ರಶಂಸೆಯಲ್ಲಿ ಚಿರಂಜೀವತ್ವ ಪ್ರಾಪ್ತವಾಗುತ್ತದೆ. ಶಿವಮೂರ್ತಿಶಾಸ್ತ್ರಿಗಳನ್ನು ಕುರಿತು ಅ.ನ. ಕೃಷ್ಣರಾಯರು ಕನ್ನಡ ಕುಲರಸಿಕರು ಎಂಬ ಗ್ರಂಥದಲ್ಲಿ ಬರೆದಿರುವ ಲೇಖನಕ್ಕೆ ಸರಿದೂಗುವ ಪ್ರಶಸ್ತಿ, ಬಿರುದಾವಳಿಗಳು ಇಲ್ಲವೆಂದೇ ನನ್ನ ನಂಬಿಕೆ, ಅ.ನ. ಕೃಷ್ಣರಾಯರ ಆ ಮಾತುಗಳನ್ನು ಇಲ್ಲಿ ಯಥಾವತ್ತಾಗಿ ಉಲ್ಲೇಖಿಸಿ ಶಿವಮೂರ್ತಿಶಾಸ್ತ್ರಿಗಳ ಸಾಧನಾ ವಿವರಗಳನ್ನೊಳಗೊಂಡ ಪರಿಚಯಕ್ಕೆ ತಾತ್ಕಾಲಿಕ ಮಂಗಳ ಹಾಡಬಹುದಾಗಿದೆ.

"ದೃಢ ಸಂಕಲ್ಪ ಅದನ್ನು ಕಾರ್ಯರೂಪಕ್ಕೆ ತರುವ ನಿಶ್ಚಲತೆ ಎರಡೂ ಮೂಡಿದ ಪಕ್ಷದಲ್ಲಿ ವ್ಯಕ್ತಿ ಏನನ್ನು ಬೇಕಾದರೂ ಸಾಧಿಸ ಬಹುದೆನ್ನುವುದಕ್ಕೆ ಬಿ. ಶಿವಮೂರ್ತಿಶಾಸ್ತ್ರಿಗಳ ಜೀವನ ಕೃತಿ ಯೋಗ್ಯ ನಿದರ್ಶನವಾಗಿದೆ."

"ಶಾಸ್ತ್ರಿಗಳ ವ್ಯಕ್ತಿತ್ವ ಅಸಾಮಾನ್ಯವಾದುದು. ಕಲ್ಲಿನಿಂದ ನೀರು ತೆಗೆಯಬಲ್ಲರು. ಒಣಗಿದ ಕಾಷ್ಠದಲ್ಲಿ ಹೂ ಅರಳಿಸಬಲ್ಲರು. ಕನ್ನಡ ನಾಡಿನಲ್ಲಿ ಅವರು ಹೋಗದ ಸ್ಥಳವಿಲ್ಲ ಕಾಣದ ವ್ಯಕ್ತಿಯಿಲ್ಲ"

"ಕೀರ್ತನಕಾರ ವೃತ್ತಿ ಶಾಸ್ತ್ರಿಗಳ ಅಭ್ಯುದಯಕ್ಕೆ ಕಾರಣವಾಯಿತು. ಮಹಾರಾಜರ ಅಭಿಮಾನ, ಗೌರವವನ್ನು ಅವರಿಗೆ ದೊರಕಿಸಿ ಕೊಟ್ಟಿತು. ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳಲ್ಲಿ ಕರ್ನಾಟಕ ವಿಜಯದ ಮೇಲೆ ಕೀರ್ತನೆ ಮಾಡಿ ಖ್ಯಾತರಾದರು"

... "ಶರಣಸಾಹಿತ್ಯ" ಆರಂಭಿಸಿದ ಎರಡು ವರ್ಷಗಳಲ್ಲಿ ಅವರಿಗೆ ಆಸ್ಥಾನ ವಿದ್ವಾನ್ ಪದವಿ ದೊರೆಯಿತು. ರಾಜಾಸ್ಥಾನಕ್ಕೆ ಪ್ರವೇಶ ದೊರೆತ ಮೇಲೆ 4 ವರ್ಷಗಳಲ್ಲಿ 'ಪಂಡಿತರತ್ನಂ' ಎಂಬ ಘನವಾದ ಪ್ರಶಸ್ತಿಯನ್ನು ದೊರಕಿಸಿಕೊಂಡರು. ಆಗ ಅವರ ವಯಸ್ಸು 46 ಪ್ರಾಯಶಃ ಇಷ್ಟು ಸಣ್ಣ ವಯಸ್ಸಿನಲ್ಲಿ ಇಂಥ ಘನ ಪ್ರಶಸ್ತಿಯನ್ನು ಮೈಸೂರಿನ ಅರಮನೆಯಲ್ಲಿ ಪಡೆದವರು. ಶ್ರೀ ಶಿವಮೂರ್ತಿಶಾಸ್ತ್ರಿಗಳು ಒಬ್ಬರೇ ಎಂದು ಹೇಳಬಹುದು. ವೀರಶೈವ ಸಾಹಿತ್ಯ, ವೀರಶೈವ ಚರಿತ್ರೆ ವೀರಶೈವರ ಹೆಚ್ಚುಗಾರಿಕೆ ಇವನ್ನು ಪ್ರಚಾರ ಮಾಡುವುದೇ ಶರಣ ಸಾಹಿತ್ಯದ ಉದ್ದೇಶವಾದರೂ, ಶಾಸ್ತ್ರಿಗಳು ಇತರ ಸಾಹಿತ್ಯ ಧರ್ಮಗಳನ್ನು ಅಲಕ್ಷ ಮಾಡಿಲ್ಲ. ಸರ್ವಧರ್ಮ ಸಮನ್ವಯವನ್ನು ಸಾಧಿಸಲು ಮತ್ತು ಸರ್ವಧರ್ಮವನ್ನು ಪರಿಚಯ ಮಾಡಿಕೊಡಲು ಈ ಪತ್ರಿಕೆ ತುಂಬಾ ಸಹಾಯಮಾಡಿದೆ.

ಶಾಸ್ತ್ರಿಗಳ ವ್ಯಕ್ತಿತ್ವದಲ್ಲಿ ಒಂದೆರಡು ಸ್ವಾರಸ್ಯಕರವಾದ ಗುಣಗಳು ಕಂಡು ಬರುತ್ತವೆ. ಆಗಾಗ್ಗೆ ದೊಡ್ಡ ದೊಡ್ಡ ಸಭೆಗಳನ್ನು ಕೂಡಿಸಿ ಹತ್ತು ಜನಗಳನ್ನು ಬಾಯಿ ತುಂಬಾ ಹೊಗಳಿ, ಅವರಿಂದ ತಾವೂ ಕೂಡ ಬಾಯಿತುಂಬಾ ಹೊಗಳಿಸಿಕೊಳ್ಳಬೇಕೆಂಬ ಹಂಬಲ ಇದೆ. ಶಾಸ್ತ್ರಿಗಳು ಉತ್ಸವ ಪ್ರಿಯರು, ಮತ್ತು ಸ್ನೇಹ ಪ್ರಿಯರು,

ಬೆಂಗಳೂರಿಗೆ ಬರುವ ಹಿರಿಯ ಕನ್ನಡಿಗರನ್ನು ತಮ್ಮ ಕಾರ್ಯಾಲಯಕ್ಕೆ ಬರಮಾಡಿಕೊಂಡು, ಆತಿಥ್ಯ ನೀಡಿದ ಹೊರತು ಶಾಸ್ತ್ರಿಗಳ ಮನಸ್ಸಿಗೆ ನೆಮ್ಮದಿಯಿಲ್ಲ. ಭಿನ್ನಾಭಿಪ್ರಾಯಗಳನ್ನು ಬೆಳೆಯಗೊಡದೆ, ವೈಯುಕ್ತಿಕ ಅವಿಶ್ವಾಸಕ್ಕೆ ಎಡೆಮಾಡದಂತೆ ಎಚ್ಚರಿಕೆಯಾಗಿರುವುದು ಶಾಸ್ತ್ರಿಗಳ ಹೆಚ್ಚಿನ ಗುಣ. ಅವರ ಜನಪ್ರಿಯತೆಯ ರಹಸ್ಯವೇ ಇದು.. ಸಹಾಯ ಕೋರಿದವರಿಗೆ ಇಲ್ಲವೆನ್ನುವುದು ಶಾಸ್ತ್ರಿಗಳ ಜಾಯಮಾನಕ್ಕೆ ಬಂದಿಲ್ಲ, ಅನೇಕ ಸಲ ತಮ್ಮ ಮಹತ್ವದ ಕೆಲಸಗಳನ್ನು ಬದಿಗೊತ್ತಿ ಕಂಡವರ ಕೆಲಸಕ್ಕೆ ತೊಡಗುತ್ತಾರೆ. ಪರರ ಸೇವೆಗೆ ತೊಡಗಿದಾಗ ತಮಗಾದ ಕಷ್ಟನಷ್ಟಗಳನ್ನು ಸಂತೋಷದಿಂದ ಸಹಿಸಿಕೊಳ್ಳುತ್ತಾರೆ.

ಶಾಸ್ತ್ರಿಗಳ ಬರವಣಿಗೆಯಲ್ಲಿ ಮೊನಚಿದೆ. ಕಾವಿದೆ. ವಿಚಾರ ವೀಕ್ಷಣೆಯೂ ಇದೆ. ಆಗಾಗ್ಗೆ ಅದು ಪುರಾಣ ಜಾಡನ್ನು ಹಿಡಿಯುವುದೂ ಉಂಟು. ಪುನರಾವರ್ತನೆಗಳು ಉತ್ಪ್ರೇಕ್ಷೆಗಳು ತಲೆ ಹಾಕುವುದುಂಟು. ಅವರ ಶೈಲಿಯಲ್ಲಿ ಜೀವವಿದೆ. ರಸವಿದೆ.

ಬಂಗಾರದ ಬಟ್ಟುಗಳಿಂದ ಸುವರ್ಣವನ್ನು ತೂಗಿದಂತಹ ಗಟ್ಟಿಮಾತುಗಳನ್ನು ಅ.ನ. ಕೃಷ್ಣರಾಯರ ಲೇಖನಿಯಿಂದ ದಕ್ಕಿಸಿಕೊಂಡ ಬಿ. ಶಿವಮೂರ್ತಿಶಾಸ್ತ್ರಿಗಳ ಪ್ರತಿಭೆ ಅನನ್ಯವಾದುದೆಂದು ಮತ್ತೆ ಮತ್ತೆ ಹೇಳಬೇಕಾಗಿಲ್ಲ.

ತಮ್ಮ ಸಾರಸ್ವತ ಜೀವಿತಾವಧಿಯಲ್ಲಿ ಅನೇಕ ಸಾಹಿತ್ಯದ ಹಾಗೂ ಧಾರ್ಮಿಕ ಸಂಘ ಸಂಸ್ಥೆಗಳೊಡನೆ ನಿಕಟ ಸಂಪರ್ಕ ಹೊಂದಿ ಅನೇಕ ರೀತಿಯ ಸೇವೆ ಸಲ್ಲಿಸಿದರು. ಸಾಹಿತ್ಯ ಅಕಾಡೆಮಿ, ನಾಟಕ ಅಕಾಡೆಮಿ, ಕನ್ನಡ ನಿಘಂಟು, ಸಂಪಾದಕ ಸಮಿತಿ, ಕನ್ನಡ ವಿಶ್ವಕೋಶ ಸಮಿತಿ, ಅಖಿಲ ಭಾರತ ವೀರಶೈವ ಮಹಾಸಭೆಯ ಕಾರ್ಯಸಮಿತಿ, ಲಿಂಗಾಯತ ಅಭಿವೃದ್ಧಿ ಸಮಿತಿ, ಮೈಸೂರು ಮುದ್ರಣಕಾರರ ಸಹಕಾರಸಂಘ, ಮೈಸೂರು ಸರ್ಕಾರದ ಗಡಿ ಸಲಹಾ ಸಮಿತಿ, ಇಂಥ ಅನೇಕಗಳೊಡನೆ ಸಂಪರ್ಕದಲ್ಲಿದ್ದು ತಮ್ಮ ಜೀವಿತಾವಧಿಯನ್ನು ನಾಡು-ನುಡಿಯ ಸೇವೆಗೆ ಮೀಸಲಿಟ್ಟು ಕಾರ್ಯವೆಸಗಿದರು. ಇವನ್ನೆಲ್ಲ ಗಮನಿಸಿದರೆ ಶಾಸ್ತ್ರಿಗಳು ತಮಗೆ ಸಂದ ಗೌರವ-ಬಿರುದು-ಪದವಿಗಳಿಗಿಂತ ಹೆಚ್ಚು ದೊಡ್ಡವರಾಗಿ ಕಾಣಿಸುತ್ತಾರೆ. ತಮ್ಮ ಪೂರ್ಣಾವಧಿ ಆಯಸ್ಸನ್ನೆಲ್ಲಾ ಕನ್ನಡ ಸಾಹಿತ್ಯ ಸೇವೆಗೆ ಸಮರ್ಪಿಸಿಕೊಂಡ ಇನ್ನೊಬ್ಬ ಮಹಾವ್ಯಕ್ತಿಯನ್ನು ಕಷ್ಟಪಟ್ಟು ಹುಡುಕಬೇಕಾಗುತ್ತದೆ.

ಶಿವಮೂರ್ತಿಶಾಸ್ತ್ರಿಗಳು ಸ್ವಯಂಘೋಷಿತ ಧರ್ಮ ಪ್ರಚಾರಕರೆಂಬಂತೆ ಸಾರ್ಥಕ ಜೀವನ ನಡೆಸಿದರು. ಲಿಂಗವಂತ ಧರ್ಮದ ತೀವ್ರಾಭಿಮಾನ ಅವರನ್ನು ವಿದ್ವಾಂಸರನ್ನಾಗಿ ರೂಪುಗೊಳಿಸಿತ್ತು. ತಮ್ಮ ಲಿಂಗೈಕ್ಯಾನಂತರದ ಶರೀರವನ್ನು ಶ್ರೀಸಿದ್ಧಗಂಗಾಕ್ಷೇತ್ರದಲ್ಲಿ ಮಣ್ಣು ಮಾಡಿ ಸಮಾಧಿ ಮಾಡಬೇಕೆಂಬ ಬಯಕೆಯಂತೆ ಅವರ ಸಮಾಧಿ ಶ್ರೀ ಸಿದ್ಧಗಂಗೆಯಲ್ಲಿದೆ.

ಸಿದ್ಧಗಂಗೆಯ ಬಗ್ಗೆ ಶಾಸ್ತ್ರಿಗಳು ಬಹಳ ಭಕ್ತಿಗೌರವಗಳನ್ನಿರಿಸಿಕೊಂಡಿದ್ದರು ತಾವು ಕನ್ನಡಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ನಲವತ್ತಾನಾಲ್ಕನೆಯ ಸಮ್ಮೇಳನವನ್ನು ಸಿದ್ಧಗಂಗೆಯಲ್ಲಿಯೇ ನಡೆಸಿದ್ದರು. ನಾಡಿನ

ಕವಿಗಳು, ವಾಗ್ಮಿಗಳು, ರಾಜಕಾರಣಿಗಳು, ಕಲಾವಿದರು ಸಿದ್ಧಗಂಗೆಯ ಪ್ರಭಾವಕ್ಕೆ ಒಳಗಾಗುವಂತೆ ಸಮ್ಮೇಳನದ ವ್ಯವಸ್ಥೆಯಾಗಿತ್ತು. ಧಾರ್ಮಿಕ ಕ್ಷೇತ್ರವೆಂಬ ಸೀಮಿತ ಪರಿಧಿಯಲ್ಲಿ ಹೆಸರುಗೊಂಡಿದ್ದ ಸಿದ್ಧಗಂಗೆ ಶಾಸ್ತ್ರಿಗಳ ಪ್ರಯತ್ನದಿಂದ ಸಾರಸ್ವತ ಕಾಶಿಯಾಗಿ ನಾಡಿನ ಗಮನ ಸೆಳೆಯಿತು.

ಶಿವಮೂರ್ತಿಶಾಸ್ತ್ರಿಗಳು ಶ್ರೀ ಶ್ರೀ ಶಿವಕುಮಾರಸ್ವಾಮಿಗಳ ಕೃಪಾ ಸ್ನೇಹಕ್ಕೆ ಪಾತ್ರರಾಗಿದ್ದರು ಸಿದ್ಧಗಂಗೆಯಲ್ಲಿ ನಡೆಯುತ್ತಿದ್ದ ಬೃಹತ್ ಸಮಾರಂಭಗಳಲ್ಲಿ ಶಾಸ್ತ್ರಿಗಳ ಭಾಷಣವಿದ್ದೇ ಇರುತ್ತಿತ್ತು. ಪ್ರಾರಂಭದ ಹಂತದಲ್ಲಿ ಶಾಸ್ತ್ರಿಗಳು ಅಟವೀಸ್ವಾಮಿಗಳ ಬಗ್ಗೆ ಲೇಖನಗಳನ್ನು ಬರೆದು ಪ್ರಕಟಿಸಿದರು ನಂತರ ಉದ್ದಾನ ಶಿವಯೋಗಿಗಳನ್ನು ಕುರಿತು ಬರೆದರು, ಆಮೇಲೆ ಶ್ರೀಶಿವಕುಮಾರಸ್ವಾಮಿಗಳಿಂದ ಲೇಖನವನ್ನು ಬರೆಯಿಸಿದರು. ತಾವು ಸಂಘಟಿಸಿದ 'ಸಂಸ್ಕೃತಿ' ಎಂಬ ವಿಚಾರ ಸಾಹಿತ್ಯ ಕೃತಿಯಲ್ಲಿ ಅನೇಕ ಗಣ್ಯ ಲೇಖಕರ ಮಧ್ಯೆ ಶ್ರೀ ಶ್ರೀ ಶಿವಕುಮಾರಸ್ವಾಮಿಗಳ ಲೇಖನವೂ ಸೇರಿಕೊಂಡಿತ್ತು. ಆ ಲೇಖನ ಬಹು ಮೌಲಿಕ ಸಂಗತಿಗಳನ್ನು ತಿಳಿಸುವ ಚಿಂತನಶೀಲ ಬರವಣಿಗೆಯೆಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ.

'ಸಂಸ್ಕೃತಿ' ಎಂಬ ಪುಸ್ತಕ ಸರ್ಕಾರದ ಸಂಸ್ಕೃತಿ ಇಲಾಖೆಯ ವತಿಯಿಂದಲೇ ಪ್ರಕಟವಾಗುವಂತೆ ಶಾಸ್ತ್ರಿಗಳು ನೋಡಿಕೊಂಡರು, ಕರ್ನಾಟಕ ಸಂಸ್ಕೃತಿಯ ಬಗ್ಗೆ ಅವರಿಗಿದ್ದ ಅಭಿಮಾನ ಮೇರು ಸದೃಶವಾದುದು. ಕರ್ನಾಟಕವನ್ನು ವೈಭವೀಕರಿಸಿ ಮಾತಾಡುವುದೆಂದರೆ ಶಾಸ್ತ್ರಿಗಳಿಗೆ ಇನ್ನಿಲ್ಲದ ಸ್ಫೂರ್ತಿ ಬಂದು ಬಿಡುತ್ತಿತ್ತು. ಶಾಸ್ತ್ರಿಗಳ ಮಾತಿನ ಮೋಡಿಗೆ ಸಭಿಕರು ಮಂತ್ರ ಮುಗ್ಧರಾಗಿ ಬಿಡುತ್ತಿದ್ದರು. ಅವರ ಭಾಷಣ ಕಾಲುದಾರಿಯ ನಡಿಗೆಯಂತ್ತಿರಲಿಲ್ಲ. ಮೈಸೂರಿನ ದಸರೆಯ ಅಂಬಾರಿಯ ಮೇಲೆ ಕುಳಿತ ರಾಜರಾಜೇಶ್ವರಿಯ ಮೆರವಣಿಗೆಯಂತಿರುತ್ತಿತ್ತು. ಸಭಾವತಃ ಕೀರ್ತಾನಕಾರರಾದ ಅವರು ಶೈಲಿಯನ್ನು ಬದಲಾಯಿಸಿಕೊಂಡು ವಿಚಾರಸಂಕೀರ್ಣಗಳ ಉಪನ್ಯಾಸದಂತೆ ಖಚಿತ ಆಧಾರಗಳನ್ನು ಉಲ್ಲೇಖಿಸಿ ವಿಚಾರ ಮಂಥನ ನಡೆಸುತ್ತಿದ್ದರು. ಅವರ ಅಧ್ಯಯನ ಶೀಲತೆಯನ್ನು ಅವರ ವಾಗ್ಧಾಲವೇ ಪ್ರಕಟ ಮಾಡುತ್ತಿತ್ತು. ಶಾಸ್ತ್ರಿಗಳ ಉಚ್ಚಾರಣೆಯಲ್ಲಿ ಕನ್ನಡ ವಾಗ್ದೇವಿ ವಾಕ್ಸುಂದರಿಯಾಗಿ ನಲಿದಾಡುತ್ತಿದ್ದಳು.

ಭಾಷಣ, ಉಪನ್ಯಾಸ, ಪ್ರವಚನ, ಇತ್ಯಾದಿಗಳೆಲ್ಲ ಒಂದೇ ಶಬ್ದದ ನಾನಾ ರೂಪಗಳೆಂದು ತಿಳಿಯುವುದಾದರೆ ಶಾಸ್ತ್ರಿಗಳ ವಾಗ್ಝರಿಗೆ ಇನ್ನೊಂದು ಹೆಸರು ಕೊಡಬೇಕಾಗಬಹುದು. ಮಾತನ್ನು ಸಾಹಿತ್ಯವಾಗಿಸುವ ಅಸಾಧಾರಣ ಪಾಂಡಿತ್ಯ ಶಾಸ್ತ್ರಿಗಳಿಗಿತ್ತು. ಹಾಗೆಂದು ಅವರ ಮಾತು ಪಾಮರರಿಂದ ದೂರ ಉಳಿಯುತ್ತಿರಲಿಲ್ಲ. ಪಾಮರರಿಗೆ ಪರಮಾನಂದವೆನಿಸುವ, ಪಂಡಿತರಿಗೆ ರಸಾನಂದವುಂಟು ಮಾಡುತ್ತಿದ್ದ ಅವರ ಮಾತುಗಳು ಕೇಳುಗರ ಜ್ಞಾನದೀವಿಗೆಗಳನ್ನು ಹೊತ್ತಿಸುತ್ತಿದ್ದವು. ಕನ್ನಡ ನಾಡಿನ ಬಗ್ಗೆ ಕನ್ನಡಿಗರು ಹೊಂದಬೇಕಾದ ಹೆಮ್ಮೆ, ಪ್ರೀತಿ, ಗೌರವಗಳನ್ನು ಶಾಸ್ತ್ರಿಗಳು ಜೀವನದುದ್ದಕ್ಕೂ ಸಾರಿ ಹೇಳುತ್ತಿದ್ದರು. ಕರ್ನಾಟಕ ಏಕೀಕರಣ, ಸ್ವಾತಂತ್ರ್ಯ ಚಳುವಳಿ, ಸಂಶೋಧನೆ, ಗ್ರಂಥಸಂಪಾದನೆ, ಇತ್ಯಾದಿಗಳನ್ನು ಕುರಿತು ಅವರು ಹೇಳುತ್ತಿದ್ದ ನುಡಿಗಳು ನಮಗೀಗಲೂ ಸ್ಫೂರ್ತಿಯಂತಾಗುತ್ತವೆ. ಕನ್ನಡ ನುಡಿ ನೈಪುಣ್ಯತೆಯಲ್ಲಿ ಶಿವಮೂರ್ತಿಶಾಸ್ತ್ರಿಗಳು ಸಾಗರದ

ಆಳದಂತೆ ಕಂಡರೆ, ಅ.ನ.ಕೃ ರವರು ಸಾಗರದ ವೈಶಾಲ್ಯತೆಯಂತೆ ಕಾಣಿಸುತ್ತಿದ್ದರು. ವೇಷದಲ್ಲಿ, ಭಾಷೆಯಲ್ಲಿ ಶಾಸ್ತ್ರಿಗಳು ಸನಾತನಿಯಾದರೆ ಅ.ನ.ಕೃ ರವರು ನೂತನರೆನಿಸುತ್ತಿದ್ದರು. ಬಿ.ಶಿವಮೂರ್ತಿಶಾಸ್ತ್ರಿಗಳು ಅನೇಕ ಬಿರುದುಗಳನ್ನು ಪಡೆದಿದ್ದರು. ಎಲ್ಲ ಬಿರುದುಗಳಿಗಿಂತ ಪಂಡಿತರತ್ನಂ' ಎಂಬ ಬಿರುದು ಅವರ ಪ್ರಭಾವಕ್ಕೆ ತುಂಬಾ ಹೊಂದಿಕೆಯಾಗುತ್ತಿತ್ತು. ಪ್ರಕೃತಿ ನಿಯಮಕ್ಕೆ ತಲೆಬಾಗಿ ಅವರು ನಮ್ಮಿಂದ ದೂರ ಹೋಗಿದ್ದಾರೆ. ಅವರ ಬರಹಗಳು ಹೊತ್ತಿಗೆಯ ರೂಪದಲ್ಲಿ ನಮ್ಮ ಕಣ್ಣೆದುರು ನಿಂತಾಗ ಅವರ 'ಇಲ್ಲವೆ'ಯ ಭಾವ ಶೂನ್ಯವಾಗಿಬಿಡುತ್ತದೆ. ನಮ್ಮೆದುರು ನಿಂತು ವಾದದ ಚೆಲುಮೆಯಂತಾಗಿ ಗೋಚರಿಸುತ್ತಲೇ ಇರುತ್ತಾರೆ. ಜನಪದ ಕವಿ ಹೇಳಿಕೊಂಡ ಮಾತು ಶಾಸ್ತ್ರಿಗಳ ವಿಷಯದಲ್ಲಿ ದಿಟವೆನಿಸುತ್ತಲೇ ಇರುತ್ತದೆ. "ಸತ್ತ್ಯುಳ್ಳ ಶರಣರು ಸತ್ತರೆಂದೆನಬೇಡ."…….

## ಅನುಬಂಧ - 1

## ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳಿಗೆ ಸಂದ ಬಿರುದುಗಳು ಪ್ರಶಸ್ತಿಗಳು

* ಕೀರ್ತನ ಕೇಸರಿ
* ಕವಿ ರತ್ನ
* ಶಿವ ಕೀರ್ತನ
* ಕವಿರಾಜ
* ಕೀರ್ತನಾಚಾರ್ಯ
* ಆಸ್ಥಾನವಿದ್ವಾನ್ (ಮೈಸೂರು ಸಂಸ್ಥಾನದಿಂದ) 1936
* ವಿದ್ಯಾವಾರಿಧಿ
* ಸಮಾಜ ಭಾಸ್ಕರ
* ವಿಮರ್ಶನಾಚಾರ್ಯ
* ಕರ್ನಾಟಕ ವಿಭೂಷಣ
* ಪಂಡಿತ ರತ್ನಂ - 1946
* ಪದ್ಮಶ್ರೀ - 1966
* ರಾಜ್ಯೋತ್ಸವ ಪ್ರಶಸ್ತಿ - 1975
* ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ - 1975.

# ಅನುಬಂಧ - 2

## ಬಿ. ಶಿವಮೂರ್ತಿಶಾಸ್ತ್ರಿಗಳ ಗ್ರಂಥಗಳು

* ವೀರಶೈವ ಸಾಹಿತ್ಯ ಮತ್ತು ಇತಿಹಾಸ - (ಭಾಗ 1-2-3-4)

* ಕರ್ನಾಟಕ ಸಂದರ್ಶನ. - (ಭಾಗ -1-2)

* ದುಂಬಿ ಮತ್ತು ನಾದ - (ಕವಿತೆಗಳು)

* ವೀರಶೈವ ಮಹಾಪುರಷರು

* ಶ್ರೀ ಮಾದೇಶ್ವರ ಚರಿತೆ

* ಮಹಾಕವಿ ಷಡಕ್ಷರದೇವ

* ಬಿದನೂರಪ್ರಭು ಶಿವಪ್ಪನಾಯಕ

* ಸರ್ವಜ್ಞ ಮೂರ್ತಿ

* ಮಹಾತ್ಮ ಕನಕದಾಸ

* ಮಹಾಕವಿ ಲಕ್ಷ್ಮೀಶ

* ಕರ್ನಾಟಕ ವಿಜಯ (ನಾಟಕ)

* ಕೆಳದಿರಾಣಿ ಚನ್ನಮ್ಮ (ನಾಟಕ)

* ಶರಣ ಚರಿತಮಾನಸ

* ಹರಿಹರ ಮತ್ತು ರಾಘವಾಂಕ

## ಸಂಪಾದಿತ ಗ್ರಂಥಗಳು

* ಕನ್ನಡ ಜೈಮಿನಿ ಭಾರತ

* ಕನಕದಾಸರ ಕೀರ್ತನೆಗಳು (ಇತರರೊಡನೆ)

* ಹರಿಭಕ್ತಿಸಾರ

* ಪುರಾತನ ತ್ರಿವಿಧಿ (ನಿಜಗುಣಶಿವಯೋಗಿ)

* ವೀರೇಶ ಚರಿತೆ (ಮಹಾ ಕವಿ ರಾಘವಾಂಕ)

* ಬಸವೋದಾ ಹರಣಂ. (ಪಾಲ್ಕುರಿಕೆ ಸೋಮನಾಥ)

* ಘನಲಿಂಗ ದೇವರ ವಚನಗಳು

* ತುರುಗಾಹಿ ರಾಮಣ್ಣನ ವಚನಗಳು

* ನ್ಯಾಯ ಶತಕ

* ಕನ್ನಡ ಕಲಿಸಿರುಮನ ಚರಿತೆ

* ಕನ್ನಡ ಆದಿತ್ಯಪುರಾಣ

* ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ (ಶಾಂತಲಿಂಗದೇಶೀಕ)

* ಗಣಸಹಸ್ರನಾಮಾವಳಿ - (ಪಾಲ್ಕುರಿಕೆ ಸೋಮನಾಥ)

* ಷಡಕ್ಷರ ಮಂತ್ರ ಮಹಿಮೆ - ಕೊಂಡಗುಳಿ ಕೇಶರಾಜ

* ಮಾದೇಶ್ವರ ಸಾಂಗತ್ಯ - ಗುರುಸಿದ್ದ ಕವಿ

* ಪಂಪಾಸ್ಥಾನ ವರ್ಣನಂ - ಅಷ್ಟಭಾಷಾಕವಿ ಚಂದ್ರಶೇಖರ

* ಕನ್ನಡ ಶತಕ ಸಾಹಿತ್ಯ

* ಬಸವಲಿಂಗ ನಾಮಾವಳಿ

* ಶರಣ ಬಸವರಗಳೆ

* ಕರ್ನಾಟಕ ಕವಿ ಚರಿತೆ ಭಾಗ - 1

* ಗಮಕ ಕಾವ್ಯಮಂಜರಿ....

# ಅನುಬಂಧ - 3

## ಬದುಕಿನ ಪ್ರಮುಖ ಘಟ್ಟಗಳು

* ಜನನ - 23-2-1903 (ಸೋಮವಾರ)
* ಹುಟ್ಟು ಹೆಸರು - ಕುಪ್ಪಯ್ಯಶಾಸ್ತ್ರಿ
* ತಂದೆ - ಹುಲುಕುಂಟೆ ಮಠದ ಬಸವಯ್ಯ ಸ್ವಾಮಿ (ತುಮಕೂರು)
* ತಾಯಿ - ನೀಲಮ್ಮನವರು
* ವಿದ್ಯಾಭ್ಯಾಸ - ತುಮಕೂರಿನ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ಕನ್ನಡ ಲೋಯರ್ ಸೆಕೆಂಡರಿ 1917
* ತಂದೆ ಲಿಂಗೈಕ್ಯ - 1918
* ಉಪಾಧ್ಯಾಯ ವೃತ್ತಿ - 1923 ರಿಂದ 1925 (ಗುಬ್ಬಿಯಲ್ಲಿ)
* ವಿವಾಹ - 1924 (ಶ್ರೀಮತಿ ಅನ್ನಪೂರ್ಣಮ್ಮ)
* ಬೆಂಗಳೂರಿಗೆ ಆಗಮನ - 1936
* ಆಸ್ಥಾನ ವಿದ್ವಾನ್ - 1936 (ಮೈಸೂರು ಅರಮನೆಯಿಂದ)
* ಶರಣ ಸಾಹಿತ್ಯ ಮಾಸಪತ್ರಿಕೆ - 1937
* ಸ್ವತಂತ್ರ ಕರ್ನಾಟಕ ವಾರಪತ್ರಿಕೆ - ಮುದ್ರಣಾಲಯ - 1939
* ಎರಡನೇ ವಿವಾಹ - 7-3-1943 - ಶ್ರೀಮತಿ ಮುದ್ದಮ್ಮ.
* ಪಂಡಿತರತ್ನಂ ಪದವಿ - 1946
* ಕನ್ನಡಸಾಹಿತ್ಯ ಪರಿಷತ್ತು ಅಧ್ಯಕ್ಷರು - 1956 ರಿಂದ 1974
* ದೇವಗಂಗೆ ಸಂಭಾವನಾ ಗ್ರಂಥ - 1968
* ಪತ್ನಿ ಶ್ರೀಮತಿ ಮುದ್ದಮ್ಮನವರ ಲಿಂಗೈಕ್ಯ - 1971
* ಲಿಂಗೈಕ್ಯ - 1976 - ಜನವರಿ 15.

* * * *